ಮನೋಹರ ಗ್ರಂಥಮಾಲೆಯ ೯೩ನೆಯ ಕುಸುಮ

ಪರಿವರ್ತನ

(ಮೂರಂಕಿನ ಸಮಸ್ಯಾತ್ಮಕ ನಾಟಕ)

ಬರೆದವರು :

ಜೇಂದ್ರೆ ಲಕ್ಷ್ಮಣರಾಯರು

ಡಿಸೆಂಬರ್ ೧೯೩೮

ಮನೋಹರ ಗ್ರಂಥ ಪ್ರಕಾಶನ ಸಮಿತಿ
ಧಾರವಾಡ

ಸಾಹಿತ್ಯ ವಿಷಯದಲ್ಲಿ ಸಲಹೆಗಾರರು :

ಶ್ರೀ. ದ. ರಾ. ಬೇಂದ್ರೆ ಎಂ. ಎ.
ಶ್ರೀ. ವಿ. ಕೃ. ಗೋಕಾಕ ಬಿ. ಎ., (ಆಕ್ಸಫರ್ಡ್)
ಶ್ರೀ. ರಂ. ಶ್ರೀ. ಮುಗಳಿ ಎಂ. ಎ., ಬಿ ಟಿ.

ಸಂಪಾದಕ :

ಜಿ. ಬಿ. ಜೋಶಿ

ಬೆಲೆ ೧—೧೨—೦

ಪ್ರಕಾಶಕರು :
ಜಿ. ಬಿ. ಜೋಶಿ
ಮನೋಹರ ಗ್ರಂಥಮಾಲಾ
ಧಾರವಾಡ

ಮುದ್ರಕರು :
ಎಸ್. ಎಸ್. ಬೆಂಗೇರಿ
ವಿಜಯ ಮುದ್ರಾಲಯ
ಧಾರವಾಡ

ಮುನ್ನುಡಿ

ಇದು ನಾಟಕ; ಆಡತಕ್ಕದ್ದು, ನೋಡತಕ್ಕದ್ದು. ಈಗಾಗಲೆ ಹಾಗೆ ಮಾಡಿ ನೋಡಿದ್ದೂ ಉಂಟು. ಪ್ರಯೋಗಸಿದ್ಧವಾದ ನಾಟಕವನ್ನು ಅಚ್ಚುಮಾಡಿ ಓದುಗರ ಕೈಯಲ್ಲಿಡುವುದು ಏಕೆ ಎಂದರೆ ಎರಡು ಕಾರಣಗಳನ್ನು ಹೇಳಬಹುದು— ಇದನ್ನು ಆಡಿ ನೋಡುವ ಸೌಲಭ್ಯ ಇನ್ನೂ ಹಲವರಿಗೆ ದೊರೆಯಲಿ ಎಂಬ ಬಯಕೆ ಒಂದು ಕಾರಣ; ನಾಟಕ ಎಂಬುದು ಲಲಿತ ಸಾಹಿತ್ಯದ ಒಂದು ರಮ್ಯರೂಪ, ಸಹೃದಯ ಸಾಮಾಜಿಕರು ಓದಿನಿಂದ ಕೂಡ ಅದರ ರಸವನ್ನು ಆಸ್ವಾದಿಸಬಲ್ಲರು ಎಂಬ ಗ್ರಹಿಕೆ ಇನ್ನೊಂದು ಕಾರಣ. "ಕಾವ್ಯೇಷು ನಾಟಕಂ ರಮ್ಯಂ" ಎಂದು ಒಪ್ಪಿಕೊಂಡ ನಾಡಿನಲ್ಲಿ ಹಲವಾರು ಕಾರಣಗಳ ಮೂಲಕ ನಾಟಕದ ದೀಪ ನಂದುತ್ತಾ ಇದೆ. ಕಂಪನಿ ನಾಟಕಗಳ ಕಾಲವಾಗಿ ಹೋದ ಮೇಲೆ ಚಲಚ್ಚಿತ್ರ-ವಾಕ್ಚಿತ್ರಗಳ ಏರಾಟದಲ್ಲಿ, ತಲೆಯೆತ್ತಿ ನಿಲ್ಲತಕ್ಕ ಸಾಮರ್ಥ್ಯ ನಮ್ಮ ನಾಟಕಗಳಿಗೆ ಉಳಿದಂತೆ ಕಾಣುವುದಿಲ್ಲ. ಸಭೆ-ಸಮ್ಮೇಲನ-ವಾರ್ಷಿಕೋತ್ಸವ-ಜಯಂತಿ ಮೊದಲಾದ ಸಂದರ್ಭಗಳಲ್ಲಿ ಮಾತ್ರ ಅನೇಕ ಕಾರ್ಯಕ್ರಮಗಳಲ್ಲೊಂದಾಗಿ, ಒಂದೋ ಎರಡೊ ನಾಟಕ ಹಾಗೂ ಹೀಗೂ ಆಗಿ ಹೋಗುವುದುಂಟು ನಾಟಕದ ನೈಜರೂಪ ಉಳಿದಿಲ್ಲ. ನಾಟಕ ಒಂದು ಕಲೆ, ಹಾಗೂ ಒಂದು ವ್ಯವಸಾಯ. ನಮ್ಮ ನಾಟಕ ಕೇವಲ ವ್ಯವಸಾಯವಾಗಿ ಹಿಂದೆ ಕೆಟ್ಟಿತು; ಕೇವಲ ಕಲೆಯಾಗಿ ಇಂದು ಕೆಡುತ್ತಾ ಇದೆ. ನಾಟಕಕಾರ, ಕಲಾವಿದ, ಸಾಮಾಜಿಕ—ಈ ತ್ರಿಮೂರ್ತಿಗಳ ಮೈತ್ರಿಗೆ ಹೊಸ ಮುಖ ಮೂಡಬೇಕಾಗಿದೆ. ನಮ್ಮ ಜೀವನದಲ್ಲಿ ಉಂಟಾದ ಮಾರ್ಪಾಡುಗಳನ್ನು ಅನುಲಕ್ಷಿಸಿ, ನಮ್ಮ ಆವಶ್ಯಕತೆ, ಅದನ್ನು ಪೂರೈಸುವ ಅನುಕೂಲತೆ, ಅವೆರಡನ್ನೂ ಅಳವಡಿಸಿಕೊಳ್ಳುವ ಹದ- ಇವು ಮೂರನ್ನೂ ಅರಿತುಕೊಂಡು ಈಗಿನ ನಾಟಕ ಮುಂದುವರೆಯಬೇಕು. ಈ ದೃಷ್ಟಿಯಿಂದ ಕನ್ನಡದಲ್ಲಿ ಬಗೆಬಗೆಯ ಪ್ರಯೋಗಗಳೂ ನಡೆದಿವೆ. ಈ ನಾಟಕ ಅಂತಹ

ಒಂದು ಪ್ರಯೋಗ. ಜನತೆಯ ಎದುರಿಗೆ ಇದನ್ನಿಟ್ಟು ಇದರ ಸಾಧ್ಯಾಸಾಧ್ಯತೆಯನ್ನು ನಿರ್ಣಯಿಸಿಕೊಳ್ಳುವುದೂ ಇದರ ಒಂದು ಉದ್ದೇಶವಾಗಿದೆ. ಹೀಗೆ ಹೇಳಿದ ಮಾತ್ರಕ್ಕೆ ಈ ನಾಟಕ ಒಂದು ಆದರ್ಶವೆಂದು ಅರ್ಥವಲ್ಲ.

ಹಳೆಯ ನಾಟಕಕ್ಕೂ ಹೊಸದಕ್ಕೂ ಹಲವಾರು ವ್ಯತ್ಯಾಸಗಳಿವೆ. ರಂಗಸ್ಥಳ, ಕಥೆ, ಪಾತ್ರ, ವಿಧಾನ, ವೇಳೆ—ಎಲ್ಲವೂ ಹೊಸ ಕಾಲದ ಹದಕ್ಕೆ ಹೊಂದಿಕೊಳ್ಳಬೇಕಾಗಿದೆ. ನಮ್ಮ ಜೀವನದ ಮುಖಕ್ಕೆ ಕನ್ನಡಿ ಹಿಡಿಯತಕ್ಕ ನಾಟಕಕಾರ ನಮ್ಮ ಈಗಿನ ಸಾಮಾಜಿಕ ಸಮಸ್ಯೆಯನ್ನು ನೇರವಾಗಿ ನಿರೂಪಿಸುವುದಕ್ಕೆಹೊರಟಿರುವುದರಿಂದ, ದೃಶ್ಯ,ವೇಷ,ಸಂಭಾಷಣೆ, ಸಂವಿಧಾನ ಎಲ್ಲದರಲ್ಲೂ ಸರಳತೆ ವಾಸ್ತವಿಕತೆಗಳೆ ಕಂಡುಬರುತ್ತವೆ. ಇದು ಎರಡು ರೀತಿಯಿಂದ ಗುಣ: ಒಂದು–ಪ್ರೇಕ್ಷಕನಲ್ಲಿ ಅಪನಂಬಿಗೆಗೆ ಆಸ್ಪದ ದೊರೆಯದ ಮೂಲಕ ನಾಟಕಕಾರನ ಉದ್ದೇಶ ಈಡೇರುವ ಸಂಭವ ಹೆಚ್ಚು; ಎರಡು–ಆಡುವವರಿಗೆ ಆಯಾಸವಿಲ್ಲ. ರಂಗಸ್ಥಳದಲ್ಲಿ ''ಟ್ರಾನ್ಸಫರ್ ಸೀನರಿ'' ಮಾಡುವ ಶ್ರಮವಿಲ್ಲ; ಕುದುರೆ, ಆನೆ, ಗಿಡ-ಮರಗಳನ್ನು ತಂದು ನಿಲ್ಲಿಸುವ ಅತಿವಾಸ್ತವತೆಯ ಆಡಂಬರವಾಗಲಿ, ನಿರ್ಜೀವ ಚಿತ್ರಗಳನ್ನು ನಿಲ್ಲಿಸಿ ಆಭಾಸವನ್ನುಂಟು ಮಾಡುವ ಭಯವಾಗಲಿ ಇದರಲ್ಲಿಲ್ಲ. ಆದರೆ ಇದರಿಂದ ನಾಟಕಕಾರನು ಹೆಚ್ಚಿನ ಭಾರವನ್ನು ಹೊರಬೇಕಾಗುತ್ತದೆ. ಕಣ್ಣು-ಕಿವಿಗಳೆರಡನ್ನೂ ಸೆಳೆದುಕೊಂಡು ಸಾಗಬೇಕಾದ ದೃಶ್ಯಕಾವ್ಯದಲ್ಲಿ ದೃಶ್ಯವೈಭವವನ್ನು ತೊಡೆದು ಹಾಕಿದರೆ, ಅದರಿಂದುಂಟಾದ ಎಲ್ಲ ಕೊರತೆಯನ್ನೂ ನಾಟಕಕಾರನು ತನ್ನ ನಾಟಕದ ವೇಗ, ಪಾತ್ರದ ಪರಿಪಾಕ, ಹಾಗೂ ಮಾತಿನ ಮೋಡಿಯಿಂದ ತುಂಬಿಕೊಡಬೇಕಾಗುತ್ತದೆ. ಹೊಸ ನಾಟಕ ಹೆಚ್ಚು ಹೆಚ್ಚಾಗಿ ಸಾಮಾಜಿಕವಾಗುತ್ತಿರುವುದಕ್ಕೆ, ವಾಸ್ತವಿಕವಾಗುತ್ತಿರುವುದಕ್ಕೆ, ಮಾತಿನ ಮಿಂಚು ಮತ್ತೆ ಮತ್ತೆ ಮಸೆದಾಡುವುದಕ್ಕೆ ಇದೇ ಕಾರಣ. ನೋಡುತ್ತಿರುವ ನಾಟಕದಲ್ಲಿ ಪ್ರೇಕ್ಷಕನಿಗೆ ಆತ್ಮೀಯತೆ ಉಂಟಾಗಬೇಕಾದರೆ ಅವನಿಗೆ ಅತಿನಿಕಟವಾದ ಜೀವನದ ದರ್ಶನ, ಆ ಮೂಲಕ ಪರ್ಯಾಯಕ್ರಮದಿಂದ ನಮ್ಮನ್ನು ನಾವೆ ಅರಿತುಕೊಳ್ಳುವ ಅವಕಾಶ ಒಂದು ಕಾಲದಲ್ಲಿ ವಿಶೇಷವಾಗಿ ಇತ್ತು. ಯಂತ್ರಯುಗದ, ತಾಳ್ಮೆಗೆಟ್ಟ ಮನಸ್ಸು ಅದನ್ನೂ ಕಳೆದುಕೊಳ್ಳುತ್ತಾ ಇದೆ. ಈಗಿನ ಸಾಮಾಜಿಕ ಕೇಳತಕ್ಕ ಮೂರು ಮಾತು

ಇವು:— "ಹೇಳುವುದನ್ನು ನೇರವಾಗಿ ಹೇಳು; ಸ್ವಲ್ಪದರಲ್ಲಿ ಹೇಳು; ನನ್ನ ಜೀವನಕ್ಕೆ ಅದರಿಂದ ಲಾಭವಿದ್ದರೆ ಮಾತ್ರ ಹೇಳು."

ಶ್ರೀ. ಬೇಂದ್ರೆ ಲಕ್ಷ್ಮಣರಾಯರು ಸಾಮಾಜಿಕನ ಈ ಮೂರೂ ಮಾತುಗಳಿಗೆ ತಮ್ಮ ಸಣ್ಣ ಕತೆಗಳ ಮೂಲಕ ಉತ್ತರ ಕೊಟ್ಟಿದ್ದಾರೆ. ಆದರೆ ಅದು ಓದುಬಲ್ಲ ವಿಚಾರವಾದಿಗಳಿಗೆ ಮಾತ್ರವಾಯಿತು. ಜನತೆಯ ಮುಖಕ್ಕೆ ಮುಖವಾಗಿ ನಿಂತು, ನೇರವಾಗಿ ಮಾತಾಡಬಲ್ಲ ಹಾದಿ ನಾಟಕ ಓದಲಾರದ ಬಹುಸಂಖ್ಯಾಕ ಸಮಾಜ ಈ ಅನುಕ್ತ ಬೇಡಿಕೆಗಳನ್ನು ಇಟ್ಟು ಕೊಂಡು ಎದುರು ನೋಡುತ್ತಾ ಇದೆ ನಾಟಕಕಾರರಾಗಿ, ನಟರಾಗಿ ಹಾಗೂ ಸೂತ್ರಧಾರಿಯಾಗಿ ಶ್ರೀ. ಬೇಂದ್ರೆಯವರು "ಪರಿವರ್ತನ"ವನ್ನು ಪ್ರಯೋಗಿಸಿದರು. ನಾಲ್ಕಾರು ಕಡೆಗೆ ಇದನ್ನು ಯಶಸ್ವಿಯಾಗಿ ಪ್ರಯೋಗಿಸಿ ನೋಡಿದ್ದರಿಂದ, ಅವರ ಈ ನಾಟಕದ ಪ್ರಯೋಗಸಿದ್ಧಿಯ ಬಗ್ಗೆ ಸಂಶಯ ಉಳಿಯುವ ಕಾರಣವಿಲ್ಲ. ಈ ಸಿದ್ಧಿಗೆ ಕಾರಣ, ಇದರ ಕಥೆಯೇ ? ಪಾತ್ರಗಳೆ ? ಸನ್ನಿವೇಶಗಳೆ ? ಸಂವಿಧಾನವೆ ? ರಂಗಸ್ಥಲದ ಸಂಯೋ-ಜನೆಯೆ ? ಅಭಿನಯದ ಕೌಶಲ್ಯವೆ ? ಇಂಥದು ಎಂದು ಹೇಳುವುದು ಧಾರ್ಷ್ಟ್ಯವಾದೀತು. ಇವೆಲ್ಲ ಸಿದ್ಧಿಗೆ ಸಹಾಯಕಾರಿಗಳಾದರೂ ಎಲ್ಲವನ್ನೂ ಮೀರಿ ಕಾಣತಕ್ಕದ್ದು ಅದರಲ್ಲಿಯ "ಪರಿವರ್ತನ"-ದರ್ಶನ

ಪ್ರಣಯದ ನಿರಂತರ ಸಮಸ್ಯೆ ಹಳೆ ಹೊಸ ಪೀಳಿಗೆಗಳು ತಿಕ್ಕಾಟ ಮಾಡುತ್ತಿರುವ ಈ ಸಂಧಿಕಾಲದಲ್ಲಿ ಹೇಗೆ ನಿಲ್ಲುತ್ತದೆಯೆಂಬುದು ಇಲ್ಲಿಯ ವಸ್ತು. ಹಣ, ಕುಲ, ಶೀಲ—ಯಾವುದೇ ದೃಷ್ಟಿಯಿಂದ ಇದ್ದವರದೊಂದು ನೆಲೆ, ಇಲ್ಲದವರದೊಂದು ನೆಲೆ. ಅಲ್ಲಿಯ ಗಂಡು, ಇಲ್ಲಿಯ ಹೆಣ್ಣು ಪ್ರಣಯದಲ್ಲಿ ತೊಡಕಿಕೊಂಡು, ಬೇರೆ ಬೇರೆ ಲೋಕದ ಎರಡು ಜೀವ ಎರಡೂ ಕಡೆಗೆ ಹೊಂದಲಾರದೆ ಹರಿದಾಡಿದಂತೆ, ಹೃದಯ ಹರಿದು ಕೊಂಡು ಹಾರಾಡುತ್ತವೆ. ವಸುಧೆ ಹೆತ್ತ ಸುಧೆಗಾಗಿ ವಿಶ್ವಂಭರವಾದ ಪ್ರೇಮಜೀವ ಹಂಬಲಿಸುತ್ತದೆ; ಸಮಾಜದ ವಿಶ್ವನಾಥರು ಅದಕ್ಕೆ ಅಡ್ಡ ಬರುತ್ತಾರೆ. "ನೀತಿಯ ಜಾತಿ ನೋಡಬೇಕಲ್ಲದೆ ಜಾತಿಯ ನೀತಿ ಹಿಡಿಯ ಬೇಡ" ಎಂದು ವಸುಧೆ ಹೇಳಿದರೆ, "ಹುಟ್ಟಿದ ಕುಲ ದೊಡ್ಡದು," ಎಂದು

ಹಿರಿಯರು ಹೇಳುತ್ತಾರೆ. ತರುಣಜೀವ ಅಧೀರವಾಗುತ್ತದೆ. ಮೂರು ಜೀವಗಳಲ್ಲಿ ಒಳತೋಟಿ—ಧರ್ಮಸಂಕಟ ಆರಂಭವಾಗುತ್ತದೆ. ಪರಂಪರೆ—ವಾತ್ಸಲ್ಯ, ಪಿತೃಭಕ್ತಿ—ಆದರ್ಶಪ್ರಣಯ, ಪ್ರೇಮ—ತ್ಯಾಗ; ಈ ಮೂರು ಬಗೆಯ ಹೋರಾಟಕ್ಕೆ ಮೂಲಕಾರಣವಾದ ವ್ಯಕ್ತಿಯೆ ಪರಿವರ್ತನ ಹೊಂದಿ ಈ ಸಮಸ್ಯೆಯನ್ನು ಬಗೆಹರಿಸುತ್ತದೆ. ಈ ವ್ಯಕ್ತಿ ನಾಟಕದಲ್ಲಿ ಕಾಣದಿರುವ 'ತಾಯಿ'. ಆಕೆ ಅಂತಃಕರಣದ ಒಂದು ಪ್ರತೀಕ. ಸಮಾಜ ಗೌತಮ ಮುನಿಯಂತೆ ಕೆಲವರನ್ನು ಶಾಪ ಕೊಟ್ಟು ಕೆಡವಿದೆ. ಅದಕ್ಕೆ ಭಗವಂತನ ಪಾದಸ್ಪರ್ಶವಾದಾಗ ಮಾತ್ರ ಪುನಃ ಪೂರ್ವಗೌರವ ದೊರೆಯಬೇಕು; ಆ ಭಗವಂತನೇ ಅಂತಃಕರಣ. ರಾಷ್ಟ್ರಜಾತ್ಯತೀತವಾಗಬೇಕೆಂಬ ಈ ಕಾಲದಲ್ಲಿ ಈ ಮಾತನ್ನು ಮೊದಲು ಅರಿಯಬೇಕಾಗಿದೆ. ಮನೋವೃತ್ತಿಯ ಪರಿವರ್ತನ ಕಾಯದೆ-ಕಾನೂನುಗಳಿಂದ ಆಗಲಾರದು; ಅಂತಃಕರಣ ಅರಳಬೇಕು.

ಸಮಾಜ ಪರಿವರ್ತನ ಹೊಂದುತ್ತಾ ಇದೆ. ಕುಲ, ಧನ, ಸಂಪ್ರದಾಯಗಳ ಗೌರವಕ್ಕೆ ಅಂಟಿಕೊಂಡಿದ್ದರೂ ಕೂಡ ಮಗನಿಗಾಗಿ ಹೊಸ ಕಾಲದ ವಿಚಾರಗಳಲ್ಲಿ ಸಹಾನುಭೂತಿ ತೋರಬಲ್ಲ, ಒರೆಗೆ ಹಚ್ಚಿದರೆ ಎಲ್ಲವನ್ನೂ ಬಿಟ್ಟುಕೊಡಬಲ್ಲ ವಿಶ್ವನಾಥರಾಯರು, ಈ ಪರಿವರ್ತನದ ಒಂದು ಮುಖ. ಕುಲಗೌರವದ ಬೆಂಬಲವಿಲ್ಲದಿದ್ದರೂ, ಶೀಲ-ಸತ್ಯಗಳ ಆಧಾರದಿಂದ ಸಮಾಜವನ್ನು ಪ್ರತಿಭಟಿಸಿ ನಿಂತು, ತನ್ನ ವ್ಯಕ್ತಿತ್ವವನ್ನು ಕಾಯ್ದುಕೊಳ್ಳಬಲ್ಲ, 'ಅಬಲೆ'ಯೆಂಬ ಅಪಕೀರ್ತಿಯನ್ನು ತೊಡೆದು ಹಾಕಿ ಸ್ವತಂತ್ರವಾಗಿ ತಲೆಯೆತ್ತಿ ನಿಲ್ಲಬಲ್ಲ ಧೈರ್ಯ ಸ್ತ್ರೀಯರಲ್ಲಿ ಜಾಗೃತವಾಗುತ್ತಾ ಇದೆ. ವಸುಧಾಬಾಯಿ ಈ ಪರಿವರ್ತನದ ಇನ್ನೊಂದು ಮುಖ. ಅಧೀರನಂತೆ ಕಂಡರೂ ಆದರ್ಶವೆಂದು ಕಂಡದ್ದನ್ನು ಅಚಲವಾಗಿ ನಂಬಿ ನಿಲ್ಲಬಲ್ಲ ತರುಣ ಪೀಳಿಗೆಯ ಪ್ರತಿನಿಧಿ ವಿಶ್ವಂಭರ. ಸಂಕ್ರಮಣ ಕಾಲದ ಈ ಮೂರು ಮುಖಗಳನ್ನು ಎತ್ತಿಹಿಡಿದು, ಈ ವಿವಿಧಶಕ್ತಿಗಳ ಸಂಘರ್ಷಣೆಯಿಂದ ಉಂಟಾಗುವ ಸಮಸ್ಯೆಯನ್ನು ಚಿತ್ರಿಸುವುದು "ಪರಿವರ್ತನ"ದ ಮೇಲ್ಮೆ ವ್ಯಕ್ತಿಗಳ, ವಿಚಾರಗಳ ತಾಕಲಾಟದ ಮೂಲಕ ನಾಟಕದ ಮೋಡಿ

ಬೆಳೆಯುತ್ತದೆ; ಉಳಿಯುತ್ತದೆ. ಈ ಮೂರು ಪಾತ್ರಗಳು ಸತ್ಯಜೀವನದಿಂದ ಆರಿಸಿಕೊಂಡ ವ್ಯಕ್ತಿಗಳಾದರೂ, ಅವುಗಳಲ್ಲಿ ಈ ಸಾಂಕೇತಿಕ ಅಂಶ ಹೆಚ್ಚಾಗಿರುವ ಮೂಲಕವೆ ಅವರ ಮಾತು ತುಸು ದೀರ್ಘವಾಗಿ, ವಿಚಾರಭೂಯಿಷ್ಟವಾಗಿ ಬರುತ್ತವೆಯೆಂದು ಕಾಣುತ್ತದೆ.

ವಿಶ್ವನಾಥರಾಯರ ಮನೋವೃತ್ತಿಯಲ್ಲಾದ ಪರಿವರ್ತನ ವೈಯಕ್ತಿಕವಾದ ಆವಶ್ಯಕತೆಯಿಂದ ಹುಟ್ಟಿದ ಸಾಂದರ್ಭಿಕ ಸಂಗತಿಯಲ್ಲ. ಸಮಾಜದಲ್ಲಿ ಸಾಮೂಹಿಕವಾಗಿ ಆಗಬೇಕಾದ ಪರಿವರ್ತನದ ಒಂದು ಪ್ರತೀಕ ಅದು. ವಸುಧೆ, ಸುಧೆ, ವಿಶ್ವಂಭರರ ವಿಷಯವೂ ಹೀಗೆ ಪ್ರಾತಿನಿಧಿಕ ಸ್ವರೂಪದ್ದು. ಸಮಾಜ ತನ್ನಲ್ಲಿ ಆಗುತ್ತಿರುವ ಮಾರ್ಪಾಟುಗಳನ್ನು ಗುರುತಿಸಿಕೊಂಡು, ತಿದ್ದಿಕೊಳ್ಳಬೇಕಾದ ತಾವು ಯಾವುದೆಂಬುದನ್ನು ಕಂಡುಕೊಳ್ಳಲಿ ಎಂಬ ಉದ್ದೇಶದಿಂದ ನಾಟಕಕಾರರು ಈ ಕನ್ನಡಿ ಹಿಡಿದಿದ್ದಾರೆ. ಕೈಯಲ್ಲಿ ಕನ್ನಡಿ ಇರುವಾಗ ಹೆರವರು ಹೇಳುವುದೇನು ?

ಧಾರವಾಡ ೪-೮-೧೯೪೮ —ರಾ. ಕು.

ಕೃತಜ್ಞತೆ

ಆಡುವದಕ್ಕೂ ಓದುವದಕ್ಕೂ ಯೋಗ್ಯವಾದ ಈ 'ಪರಿವರ್ತನ' ನಾಟಕವನ್ನು ಶ್ರೀಮಾನ್ ಬೇಂದ್ರೆ ಲಕ್ಷ್ಮಣರಾಯರು ಗ್ರಂಥಮಾಲೆಗಾಗಿ ಬರೆದು ಕೊಟ್ಟು, ನಾವು ಕೈಕೊಂಡ ಸಾಹಸದ ಕಾರ್ಯಕ್ಕೆ ಶಕ್ತಿಯನ್ನು ತಂದು ಕೊಟ್ಟಿದ್ದಾರೆ; ಮುಂದಿನ ದಾರಿಗೆ ಬೆಳಕನ್ನು ಹಿಡಿದಿದ್ದಾರೆ. ಅದಕ್ಕಾಗಿ ನಾವು ಅವರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ.

ಮುನ್ನುಡಿಯನ್ನು ಬರೆದು ಕೊಟ್ಟ ಶ್ರೀಮಾನ್ ಆರ್. ವ್ಹಿ. ಕುಲಕರ್ಣಿ ಎಂ.ಎ. ಅವರಿಗೂ ಸುಂದರ ಹೊದಿಕೆ ಚಿತ್ರವನ್ನು ಬರೆದು ಕೊಟ್ಟ ಶ್ರೀಮಾನ್ ರಾಘವೇಂದ್ರರಿಗೂ ನಮ್ಮ ಕೃತಜ್ಞತೆಯ ವಂದನೆಗಳು.

—ಸಂಪಾದಕ

ಬರೆಹಗಾರನ ಮಾತು

ಕನ್ನಡದಲ್ಲಿ ಸಾಹಿತ್ಯಿಕ ದೃಷ್ಟಿಯಿಂದಲೂ ಜನರಂಜನೆಯ ದೃಷ್ಟಿಯಿಂದಲೂ ಯೋಗ್ಯವೆನಿಸುವ ನಾಟಕಗಳ ಕೊರತೆಯನ್ನು ಕೆಲಮಟ್ಟಿಗಾದರೂ ಹೋಗಲಾಡಿಸಲು ತಾವೊಂದು ಯೋಜನೆಯನ್ನು ಕೈಕೊಂಡಿರುವದಾಗಿ ಶ್ರೀ. ಜೋಶಿಯವರು ಸಾರಿದ್ದಾರೆ. ಅವರ ಯೋಜನೆಯಲ್ಲಿ ಒಳ್ಳೆಯವಾದ ನೂರು ನಾಟಕಗಳನ್ನಾದರೂ ಬರೆಯಿಸಿ ಪ್ರಕಟಿಸುವದು ಮತ್ತು ಅವನ್ನು ಒಮ್ಮೆಯಾದರೂ ರಂಗಭೂಮಿಯ ಮೇಲೆ ತರುವದು—ಇವೆರಡು ಉದ್ದೇಶಗಳು ಮುಖ್ಯವಾಗಿವೆ.

ಇಂಥ ನೂರು ನಾಟಕಗಳ ಪಟ್ಟಿಯಲ್ಲಿ ಸೇರಿದ ನಾಟಕ—'ಪರಿವರ್ತನ'. ನೀತಿಗಿಂತಲೂ ಜಾತಿಗೆ ಬಂದಿರುವ ಅವಾಸ್ತವ ಮಹತ್ತ್ವ, ಅದರಿಂದ ಪ್ರೇಮದ ಸಂಬಂಧಕ್ಕೆ ಉಂಟಾಗುವ ವ್ಯತ್ಯಯ, ನೀತಿಯಿಂದಲೇ ಬಾಳಬೇಕೆನ್ನುವವರು ಎದುರಿಸಬೇಕಾದ ಕಷ್ಟನಷ್ಟಗಳು ಇವು ಈ ನಾಟಕದ ಹೂರಣ. ನಾಯಕಿ ಹಾಗು ಅವಳ ತಾಯಿಯ ಚಾರಿತ್ರ್ಯದ ಬಗ್ಗೆ ಕೊನೆಯ ವರೆಗೂ ಕುತೂಹಲವು ಹೆಚ್ಚುತ್ತ ಹೋಗುವಂತೆ ಪ್ರಯತ್ನಿಸಲಾಗಿದೆ. ಈ ಚಮತ್ಕಾರವೇ ಇದರ ಮುಖ್ಯ ಆಕರ್ಷಣ. ನಾಟಕದ ಕೊನೆಯ ಬಗ್ಗೆ ಭಿನ್ನಾಭಿಪ್ರಾಯಗಳು—ಅದನ್ನು ಅಭಿನಯಿಸಿ ತೋರಿಸಿದಾಗ—ವ್ಯಕ್ತವಾದದ್ದುಂಟು. ಜೀವನದಲ್ಲಿ ಯಾವ ಸುಖವೂ ಕೇವಲ ಪರಿಪೂರ್ಣ ಸುಖವೇ ಇರುವದಿಲ್ಲೆಂಬುದು ಅನುಭವದ ಮಾತು. ಎಂಥ ಸುಖದಲ್ಲಿಯೂ ದುಃಖದ ಅಂಶವು ಇದ್ದೇ ಇರುವದು. ಈ ನಾಟಕದ ಕೊನೆ ಅದರದೇ ಒಂದು ರೂಪ. ಸಾವಿನ ಹೆದರಿಕೆಯಿಂದ ಹುಟ್ಟಿದ ಸಮಸ್ಯೆ ಸಾವಿನಿಂದಲೇ ಕೊನೆಗೊಳ್ಳುವದು.

ಹೋದ ವರ್ಷ ಸ್ವಾತಂತ್ರ್ಯದಿನದ ಶುಭಪ್ರಸಂಗದಲ್ಲಿ, ಧಾರವಾಡದಲ್ಲಿ 'ಕಲೋಪಾಸಕ ಮಂಡಲ' ಎಂಬ ಒಂದು ಸಂಸ್ಥೆಯು

ಇಂಥ ನಾಟಕಗಳನ್ನು ಒಮ್ಮೆಯಾದರೂ ರಂಗದ ಮೇಲೆ ತರುವ ಉದ್ದೇಶವನ್ನಿಟ್ಟುಕೊಂಡು ಸ್ಥಾಪಿತವಾಯಿತು. ಮಂಡಲದ ಸದಸ್ಯರು ಅತ್ಯಂತ ಪರಿಶ್ರಮ ವಹಿಸಿ ಧಾರವಾಡ, ಹುಬ್ಬಳ್ಳಿ, ಗದಗು, ಬಾಗಲಕೋಟೆ ಈ ಊರುಗಳಲ್ಲಿ ಈ ನಾಟಕವನ್ನು ಜನಮೆಚ್ಚುವಂತೆ ಅಭಿನಯಿಸಿ ತೋರಿಸಿದರು. ಮಂಡಲದ ಈ ಎಲ್ಲ ಸದಸ್ಯರಿಗೂ ನನ್ನ ಬೇಡಿಕೆಯನ್ನು ಮನ್ನಿಸಿ ಲಾಲಿತ್ಯಪೂರ್ಣವಾದ ಹಾಡುಗಳನ್ನು ಕಟ್ಟಿಕೊಟ್ಟ ಶ್ರೀ. ಆನಂದಕಂದರಿಗೂ ನಾನು ತುಂಬ ಋಣಿಯಾಗಿದ್ದೇನೆ. ಹಾಗೆಯೇ ಕವಿ ಅಂಬಿಕಾತನಯದತ್ತರ ಎರಡು ಕವನಗಳನ್ನು ಈ ನಾಟಕದಲ್ಲಿ ಬಳಸಿಕೊಳ್ಳಲಾಗಿದೆ ಅವರಿಗೂ ನಾನು ಉಪಕೃತ

ಭಾವೋದ್ದೀಪಕ ಸಮಯೋಚಿತ ಸಂಗೀತವಿದ್ದರೆ ನಿಜವಾಗಿ ನಾಟಕ ಕಳೆಕಟ್ಟುತ್ತದೆ! ಈ ನಾಟಕದಲ್ಲಿ ಔಚಿತ್ಯ ಮೀರದಂತೆ ಸಂಗೀತವನ್ನು ಬಳಸಿಕೊಂಡಿದೆ.

ಕನ್ನಡ ಸಾಹಿತ್ಯದ ಆಳವಾದ ಅಭ್ಯಾಸಿಗರೂ ರಸಿಕ ವಿಮರ್ಶಕರೂ ಆದ ಶ್ರೀ. ಆರ್. ವಿ. ಕುಲಕರ್ಣಿಯವರು ಇದಕ್ಕೊಂದು ಮುನ್ನುಡಿಯನ್ನು ಬರೆದು ನನ್ನ ಮೇಲೆ ಉಪಕಾರ ಮಾಡಿದ್ದಾರೆ.

ಗೆಳೆಯರಾದ ಶ್ರೀ. ಜೋಶಿಯವರು ತಮ್ಮ ಮಾಲೆಯಲ್ಲಿ ಈ ನಾಟಕಕ್ಕೆ ಸ್ಥಾನವನ್ನು ಕೊಟ್ಟು ಪ್ರಕಟಿಸಿದ್ದಾರೆ. ಅವರನ್ನು ನಾನು ಸ್ಮರಿಸದಿರುವದು ಶಕ್ಯವೇ?

ಧಾರವಾಡ, ೪-೮-೧೯೪೮ **ಬೇಂದ್ರೆ ಲಕ್ಷ್ಮಣರಾಯ**

ಪಾತ್ರಗಳು

೧	ವಿಶ್ವನಾಥರಾಯರು	....	ಪ್ರತಿಷ್ಠಿತ ವಕೀಲ
೨	ವಿಶ್ವಂಭರ	....	ವಕೀಲರ ಮಗ
೩	ದತ್ತ	....	ವಿಶ್ವಂಭರನ ಸ್ನೇಹಿತರು
೪	ದಿಗಂಬರ		
೫	ಶೇಷಪ್ಪ	....	ವಿಶ್ವನಾಥರಾಯರ ಕಾರಕೂನ
೬	ಬಿಷ್ಟಂಭಟ್ಟ	....	ಶೇಷಪ್ಪನ ಬಾಲ್ಯಸ್ನೇಹಿತ
೭	ಡಾ. ಗುಣಾಜಿ	....	ರಾಯರ ಮನೆಯ ಡಾಕ್ಟರರು
೮	ಸುಧಾ	....	ವಿಶ್ವಂಭರನ ಕಾಲೇಜ ಗೆಳತಿ
೯	ವಸುಧಾಬಾಯಿ	....	ಸುಧೆಯ ತಾಯಿ
೧೦	ನಂದಾ	....	(ವಕೀಲರ ಸಾಕುಮಗಳು)

(ಆಳು, ಕಂಪನಿ ಏಜಂಟ್, ಭಟ್ಟ, ಮುಂತಾದವರು)

ಅರ್ಪಣ

ನನ್ನ ತಾಯಿಗೆ

ಪರಿವರ್ತನ ನಾಟಕವು ಕಲೋಪಾಸಕ ಮಂಡಲದ ಸದಸ್ಯರಿಂದ

ಧಾರವಾಡ (೨೮-೯-೧೯೪೭)

ಗದಗು (೧೮-೧೦-೧೯೪೭)

ಹುಬ್ಬಳ್ಳಿ (೯-೧೧-೧೯೪೭)

ಬಾಗಿಲುಕೋಟೆ (೧೮-೧-೪೮)

ಈ ನಾಲ್ಕು ಊರುಗಳಲ್ಲಿ ಅಭಿನಯಿಸಲ್ಪಟ್ಟಿತು.

ಆಗ ಪಾತ್ರವಹಿಸಿದವರು :

ವಿಶ್ವನಾಥರಾಯರು		ಶ್ರೀ. ಜಿ. ಜಿ. ಪುರಾಣಿಕ, ಬಿ. ಎ., ಜಿ. ಡಿ. ಎ.
ವಿಶ್ವಂಭರ	....	ಶ್ರೀ. ಭೀಮಸೇನ ಜೋಶಿ
ದತ್ತ	....	ಶ್ರೀ. ವಿ. ಎಚ್. ಲಕ್ಷ್ಮೇಶ್ವರ, ಬಿ. ಎ. ಶ್ರೀ. ಪಿ. ಎಂ. ಮಂಗಳವೇಢೆ, ಬಿ. ಎಸ್ಸಿ.
ದಿಗಂಬರ	....	ಶ್ರೀ. ಕೆ. ಟಿ. ಮುನಗೂಳಿ
ಬಿಷ್ಟಂಭಟ್ಟ	....	ಶ್ರೀ. ಶ್ರೀನಿವಾಸ ಪರ್ವತಿ
ಶೇಷಪ್ಪ	....	ಶ್ರೀ. ಕೃಷ್ಣಾಚಾರ್ಯ ಪೂಜಾರ
ಡಾ. ಗುಣಾಜಿ	....	ಶ್ರೀ. ರಾಮಾಚಾರ್ಯ ಜೋಶಿ
ವಸುಧಾಬಾಯಿ	....	ಶ್ರೀ. ಬಿ. ಬಿ. ತೊರಗಲ್
ಸುಧಾ	....	ಕು. ಅಂಬಕ್ಕ ಕಡಕೋಳ ಕು. ಮಾಲತಿ ಪೈ
ನಂದಾ	....	ಕು. ಮಾಲತಿ ಪೈ ಕು. ಕೃಷ್ಣಾ ಕಲಘಟಗಿ
ಕಂ. ಏಜಂಟ	....	ಶ್ರೀ. ನಾರಾಯಣ ಜೋಶಿ, ಬಿ. ಎಸ್ಸಿ. ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ., ಬಿ. ಟಿ. ಶ್ರೀ. ವಿ. ನಾಥನ್

ಪರಿವರ್ತನ

ಅಂಕ ೧

ಪ್ರವೇಶ ೧

[ವಕೀಲ ವಿಶ್ವನಾಥರಾಯರ ಬೈಠಕ್ ಖಾನೆ. ಒಂದು ಪಕ್ಕಲಿಗೆ ಅರಿವೆಗಳನ್ನಿಡುವ ಚೆಸ್ಟ್ ಆಫ್ ಡ್ರಾಅರ್ಸ್. ಅದರ ಮೇಲೊಂದು ಮುಖ ನೋಡಿಕೊಳ್ಳುವ ನಿಲುಗನ್ನಡಿ; ಇನ್ನೊಂದು ಪಕ್ಕಲಿಗೆ ಸೋಫಾ ಸೆಟ್ಟು, ಟೀಪಾಯ್ ಇತ್ಯಾದಿ. ಒಂದು ಗಾದಿಯ ಕುರ್ಚಿಯ ಮೇಲೆ ವಿಶ್ವಂಭರ ಕುಳಿತಿದ್ದಾನೆ. ವಿಶ್ವನಾಥರಾಯರು ಶತಪದ ಇಕ್ಕುತ್ತ ಮಗನನ್ನುದ್ದೇಶಿಸಿ ಮಾತನಾಡುತ್ತಿದ್ದಾರೆ]

ವಿಶ್ವ— ಆಲ್ಲೊ, ಎಂ. ಎ. ಮುಗಿಯಲಿ, ಎಂ. ಎ. ಮುಗಿಯಲಿ ಅಂತ ಅಡ್ಡೀ ತೋರಿಸ್ತಾ ಇದ್ದೀ; ಎಂ. ಎ. ಮುಗಿಯಲಿಕ್ಕೆ ಬೇಕಾಗಿದ್ದಾದರೂ ಎಷ್ಟು ದಿವಸ ? ಇನ್ನಾರು ತಿಂಗಳಲ್ಲಿ ಪರೀಕ್ಷೆ ಮುಗಿದು ಪರಿಣಾಮ ಸಹ ತಿಳಿದು ಹೋಗ್ತದ. ಪರದೇಶಕ್ಕೆ ಹೋಗುವ ಪಾರಾಯಣೊಂದು, ದಿನ ಬೆಳಗಿದರ ನಡದs ಅದ ನಿನ್ನದು. ಅದೇನs ಇರಲಿ, ಭವಿತವ್ಯ ಇದ್ದಂತೆ ಆಗ್ತದ. ಯಾರ ಅದೃಷ್ಟಕ್ಕ ಅವರೇ ಹೊಣೆಗಾರರು; ಆದರೂ ನಮ್ಮ ಹೊಟ್ಟೆಲೆ ಹುಟ್ಟಿ ಬಂದೀದಿ. ನಮ್ಮ ಕರ್ತವ್ಯ ಅಂತ ನಾವು ಮಾಡಲೇಬೇಕು. ನಿನ್ನನ್ನ ಅಕ್ಕರತೆಯಿಂದ ಬೆಳೆಸಿದೆ, ಅಕ್ಷರಸ್ಥನನ್ನಾಗಿ ಮಾಡಿದೆ. ಇನ್ನ ಸಂಸಾರವೊಂದು ಕೊರಳಿಗೆ ಕಟ್ಟಿಬಿಡೋದು. ನಾವು ಮಾಡದಿದ್ದರ ಅದು ಆಗೋದಿಲ್ಲಂತಲ್ಲ. ಆದರೂ ಮಗನ ಮದಿವಿ ಅಂಬೋದೊಂದು ಹೆಮ್ಮೆಯ ವಿಷಯ. ಸಂತೋಷದ ಸೀಮಾಂತರ.

ನಿನ್ನ ಲಗ್ನದ ವಿಚಾರ ಒಂದು ತಿಂಗಳಿಂದ ನನ್ನ ತಲೆಯಲ್ಲಿ ಸುಳಿದಾಡ್ತಾ ಇದೆ. ಆದಷ್ಟು ಬೇಗ ಈ ಕಾರ್ಯ ಮುಗಿಸಿಬಿಡಬೇಕೆಂಬ ನಿರ್ಧಾರಕ್ಕೂ ಬಂದಿದ್ದೇನೆ. ಅದಕ್ಕೆ ಇನ್ನೊಂದು ಮಹತ್ತ್ವದ ಕಾರಣವೂ ಇದೆ. (ವಿಶ್ವಂಭರ ಟೀಪಾಯಿಯ ಮೇಲಿನ ಪತ್ರಿಕೆಯನ್ನು ಎದ್ದು ಹೋಗಿ ತಂದು ಅದನ್ನು ನೋಡತೊಡಗುವನು) ನನ್ನ ಮಾತಿನ ಕಡೆಗೆ ಲಕ್ಷ್ಯವೇ ಇಲ್ಲ ನಿನ್ನದು ವಿಶು !

ವಿಶು— ಹಾಗೇನೂ ಇಲ್ಲ. ಕೇಳ್ತಾ ಇದ್ದೇನೆ.

ವಿಶ್ವ— ಇದು ರೇಡಿಯೋದ ಭಾಷಣದಂತೆ, ಕೇಳಿ ಮರೆತು ಬಿಡುವ ವಿಷಯವಲ್ಲ. ನಿನ್ನ ಲಗ್ನದ ವಿಚಾರ ನಾನು ಹೇಳ್ತಾ ಇದ್ದೇನೆ.

ವಿಶು— ತಿಳೀತು. ನನ್ನ ಲಕ್ಷ್ಯ ಇದೆ.

ವಿಶ್ವ— ಹಾಗಾದರೆ ನಿನ್ನ ವಿಚಾರವೇನು ? ಏನಿದೆ ನಿನ್ನ ಮನಸ್ಸಿನಲ್ಲಿ?

ವಿಶು— ಅದೇ............ (ಅನುಮಾನಿಸುತ್ತ) ಅಮೇರಿಕಾಕ್ಕೆ ಹೋಗಿ ಬಂದ ಮೇಲೆಯೇ..................................

ವಿಶ್ವ— ಈ ಮಾತು ಎಷ್ಟೂ ನನಗೆ ಒಪ್ಪಿಗೆಯಿಲ್ಲ ಅಮೇರಿಕಾಕ್ಕೆ ಹೋಗಲು ನನ್ನ ಅಡ್ಡಿಯಿಲ್ಲ. ಆದರೆ ಅಲ್ಲಿಂದ ಬಂದ ಮೇಲೆಯೇ ಮದುವೆ ಎನ್ನುವ ವಿಚಾರಕ್ಕೆ ನಾನು ಸಂಪೂರ್ಣ ವಿರೋಧಿಯಾಗಿದ್ದೇನೆ.

ವಿಶು— ಕೊನೆಗೆ ಎಂ. ಎ. ಮುಗಿಯುವವರೆಗಾದರೂ ಮುಂದೆ ಹಾಕಬೇಕೆಂದು...............

ವಿಶ್ವ— ನಿನ್ನ ಇಚ್ಛೆ ಇರಬಹುದು ಈಗಲೇ ವಿವಾಹವಾದರೆ ನಿನ್ನ ವಿದ್ಯಾಭ್ಯಾಸಕ್ಕೆ ವಿಘ್ನವಾದೀತೆಂದು ನನಗನಿಸುವದಿಲ್ಲ. ಹಾಗೆನಿಸಿದರೆ ವಧುವನ್ನು ಸದ್ಯಕ್ಕೆ ತವರುಮನೆಯಲ್ಲಿಯೇ ನಾವು ಬಿಟ್ಟುಬಿಡಬಹುದು.

ವಿಶು— ಈಗಲೇ ಆಗಬೇಕೆಂಬ ಆತುರ ಯಾಕೆ ? ಆರು ತಿಂಗಳೆಂದರೆಯೇನು ದೀರ್ಘ ಕಾಲಾವಧಿಯಲ್ಲ. ಈಗ ಮದುವೆಯೆಂದರೆ ಸುಮ್ಮನೆ ಕಾಲಹರಣ; ಅಭ್ಯಾಸದಲ್ಲಿ ವ್ಯತ್ಯಯ..

ವಿಶ್ವ— ನಿನಗೇನು ಮಾಡಬೇಕಾಗಿದೆ ? ಮದುವೆಯ ಸಿದ್ಧತೆಗಾಗಿ ಮಾಡಬೇಕಾದದ್ದನ್ನೆಲ್ಲ ನಾನು ಮಾಡುತ್ತೇನೆ. ಮದುವೆಯ ದಿನ

ಬಾಸಿಂಗ ಕಟ್ಟಿಕೊಂಡು ಬಂದು ನಿಲ್ಲುವದಷ್ಟೇ ನಿನ್ನ ಕೆಲಸ. ಮೇಲಾಗಿ ಮದುವೆಯಾಗಬೇಕೆಂಬುದೊಂದೇ ನನ್ನ ಆಗ್ರಹವಾಗಲಿ, ನನ್ನ ಒಪ್ಪಿಗೆಯ ವಧುವನ್ನೇ ನೀನು ಮದುವೆಯಾಗಬೇಕೆಂದೂ ನನ್ನ ಹಟವಿಲ್ಲ! ಆ ವಿಷಯ ಸಂಪೂರ್ಣ ನಿನಗೇ ಬಿಟ್ಟು ಕೊಡುತ್ತೇನೆ. ಕುಲ ಶೀಲ ನೋಡಿ ಕನ್ನೆಯ ರನ್ನು ಕರೆಯಿಸುತ್ತೇನೆ. ನಿನಗೆ ಸರಿಕಂಡ ಕನ್ನೆಯನ್ನಾರಿಸು.

ವಿಶು— ಈ ಕನ್ನೆಯರನ್ನು ನೋಡುವದು—ಗೀಡುವದು ಅಂದರೆ ಸುಮ್ಮನೆ ಅದರಲ್ಲಿ ಹೊತ್ತು................

ವಿಶ್ವ— ನೀನು ಆಟದಲ್ಲಿ, ಹರಟೆಯಲ್ಲಿ ಹೊತ್ತು ಕಳೆಯುವದಿಲ್ಲ ವೇನು ? ೨೪ ಗಂಟೆ ಅಭ್ಯಾಸವನ್ನೇ ಬೇರೆ ಮಾಡುವದಿಲ್ಲವಲ್ಲ ?

ವಿಶು— ಅದೇನೂ ಇಲ್ಲ. ದೊಡ್ಡ ಪರೀಕ್ಷೆ....ಕ್ಲಾಸ್ ಬೇರೆ ಸಿಗ ಬೇಕೂಂತ ಪ್ರಯತ್ನ....

ವಿಶ್ವ— ಅದಕ್ಕೇನೂ ತೊಂದರೆಯಾಗದ ಹಾಗೆ ನಾನು ಸಿದ್ಧತೆ ಮಾಡ್ತೇನೆ, ತಿಳಿಯಿತೇ ?

ವಿಶು— ಅಣ್ಣಾ, ಈ ಕನ್ನೆಯನ್ನಾರಿಸುವ ಈಗಿನ ರೀತಿ ನನಗೆಷ್ಟೂ ಒಪ್ಪಿಗೆಯಿಲ್ಲ.

ವಿಶ್ವ— ಒಳ್ಳೇದು, ನಿನ್ನ ದೃಷ್ಟಿಯಿಂದ ಅದರಲ್ಲಿ ಸುಧಾರಣೆ ಅಥವಾ ಬದಲಾವಣೆ ಏನಾಗಬೇಕು ? ಅದನ್ನು ಹೇಳು. ನಮ್ಮ ಮಟ್ಟಿಗೆ ನಾವದನ್ನು ಜಾರಿಯಲ್ಲಿ ತರೋಣ.

ವಿಶು— ಇಲ್ಲ, ಈ ಪದ್ಧತಿಯೇ ನನಗೆ ಸರಿಯೆನಿಸುವದಿಲ್ಲ !

ವಿಶ್ವ— ಹಾಗಾದರೆ ಕನ್ನೆಯನ್ನಾರಿಸುವ ನಿನ್ನ ಹೊಸವಿಧಾನವೇನು, ಅದನ್ನಾದರೂ ಹೇಳು.

ವಿಶು— ಆರಿಸುವ ಮಾತೇ ಇಲ್ಲ. ಗಂಡು ಹೆಣ್ಣು ಪರಸ್ಪರರು ಪ್ರೇಮದ ಸ್ಥಾನ-ಮಾನಗಳನ್ನು ಕಂಡು, ಒಪ್ಪಿ, ವಿವಾಹಬದ್ಧರಾಗಬೇಕು.

ವಿಶ್ವ— ಇದು ನೋಡು, ವಿಶು. ಇದರ ಯುಕ್ತಾಯುಕ್ತತೆಯ ತಾತ್ವಿಕ ವಾದಕ್ಕೆ ನಾವು ಕುಳಿತಿಲ್ಲ. ಈ ಪದ್ಧತಿಯನ್ನವಲಂಬಿಸಿದ

ಪಾಶ್ಚಾತ್ಯರಲ್ಲಿಯೂ ನಡೆಯುವ ವಿವಾಹಗಳು ಸುಖಕರವಾಗಿಲ್ಲ. ಯಾವ ಪದ್ಧತಿಯೂ ಪರಿಪೂರ್ಣವಾಗಿಲ್ಲ. ನಮ್ಮ ಸಮಾಜದಲ್ಲಿ, ಈಗ ರೂಢವಾಗಿರುವ ಪದ್ಧತಿ—ಅದು ಹ್ಯಾಗೇ ಇದ್ದರೂ—ನಮಗೆ ಸದ್ಯಕ್ಕೆ ಒಳ್ಳೆಯದು. ಹೊಸತನ್ನು ಮಾಡಹೋಗಿ ಅತೋಭ್ರಷ್ಟಸ್ತತೋಭ್ರಷ್ಟಃ ಎನ್ನುವಂತಾದವರೂ ಸಾಕಷ್ಟು ಜನರಿದ್ದಾರೆ. ಅಂಥ ದಾರ್ಶನಿಕನ ಯೋಗ್ಯತೆ ಇದ್ದವನೇ ಇದಕ್ಕೆ ಕೈಹಾಕಬೇಕು. ಅದು ನನ್ನ ನಿನ್ನಂಥವರ ತುತ್ತಲ್ಲ. ಸಮಾಜ ಬದಲಾದ ಹಾಗೆ, ತನ್ನ ರೂಢಿ-ನಿಯಮಗಳನ್ನು ತಾನೇ ಬದಲು ಮಾಡಿಕೊಳ್ಳುತ್ತದೆ. ಈಗಿರುವ ಪದ್ಧತಿಯಾದರೂ ಬದಲಾವಣೆ ಹೊಂದಿದ ಪದ್ಧತಿಯೇ; ಅದೇನು ರಾಮಾಯಣ ಮಹಾಭಾರತ ಕಾಲದ್ದಲ್ಲ!

[ಡಾ. ಗುಣಾಜಿ ಬರುತ್ತಾರೆ.] ಓ, ನಮಸ್ತೆ ಡಾಕ್ಟರ್!

ಡಾ. ಗುಣಾಜಿ— ನಮಸ್ತೆ. ನಮ್ಮ ಪೇಶಂಟ್ ಏನೆನ್ನುತ್ತಾರೆ?

ವಿಶ್ವ— ಯಥಾಪ್ರಕಾರ! ನಿದ್ದೆ ಸರಿಯಾಗಿ ಬರಲಿಲ್ಲವಂತೆ; ತಲೆಯ ಹಿಂಭಾಗದಲ್ಲಿ ತುಂಬ ಶೂಲಿ ಎಂದು ಹೇಳಿದಳು. ರಾಮಾ (ರಾಮು ಬರುತ್ತಾನೆ.) ಡಾಕ್ಟರು ಬಂದಾರ ಅಂತ ತಿಳಿಸು. ನೋಡಿಕೊಂಡು ಬನ್ರಿ, ಡಾಕ್ಟರ್! ಅಮೇರಿಕೆಯಿಂದ ಔಷಧ ಬಂತೇನು? ಏರ್‌ಮೇಲಿನಿಂದ ಬರುವದಿತ್ತಲ್ಲ?

ಡಾ— ಇನ್ನೂ ವರೆಗೂ ಬಂದಿಲ್ಲ. ಒಂದೆರಡು ದಿನಗಳಲ್ಲಿ ಬರಬಹುದು. ಒಳ್ಳೇದು, ನೋಡಿಕೊಂಡು ಬರ್ತೇನೆ— (ಒಳಗೆ ಹೋಗುವರು.)

ವಿಶ್ವ— ನಿನ್ನ ತಾಯಿಯ ಜಡ್ಡು ಹಿಮ್ಮೆಟ್ಟುವ ಲಕ್ಷಣವೇನಿಲ್ಲ. ಅದನ್ನೂ ನೀನು ಲಕ್ಷ್ಯದಲ್ಲಿ ತರಬೇಕು. ಸೊಸೆಯನ್ನು ನೋಡಬೇಕು ಎಂದು ಆಕೆಗೆ ಅದೆಷ್ಟು ಆತುರ? ಇದೊಂದು ಆಶೆಗಾಗಿ ತಾನು ಜೀವ ಹಿಡಿದಿದ್ದೇನೆ ಎಂದು ಮಾತು ಮಾತಿಗೂ ಅವಳು ಅನ್ನುತ್ತಿರುವದು ನಿನಗೆ ಗೊತ್ತೇ ಇದೆ. ಸೊಸೆಯನ್ನು ನೋಡಿ ಅವಳು ಸಾಯಲಿ ಎನ್ನುವ ಅಭಿಪ್ರಾಯವಲ್ಲ. ಆಕೆಗೆ ಗುಣವಾಗಲಿ ಎಂದು ಮಾಡತಕ್ಕದ್ದನ್ನೆಲ್ಲ ಮಾಡುತ್ತಾ ಇದ್ದೇವೆ. ಆದರೂ ಕಿರುಕುಳ ವ್ಯಾಧಿಯಲ್ಲ. ಗುಣವಾದರೆ ನಮ್ಮ

ಅದೃಷ್ಟವೇ. ಆಗದೆ ಹೋದರೆ ಅವಳ ಆಸೆ—ಕೊನೆಯ ಆಸೆ—ಮರಣ ಕಾಲದ ಆಸೆ—ಅತೃಪ್ತವಾಗಿ ಉಳಿದು, ಕರ್ತವ್ಯಚ್ಯುತಿಯ ಪಾಪಕ್ಕೆ ನೀನು ಗುರಿಯಾಗಬೇಕಾದೀತು; ವಿಚಾರಮಾಡು !

ವಿಶು— ಹುಂ, ಇದೇ ಮಗನ ಕರ್ತವ್ಯ ಎಂದು ನನಗೆನಿಸುವದಿಲ್ಲ.

ವಿಶ್ವ— ಅನೇಕ ಕರ್ತವ್ಯಗಳಲ್ಲಿ ಇದೂ ಒಂದು. ಯಾರ ಋಣ ತೀರಿದರೂ ತಾಯಿಯ ಋಣ ತೀರಲಾರದು, ವಿಶು !

ವಿಶು— ನಾನು ಒಪ್ಪುತ್ತೇನಣ್ಣಾ. ತನಗೆ ಸೊಸೆ ಬರಬೇಕೂ—ಎಂಬ ಆಸೆಯೊಂದಿಗೆ, ನಮ್ಮ ದಾಂಪತ್ಯ ಸುಖಿಯಾಗಬೇಕೆಂಬ ಅಪೇಕ್ಷೆ ಅಕ್ಕಗೆ ಇರಲಾರದೆ ?

ವಿಶ್ವ— ಆಕೆಗೊಬ್ಬಳಿಗೇ ಯಾಕೆ ? ನನಗೂ ಆ ಅಪೇಕ್ಷೆ ಇದೆ. ಹಳೆಯ ಪದ್ಧತಿಯಂತೆ ಆದ ಮದುವೆಗಳೆಲ್ಲ ದುಃಖಕ್ಕೊಳಗಾಗಿವೆ ಎಂದು ನೀನು ತಿಳಿದಿದ್ದರೆ, ಅದು ತೀರ ತಪ್ಪು ಕಲ್ಪನೆ ! ವಿಶು, ಪ್ರೇಮವಿವಾಹದ ಪದ್ಧತಿಗೆ ನಾನು ಸರ್ವಥಾ ವಿರುದ್ಧವಾಗಿಲ್ಲ. ಆದರೆ ಅದು ಸಾರ್ವತ್ರಿಕವಾಗಿ ಆಚರಣೆಯಲ್ಲಿ ಬರುವ ಮಾತಲ್ಲ. ಸಮಾಜ ಸುಸಂಸ್ಕೃತವಾಗಿ ಸಮಾನ ಸ್ವಾತಂತ್ರ್ಯಕ್ಕೆ ಅವಕಾಶ ದೊರೆತಾಗ, ಈ ರೀತಿ ಯುಕ್ತವೆನಿಸಬಹುದು. ಸದ್ಯದ ಮಟ್ಟಿಗಂತೂ ಇಂಥ ವಿವಾಹಗಳ ಅನುಭವ ಕಟುವಾಗಿಯೇ ಇದೆ.

ವಿಶು— ನೀನು ಅಂಥಾ ಉದಾಹರಣೆಗಳನ್ನೇ ನೋಡಿರಬಹುದು; ಎಂದ್ಶ ಹೀಗೆ ನಿನ್ನ ಅಭಿಪ್ರಾಯವಾಗಿದೆ. ಅತ್ಯಂತ ಪ್ರೀತಿಯಿಂದ ಬಾಳಿದವರೂ ಅನೇಕರಿದ್ದಾರೆ !

ವಿಶ್ವ— ಇರಬಹುದು. ಇರಲಿಕ್ಕಿಲ್ಲ ಎಂದು ನಾನು ಹೇಳಲಾರೆ. ಸದ್ಯಕ್ಕೆ ನಿನ್ನ ಮದುವೆಯ ಬಗ್ಗೇ ನಾವು ಯೋಚನೆ ಮಾಡುತ್ತಾ ಇದ್ದೇವೆ. ಉಳಿದ ಪಂಚಾಯತಿ ನಮಗೇತಕ್ಕೇ ?

ಡಾ— (ಪ್ರವೇಶಿಸಿ) ಏನೋ ಚರ್ಚೆ ನಡೆದಿದೆಯಲ್ಲ ? ಯಾರ ಮದುವೆಯ ವಿಷಯ ?

ವಿಶ್ವ— ಇನ್ನಾರದು ? ವಿಶ್ವಂಭರನದೇ ! ಬೇಗ ಮುಗಿಸಿಬಿಡಬೇಕೆಂದು ನಮ್ಮ ವಿಚಾರ. ತನ್ನ ಕಣ್ಣೆದುರಿಗೇ ಜರುಗಬೇಕೆಂದು ಇವನ ತಾಯಿಯ ಆಸೆ. ಅದನ್ನು ನಾವೆಷ್ಟೂ ದುರ್ಲಕ್ಷಿಸುವ ಹಾಗಿಲ್ಲ. ನಿಮ್ಮ ಮತವೇನು ಡಾಕ್ಟರೇ ?

ಡಾ—ಅವರ ಪ್ರಕೃತಿಯನ್ನನುಲಕ್ಷಿಸಿ ಹೇಳುವದಾದರೆ, ತಿಂಗಳೊಪ್ಪತ್ತಿನಲ್ಲಿ ಮುಗಿಸಿಬಿಡುವದುಚಿತ ! ಹೆಚ್ಚು ದಿನ ಮುಂದೆ ಹಾಕಬೇಡಿ ವ್ಯಾಧಿ ನಮ್ಮ ಕೈಮೀರಿ ನಿಂತಿದೆ. ದೇವರು ಕರುಣಾದೃಷ್ಟಿಯಿಂದ ನೋಡಿದರೆ, ಇದರೊಳಗಿಂದಲೂ ಪಾರಾಗಿ ಅವರು ರೋಗಮುಕ್ತರಾಗಬಹುದು. ಮಾನವ ಬುದ್ಧಿಗೆ ಶಕ್ಯವಾದದ್ದನ್ನೆಲ್ಲ ನಾನು ಮಾಡುತ್ತಾ ಇದ್ದೇನೆ. ಈಗ ಪ್ರಕೃತಿ ನೋಡಿದೆ. ಇಂದು ಇಂಜಕ್ಶನ್ ಯಾವುದೂ ಬೇಡ. ಬೇರೆ ಔಷಧ ಕೊಟ್ಟಿದ್ದೇನೆ. ಒಳ್ಳೇದು, ಬರ್ಲೇ ? ಒಂದು ಅರ್ಜಂಟ್ ಕೇಸ್ ಇದೆ. ಹೋಗಬೇಕು.

ವಿಶ್ವ— ಆಗಲಿ, ನಮಸ್ಕಾರ. ಸಾಯಂಕಾಲ ಬರ್ತೀರಲ್ಲ ?

ಡಾ— ಹೌದು— (ಹೋಗುವರು)

ವಿಶ್ವ— ಕೇಳಿದೆಯಾ ಡಾಕ್ಟರು ಹೇಳಿದ್ದನ್ನು ? ನಿನಗೆ ಜನ್ಮಕೊಟ್ಟು ಪಾಲನೆ ಪೋಷಣೆ ಮಾಡಿ, ಬೆಳೆಯಿಸಿದ್ದಕ್ಕೆ ಪ್ರತಿಯಾಗಿ ನಿನ್ನಿಂದ ಯಾವುದನ್ನೂ ನಾವು ಇದುವರೆಗೆ ಅಪೇಕ್ಷಿಸಿಲ್ಲ ನಾವು ಮಾಡುತ್ತ ಬಂದಿರುವದೆಲ್ಲ—ನಿನ್ನ ಸುಖಕ್ಕಾಗಿ, ನಿನ್ನ ಹಿತಕ್ಕಾಗಿ. ಮದುವೆಯಾದರೂ ನಿನ್ನ ಸುಖಕ್ಕಾಗಿಯೇ. ಆದರೆ ಅದನ್ನು ನಾವು ನೋಡುವಂತಾದರೆ, ನಮಗೊಂದು ಆನಂದ ! ಇಷ್ಟು ಕೂಡ ನೀನು ನಮಗಾಗಿ ಮಾಡದೆ ಹೋದರೆ ನಮ್ಮ ದುರದೃಷ್ಟ ! ಬೇರೆಯೇನು ? (ದುಃಖಿತರಾಗುವರು.)

ವಿಶು— ಅಣ್ಣಾ, ನಾನು ಸುಖಿಯಾಗಬೇಕು ಎಂದು ನಿಮ್ಮ ಅಪೇಕ್ಷೆ ಇದೆಯಲ್ಲ? ಬುಟ್ಟಿಯಲ್ಲಿಯ ಪೇರಲಹಣ್ಣು ಆರಿಸಿದ ಹಾಗೆ ಯಾವುದೋ ಹೆಣ್ಣನ್ನಾರಿಸಿ ಮದುವೆಯಾಗಿಬಿಡುವ ಈ ಗತಾನುಗತಿಕರ ಅಂಧಾನುಕರಣ ನನ್ನ ಮಟ್ಟಿಗಂತೂ ನಾನು ಮಾಡಲಾರೆ. ಅದರಿಂದ ನನ್ನ ಬಾಳು ಹಸಗೆಟ್ಟರೆ ?

ವಿಶ್ವ— ಇದು ನೋಡು, ವಿಶು ! ಮಾತಿನಲ್ಲಿ ಹೆಚ್ಚು ಚರ್ಚೆ ನನಗೆ ಬೇಡಾಗಿದೆ. ಅವಳ ಅನಾರೋಗ್ಯ ಚಿಂತಾಜನಕವಾಗಿರುವದನ್ನು ನೀನು ನೋಡುತ್ತಾ ಇದ್ದೀ. ಯಾವುದೇ ರೀತಿಯಿಂದ ನೀನು ವಧುವನ್ನಾರಿಸು. ನಿನ್ನ ತಾಯಿಯ ಅಪೇಕ್ಷೆಗೆ ಮನ್ನಣೆ ಕೊಡಬೇಕೆಂದಿದ್ದರೆ, ಈ ತಿಂಗಳು ಮುಗಿಯುವದರೊಳಗಾಗಿ ನಾವು ಮದುವೆಯನ್ನು ಮುಗಿಸಿಬಿಡಬೇಕು. ಮುಂದಿನ ತಿಂಗಳಲ್ಲಿ ಮದುವೆಗೆ ಮುಹೂರ್ತಗಳಿಲ್ಲ ! (ವಿಚಾರಮಾಡಿ) ಇನ್ನೊಂದು ಮಾತು ಹೇಳ್ತೀನೆ— ಈ ಪ್ರೇಮವಿವಾಹ ಎಂದು ನೀನು ಬೇರೆ ಯಾವ ಜಾತಿಯ ಹೆಣ್ಣನ್ನಾದರೂ ಕಟ್ಟಿಕೊಂಡು ಬಂದರೆ, ನನಗದೆಷ್ಟೂ ಸರಿಬರಲಿಕ್ಕಿಲ್ಲ. ಈಕೆಯಂತೂ ಅಂಥದನ್ನು ಕೇಳಿದರೆ ಪ್ರಾಣವನ್ನೇ ಕಳೆದುಕೊಂಡಾಳು ! ಹುಷಾರಿ ! ಈಗಾಗಲೇ ನೀನು ಎಲ್ಲಿಯೂ ಅಂಥ ಪ್ರೇಮದಲ್ಲಿ ತೊಡಕಿಲ್ಲವಲ್ಲ ? ಏನು ?.... ತೊಡಕಿಲ್ಲವಲ್ಲ ?

ವಿಶು— (ತಡವರಿಸುತ್ತ) ಇಲ್ಲ........ಇಲ್ಲ........ಹಾಗೇನೂ ಇಲ್ಲ—

ರಾಮು— (ಪ್ರವೇಶಿಸಿ ಅಪ್ಪಾ ಅವರ, ಅವ್ವಾ ಅವರು ಕರಿತಾರ್ರಿ. ಯಾರಾದರೂ ಒಬ್ಬರು ಬರಬೇಕಂತ್ರಿ !

ವಿಶ್ವ— ನೀನೇ ಹೋಗಿ ಬಾ, ವಿಶು. ನನಗೆ ತುಸು ಹೊರಗೆ ಹೋಗುವ ಜರೂರಿಯ ಕೆಲಸ ಇದೆ.

(ವಿಶ್ವಂಭರ ಹೋಗುವನು. ಶೇಷಪ್ಪ ಬರುವನು.)

ಶೇ— (ರಾಯರಿಗೆ ನಮಸ್ಕರಿಸಿ) ರಾಮನಾಥರಾಯರಿಗೆ ತಿಳಿಸಿದೆ. ಹುಡುಗಿ ಮುಂಬಯಿಯಲ್ಲಿದ್ದಾಳಂತೆ; ನಾಲ್ಕಾರು ದಿವಸಗಳಲ್ಲಿ ಕರಸ್ತೀವೆ ಅಂತ ಹೇಳಿದರು.

ವಿಶ್ವ— ಆ ಹುಡುಗಿಗೆ ಅಲ್ಲಿ ಯಾರಿದ್ದಾರೆ ? ಏನು ಕಲಿಯುತ್ತಿದ್ದಾಳಂತೆ ?

ಶೇ— ಕಕ್ಕನ ಮನೆಯಲ್ಲಿದ್ದಾಳಂತೆ. ಈ ಸಲ ಇಂಟರ್ ನಾಪಾಸ ಆದ್ದರಿಂದ ಕಲಿಯುವದನ್ನು ಬಿಟ್ಟಿದ್ದಾಳಂತೆ.

ವಿಶ್ವ— ಆ ಶಿವಪುರದ ಶಿವದೀಕ್ಷಿತರಿಗೂ, ಹರಿಪುರದ ಹರಿಹರರಾಯರಿಗೂ ಪತ್ರ ಬರೆದುಬಿಡು: ಹುಡುಗಿಯ ಫೋಟೊ ಹಾಗು ಕುಂಡಲಿಗಳನ್ನು

ವಿಶ್ವ— ಇನ್ನಾರದು ? ವಿಶ್ವಂಭರನದೇ ! ಬೇಗ ಮುಗಿಸಿಬಿಡಬೇಕೆಂದು ನಮ್ಮ ವಿಚಾರ. ತನ್ನ ಕಣ್ಣೆದುರಿಗೇ ಜರುಗಬೇಕೆಂದು ಇವನ ತಾಯಿಯ ಆಸೆ. ಅದನ್ನು ನಾವೆಷ್ಟೂ ದುರ್ಲಕ್ಷಿಸುವ ಹಾಗಿಲ್ಲ. ನಿಮ್ಮ ಮತವೇನು ಡಾಕ್ಟರೇ ?

ಡಾ—ಅವರ ಪ್ರಕೃತಿಯನ್ನನುಲಕ್ಷಿಸಿ ಹೇಳುವದಾದರೆ, ತಿಂಗಳೊಪ್ಪತ್ತಿನಲ್ಲಿ ಮುಗಿಸಿಬಿಡುವದುಚಿತ ! ಹೆಚ್ಚು ದಿನ ಮುಂದೆ ಹಾಕಬೇಡಿ ವ್ಯಾಧಿ ನಮ್ಮ ಕೈಮೀರಿ ನಿಂತಿದೆ. ದೇವರು ಕರುಣಾದೃಷ್ಟಿಯಿಂದ ನೋಡಿದರೆ, ಇದರೊಳಗಿಂದಲೂ ಪಾರಾಗಿ ಅವರು ರೋಗಮುಕ್ತರಾಗಬಹುದು. ಮಾನವ ಬುದ್ಧಿಗೆ ಶಕ್ಯವಾದದ್ದನ್ನೆಲ್ಲ ನಾನು ಮಾಡುತ್ತಾ ಇದ್ದೇನೆ. ಈಗ ಪ್ರಕೃತಿ ನೋಡಿದೆ. ಇಂದು ಇಂಜಕ್ಶನ್ ಯಾವುದೂ ಬೇಡ. ಬೇರೆ ಔಷಧ ಕೊಟ್ಟಿದ್ದೇನೆ. ಒಳ್ಳೇದು, ಬರ್ಲೇ ? ಒಂದು ಅರ್ಜಂಟ್ ಕೇಸ್ ಇದೆ. ಹೋಗಬೇಕು.

ವಿಶ್ವ— ಆಗಲಿ, ನಮಸ್ಕಾರ. ಸಾಯಂಕಾಲ ಬರ್ತೀರಲ್ಲ ?

ಡಾ— ಹೌದು— (ಹೋಗುವರು)

ವಿಶ್ವ— ಕೇಳಿದೆಯಾ ಡಾಕ್ಟರು ಹೇಳಿದ್ದನ್ನು ? ನಿನಗೆ ಜನ್ಮಕೊಟ್ಟು ಪಾಲನೆ ಪೋಷಣೆ ಮಾಡಿ, ಬೆಳೆಯಿಸಿದ್ದಕ್ಕೆ ಪ್ರತಿಯಾಗಿ ನಿನ್ನಿಂದ ಯಾವುದನ್ನೂ ನಾವು ಇದುವರೆಗೆ ಅಪೇಕ್ಷಿಸಿಲ್ಲ ನಾವು ಮಾಡುತ್ತ ಬಂದಿರುವದೆಲ್ಲ—ನಿನ್ನ ಸುಖಕ್ಕಾಗಿ, ನಿನ್ನ ಹಿತಕ್ಕಾಗಿ. ಮದುವೆಯಾದರೂ ನಿನ್ನ ಸುಖಕ್ಕಾಗಿಯೇ. ಆದರೆ ಅದನ್ನು ನಾವು ನೋಡುವಂತಾದರೆ, ನಮಗೊಂದು ಆನಂದ ! ಇಷ್ಟು ಕೂಡ ನೀನು ನಮಗಾಗಿ ಮಾಡದೆ ಹೋದರೆ ನಮ್ಮ ದುರದೃಷ್ಟ ! ಬೇರೆಯೇನು ? (ದುಃಖಿತರಾಗುವರು.)

ವಿಶು— ಅಣ್ಣಾ, ನಾನು ಸುಖಿಯಾಗಬೇಕು ಎಂದು ನಿಮ್ಮ ಅಪೇಕ್ಷೆ ಇದೆಯಲ್ಲ? ಬುಟ್ಟಿಯಲ್ಲಿಯ ಪೇರಲಹಣ್ಣು ಆರಿಸಿದ ಹಾಗೆ ಯಾವುದೋ ಹೆಣ್ಣನ್ನಾರಿಸಿ ಮದುವೆಯಾಗಿಬಿಡುವ ಈ ಗತಾನುಗತಿಕರ ಅಂಧಾನುಕರಣ ನನ್ನ ಮಟ್ಟಿಗಂತೂ ನಾನು ಮಾಡಲಾರೆ. ಅದರಿಂದ ನನ್ನ ಬಾಳು ಹಸಗೆಟ್ಟರೆ ?

ವಿಶ್ವ— ಇದು ನೋಡು, ವಿಶು ! ಮಾತಿನಲ್ಲಿ ಹೆಚ್ಚು ಚರ್ಚೆ ನನಗೆ ಬೇಡಾಗಿದೆ. ಅವಳ ಅನಾರೋಗ್ಯ ಚಿಂತಾಜನಕವಾಗಿರುವದನ್ನು ನೀನು ನೋಡುತ್ತಾ ಇದ್ದೀ. ಯಾವುದೇ ರೀತಿಯಿಂದ ನೀನು ವಧುವನ್ನಾರಿಸು. ನಿನ್ನ ತಾಯಿಯ ಅಪೇಕ್ಷೆಗೆ ಮನ್ನಣೆ ಕೊಡಬೇಕೆಂದಿದ್ದರೆ, ಈ ತಿಂಗಳು ಮುಗಿಯುವದರೊಳಗಾಗಿ ನಾವು ಮದುವೆಯನ್ನು ಮುಗಿಸಿಬಿಡಬೇಕು. ಮುಂದಿನ ತಿಂಗಳಲ್ಲಿ ಮದುವೆಗೆ ಮುಹೂರ್ತಗಳಿಲ್ಲ ! (ವಿಚಾರಮಾಡಿ) ಇನ್ನೊಂದು ಮಾತು ಹೇಳ್ತೀನೆ— ಈ ಪ್ರೇಮವಿವಾಹ ಎಂದು ನೀನು ಬೇರೆ ಯಾವ ಜಾತಿಯ ಹೆಣ್ಣನ್ನಾದರೂ ಕಟ್ಟಿಕೊಂಡು ಬಂದರೆ, ನನಗದೆಷ್ಟೂ ಸರಿಬರಲಿಕ್ಕಿಲ್ಲ. ಈಕೆಯಂತೂ ಅಂಥದನ್ನು ಕೇಳಿದರೆ ಪ್ರಾಣವನ್ನೇ ಕಳೆದು ಕೊಂಡಾಳು ! ಹುಷಾರಿ ! ಈಗಾಗಲೇ ನೀನು ಎಲ್ಲಿಯೂ ಅಂಥ ಪ್ರೇಮ ದಲ್ಲಿ ತೊಡಕಿಲ್ಲವಲ್ಲ ? ಏನು ?....ತೊಡಕಿಲ್ಲವಲ್ಲ ?

ವಿಶು— (ತಡವರಿಸುತ್ತ) ಇಲ್ಲ........ಇಲ್ಲ........ಹಾಗೇನೂ ಇಲ್ಲ—

ರಾಮು— (ಪ್ರವೇಶಿಸಿ ಅಪ್ಪಾ ಅವರ, ಅವ್ವಾ ಅವರು ಕರಿತಾರ್ರಿ. ಯಾರಾದರೂ ಒಬ್ಬರು ಬರಬೇಕಂತ್ರಿ !

ವಿಶ್ವ— ನೀನೇ ಹೋಗಿ ಬಾ, ವಿಶು. ನನಗೆ ತುಸು ಹೊರಗೆ ಹೋಗುವ ಜರೂರಿಯ ಕೆಲಸ ಇದೆ.

(ವಿಶ್ವಂಭರ ಹೋಗುವನು. ಶೇಷಪ್ಪ ಬರುವನು.)

ಶೇ— (ರಾಯರಿಗೆ ನಮಸ್ಕರಿಸಿ) ರಾಮನಾಥರಾಯರಿಗೆ ತಿಳಿಸಿದೆ. ಹುಡುಗಿ ಮುಂಬಯಿಯಲ್ಲಿದ್ದಾಳಂತೆ; ನಾಲ್ಕಾರು ದಿವಸಗಳಲ್ಲಿ ಕರಸ್ತೀವೆ ಅಂತ ಹೇಳಿದರು.

ವಿಶ್ವ— ಆ ಹುಡುಗಿಗೆ ಅಲ್ಲಿ ಯಾರಿದ್ದಾರೆ ? ಏನು ಕಲಿಯುತ್ತಿ ದ್ದಾಳಂತೆ ?

ಶೇ— ಕಕ್ಕನ ಮನೆಯಲ್ಲಿದ್ದಾಳಂತೆ. ಈ ಸಲ ಇಂಟರ್ ನಾಪಾಸ ಆದ್ದರಿಂದ ಕಲಿಯುವದನ್ನು ಬಿಟ್ಟಿದ್ದಾಳಂತೆ.

ವಿಶ್ವ— ಆ ಶಿವಪುರದ ಶಿವದೀಕ್ಷಿತರಿಗೂ, ಹರಿಪುರದ ಹರಿಹರರಾಯ ರಿಗೂ ಪತ್ರ ಬರೆದುಬಿಡು: ಹುಡುಗಿಯ ಫೋಟೊ ಹಾಗು ಕುಂಡಲಿಗಳನ್ನು

ಜರೂರ ಕಳಿಸಬೇಕೂ—ಅಂತ. ಕೂಡಲೇ ಹೋಗಲಿ ಪತ್ರ. ಇವತ್ತು ಯಾವಾದರೂ ಮುದ್ದತಿವೆಯೇನು? ಇದ್ದಹಾಗಿಲ್ಲ. ಡಾಯರಿ ನೋಡಿ ಇದ್ದರೆ ಹೇಳು!

ಶೇ— ಜಜ್ ಸಾಹೇಬರು ನಿನ್ನೇ ಮುಂಬಯಿಗೆ ಹೋಗ್ಯಾರಲ್ಲ? ಇವೊತ್ತು ಕೇಸು ಯಾವೂ ಇಲ್ಲ ರಾಯರ!

ವಿಶ್ವ— ಸರಿ, ನಾನು ಮಧ್ಯಾಹ್ನ ಬ್ಯಾಂಕಿನ ಬೋರ್ಡ ಮೀಟಿಂಗಿಗೆ ಹೋಗಬೇಕು. ಅಜಂಡಾದ ಕಾಗದ ನನ್ನ ಟೇಬಲ್ ಮೇಲಿಡು. ನಮ್ಮ ಚಾಳಿನ ಬಾಡಿಗೆ ಎಷ್ಟು ವಸೂಲಾಯಿತು? ಬಾಕೀ ಎಷ್ಟು ಉಳಿದಂತಾಯಿತು?

ಶೇ— ೩೧೫ ರೂಪಾಯಿ ವಸೂಲಾಗಿದೆ, ರಾಯರ. ಇನ್ನೂ ಸುಮಾರ ೧೭೫ ರೂ. ಬಾಕಿ ಅದ.

ವಿಶ್ವ— ಈ ಮನುಷ್ಯ ಸರಿಯಾಗಿ ಕೆಲಸ ಮಾಡೋದಿಲ್ಲ. ಈ ಬಾಡಿಗೆ ವಸೂಲೀ ಕೆಲಸ. ಕಮೀಶನ್ ಮೇಲಾದರೂ ಯಾರಿಗಾದರೂ ಒಪ್ಪಿಸಿ ನೋಡಬೇಕು. ಪಗಾರೀ ಮನುಷ್ಯ ಅಂದರೆ ಪ್ರಾಮಾಣಿಕತನದಿಂದ ದುಡಿಯುವದೇ ಇಲ್ಲ. ಹಾಗೆ ಕೆಲಸ ಮಾಡುವದಕ್ಕೆ ಯಾರಾದರೂ ಇದ್ದಾರೇನು?

ಶೇ— ಹಿಂದಕ್ಕ ನಾನು ಹೇಳಿದ್ದೆನಲ್ಲ, ರಾಯರ? ಭಿಷ್ಟಂಭಟ್ಟ ಅಂತ. ಅವಗ ಈ ಕೆಲಸ ಒಪ್ಪಿಸಿದರ ಮಾಡಬಹುದು ಕಮೀಶನ್‌ವ್ಯಾಲ!

ವಿಶ್ವ— ಈಗೇನು ಮಾಡ್ತಾನವ?

ಶೇ— ಒಂದು ವಧೂವರ ಏಜನ್ಸಿ ಅಂತ ಮಾಡಿಕೊಂಡಾನ, ರಾಯರ! ತುಸು ಹೊಲದ ಉತ್ಪನ್ನ ಅದ. ಅವಗ ಈ ಕೆಲಸಾ ಹಚ್ಚಲಿಕ್ಕೆ ಅಡ್ಡಿಯಿಲ್ಲ. ನನಗ ಗೊತ್ತಿನವ!

ವಿಶ್ವ— ಯಾರೇ ಆದರೂ ಐದುನೂರು ರೂಪಾಯಿಯು ಜಾಮೀನ ಕೊಡಬೇಕು. ಅವನ್ನ ಕೇಳು. ಅವ ಮಾಡ್ತಿದ್ದರ ಮಾಡಲಿ; ಹಾಂಗ.... ಅವ........ಅದೇನೊ........ವಧೂವರ ಏಜನ್ಸಿ ಮಾಡ್ತಾನ........ಅಂತ ಅಂದೆಲ್ಲಾ............(ಯೋಚಿಸಿ) ಒಳ್ಳೇ ಕನ್ಯಾ............ನಮಗ ಯೋಗ್ಯ

ಆದವು.........ಗೊತ್ತಿದ್ದರ ತಿಳಿಸು ಅಂತ ಹೇಳು. ಮತ್ತ ನಾ ಕೇಳಿದೆ ಅಂತ ಹೇಳಬ್ಯಾಡ. ಅವನ ಕಡೆಗೆ ಬರೋವು ಅಂದರ ಅಷ್ಟಕ್ಕಷ್ಟೇ ಇರೋವು – ಆದರೂ ಕೇಳಿರು-ಅಕಸ್ಮಾತ್ ಯೋಗ್ಯ ಕನ್ಯಾ ಇದ್ದರ— ಹುಂ, ಒಳ್ಳೇದು. ನೀನು ಅಷ್ಟು ಮಾಡು ಹೋಗು. (ಶೇಷಪ್ಪ ಹೋಗುವನು; ವಿಶ್ವಂಭರ ಬರುವನು—ಅವನನ್ನುದ್ದೇಶಿಸಿ) ಏನಂತೆ ?

ವಿಶು— ನಂದಾನ್ನ ಕರೆಯಿಸಬೇಕಂತೆ ! ಅದೂ ಗುರುವಾರದೊಳಗಾಗಿ. ಯಾವುದೊ ಹರಕೆ ಮುಟ್ಟಿಸುವದಿದೆಯಂತಲ್ಲ ? ಜಡ್ಡಿನಲ್ಲಿ ಇದೆಲ್ಲ ಯಾಕೆ ಬೇಕಾಗಿದ್ದೀತು ?

ವಿಶ್ವ—ಛೇ, ಹರಕೆ ಇದ್ದರೆ ಮುಂದೆ ಹಾಕುವದು ಬೇಡ. ಆಕೆ ಇಂಥದು ಆಗಬೇಕು ಅಂದರೆ ಅಂಥದನ್ನು ಮಾಡಿಬಿಡೋಣ. ನಂದಾ ದೀಪಾವಳಿಗೆ ಬಂದು ಹೋಗಿದ್ದಾಳೆ. ಗಂಡ ಕಳಿಸುವನೊ ಇಲ್ಲವೊ ! ಒಂದು ತಾರ್ ಮಾಡಿಬಿಡು. ಅದಕ್ಕಿಂತ ಫೋನಿನಲ್ಲಿ ಮಾತಾಡಿದರೆ ಒಳಿತಾದೀತು. ಹಾಗೇ ಮಾಡಿಬಿಡು—ಫೋನ್ ನಂಬರ ನನ್ನ ಡಾಯರಿಯಲ್ಲಿದೆ ನೋಡು; ಆಕೆಗೆ ಇನ್ನೊಮ್ಮೆ ಕೇಳು. (ವಿಶ್ವಂಭರ ಹೋಗುವನು. 'ಕಾಲ' ಬೆಲ್ ಸಪ್ಪಳಾಗುವದು) ರಾಮಾ, ಯಾರು ನೋಡು. (ರಾಮು ಹೋಗಿ ನೋಡಿ ಒಂದು ಭೆಟ್ಟಿಯ ಕಾರ್ಡನ್ನು ತರುವನು. ಅದನ್ನು ನೋಡಿ) ಅವರಿಗೆ ಬರ್ರಿ ಅಂತ ಹೇಳು ' (ರಾಮು ಹೋಗುವನು.) ಈ ಹೊಸ ಕಂಪನಿಗಳ ಶೇರು ತಕ್ಕೊಳ್ರಿ ಎಂದು ಬರುವ ಜನರಂತೂ ತಲೆ ಎಬ್ಬಿಸಿ ಬಿಟ್ಟಿದ್ದಾರೆ. (ಒಬ್ಬ ಗೃಹಸ್ಥ ಸೂಟು ಬೂಟಿನಲ್ಲಿ ಬರುವನು. ನಮಸ್ಕಾರದ ಉಪಚಾರ ಮುಗಿದ ಮೇಲೆ ಇಬ್ಬರೂ ಕೂಡುವರು)

ಗೃ— (ಪ್ರಾಸ್ಪೆಕ್ಟಸ್ಸದ ಒಂದು ಪ್ರತಿಯನ್ನು ಕೊಟ್ಟು) ತಮಗೆ ಈ ಮೊದಲೆ ಪತ್ರ ಬರೆದಿದ್ದೆವು. ತಮಗಾಗಿ ಒಂದು ಡೈರೆಕ್ಟರ್ ಜಾಗ ಕಾಯ್ದಿಟ್ಟಿದ್ದೇವೆ. ಅದಕ್ಕಾಗಿ ನಾಲ್ಕಾರು ಜನ ಈಗ ಮುಂದೆ ಬಂದಿದ್ದಾರೆ. ಆದರೆ ನಮ್ಮ ಇಚ್ಛೆಯಿಲ್ಲ. ತಾವೇ ನಮ್ಮ ಕಂಪನಿಗೆ ಡೈರೆಕ್ಟರ್ ಆಗಬೇಕೆಂದು ನಮ್ಮ ಅಪೇಕ್ಷೆ. ತಾವು ಒಪ್ಪಿದರೆ ನಮ್ಮ ಬೋರ್ಡು ಪೂರ್ಣವಾದ ಹಾಗೇ. ಒಂದು ವಾರದಲ್ಲಿ ಕಂಪನಿ ರಜಿಸ್ಟರ್ ಆಗೇ ಬಿಡುವದು. ಉಳಿದ ಎಲ್ಲ ಕೆಲಸ ಮುಗಿದಂತಾಗಿದೆ.

ವಿಶ್ವ— ಇದು ನೋಡ್ರಿ; ಈ ವರ್ಷದಲ್ಲಿ ಏಳು ಹೊಸ ಕಂಪನಿಯಲ್ಲಿ ಡೈರೆಕ್ಟರನಾಗಿದ್ದೇನೆ. ಇನ್ನು ಕೆಲವು ವರ್ಷ ಯಾವ ಹೊಸ ಕಂಪನಿಯಲ್ಲೂ ಡೈರೆಕ್ಟರನಾಗುವದು ಸಾಧ್ಯವಿಲ್ಲ. ಶೇರುಗಳನ್ನು ಕೂಡ ತಕ್ಕೊಳ್ಳಬಾರದೆಂದು ನಿರ್ಧರಿಸಿದ್ದೇನೆ. ಕ್ಷಮಿಸಿರಿ. ಹೆಚ್ಚು ಮಾತನಾಡಲು ನನಗೆ ಈಗ ಎಷ್ಟೂ ಅವಕಾಶವಿಲ್ಲ. ಇನ್ನು ಮಾತಾಡುವದಾದರೂ ಏನಿದೆ? ಇಷ್ಟೇ. ಒಳ್ಳೇದು, ನಮಸ್ಕಾರ. (ಏಳುವನು; ಬಂದ ಗೃಹಸ್ಥನೂ ಏಳುವನು.)

ಗೃ— ಅಲ್ಲ, ತಾವು ನಮ್ಮನ್ನು ನಿರಾಶಗೊಳಿಸಬಾರದು. ತಮ್ಮಂಥವರು........ನಮ್ಮ ಕಂಪನಿಗೆ........

ವಿಶ್ವ— ಇಲ್ಲ, ಇಲ್ಲ, ಕ್ಷಮಿಸ್ರಿ. ಬರ್ತೀರಾ? (ಕೈಮುಗಿಯುವರು ಬಂದ ಗೃಹಸ್ಥನೂ ನಮಸ್ಕರಿಸಿ ಹೋಗಲಾರದೆ ಹೋಗುವನು. ವಿಶ್ವಂಭರನು ಮ್ನೆಯಲ್ಲಿ ಕೋಟು ತೊಟ್ಟುಕೊಂಡು ಹೊರಗೆ ಹೋಗುವ ಸಿದ್ಧತೆಯಿಂದ ಬರುವನು. ಅವನನ್ನು ನೋಡಿ) ಫೋನ್‌ಮಾಡಿ ಬರುವಿಯೇನು? ಸೈಕಲ್ ಮೇಲೆ ಹೋಗು. ಕಾರು ಬೇಕಾಗಿದೆ. ನಾನು ಈಗ ಹೊರಗೆ ಹೋಗಬೇಕಾಗಿದೆ. (ವಿಶ್ವಂಭರ ಹೋಗುವನು. ವಿರುಪಾಕ್ಷ ಶಾಸ್ತ್ರಿಗಳು ಕೈಯಲ್ಲಿ ಪ್ರಸಾದದ ತಟ್ಟೆಯನ್ನು ಹಿಡಿದು ಸ್ತೋತ್ರ ಮಂತ್ರ ಹೇಳುತ್ತ ಬರುವರು. ರಾಯರಿಗೆ ತೀರ್ಥ ಹೂವು ಕೊಟ್ಟು ಒಳಗೆ ಹೋಗುವರು. ರಾಯರೂ ಹೊರಬೀಳುವರು)

———

ಪ್ರವೇಶ ೨

[ಶೇಷಪ್ಪ ಬರುವನು ವಿರುದ್ಧ ದಿಶೆಯಿಂದ ಬಿಷ್ವಂಭಟ್ಟ ಪ್ರವೇಶಿಸುವನು. ಒಬ್ಬರನ್ನೊಬ್ಬರು ನೋಡುವರು.]

ಶೇ— ಒಳ್ಳೆ ಭೆಟ್ಟಿಯಾದಿ ಬಾ ಮಹಾರಾಯಾ! ನೀ ಕೈಗೆ ಸಿಗ್ತೀಯೊ ಇಲ್ಲೊ ಅಂತ ಮಾಡಿದ್ದೆ.

ಬಿ— ಯಾಕೊ ? ಏನು ಕೆಲಸ ?

ಶೇ— ಮಹತ್ವದ ಸುದ್ದಿ! ಮಗನ ಲಗ್ನಾ ಮಾಡೋದು ಅಂತ ನಮ್ಮ ರಾಯರು ನಿರ್ಧಾರ ಮಾಡಿದರು!

ಬಿ— ಹಾಂ! ಇದೇನು ಹೇಳಿ ? ಯಾವಾಗ ? ಏನ್ ಕಥಿ ? ಈ ಕಪಿಲಾಷಷ್ಠಿ ಯೋಗ ಎಂದು ಬಂದೀತೊ ಅಂತ ಈಗೆರಡು ವರ್ಷ ಹಾದೀ ನೋಡ್ತಿದ್ದೆ. ಅಂತೂ ಸಮೀಪದೊಳಗs ಬಂದsದ ಅಂಥಾಂಗಾತು.

ಶೇ— ಸಮೀಪ ಅಂದ್ರ ಅತಿ ಸಮೀಪ! ಈ ತಿಂಗಳದಾಗs ಆಗಿ ಹೋಗಬೇಕಂತ!

ಬಿ— ಹಾಂ! ಮುಗದs ಹೋತ್ಯು. ಶ್ರೀಮಂತ, ಒಬ್ಬನೇ ಮಗ, ಎಂ. ಎ.ದೊಳಗ ಇದ್ದಾನ, ಮೇಲೆ ಅಮೇರಿಕಾಕ್ಕ ಹೋಗಬೇಕಂತಾನ! ಅಂವಗೇನೊ ಛತ್ರಪತಿ ಸಹ ಕನ್ಯಾ ಕೊಡಬಹುದು. ಇನ್ನ ನೋಡ್ರಿ-ನನ್ನ ಕನ್ಯಾ ಮಾಡಿಕೊಳ್ರಿ, ನನ್ನ ಕನ್ಯಾ ಮಾಡಿಕೊಳ್ರಿ, ಅಂತ ದೀಪಕ್ಕ ಹುಳ ಮುತ್ತಿಧಾಂಗ ಮುತ್ತತಾರ! ಈ ಹೆಣ್ಣಿನ ತಂದೆಗಳು ಅಂದರ ಹೊನ್ನೀ ಹುಳಾ ಇದ್ಧಾಂಗ! ಹೊನ್ನಿದ್ದಲ್ಲೆ ಮುಕರವರs ಅವರು! ನಮಗ ಆಟಾ ಆಡಲಿಕ್ಕೆ ಇದೊಂದು ಒಳ್ಳೇ ಸುಸಂಧಿ! ಆದಷ್ಟು ದೊಡ್ಡ ಬ್ಯಾಟಿ ಬಲ್ಯಾಗ ಕೆಡವಿದಿವಿ ಅಂದರ ನಮ್ಮ ಜನ್ಮದ ಬಡತನ ಆದರೂ ತಪ್ಪೀತು!

ಶೇ— ಅಂತೂ ನಿನ್ನ ಅದೃಷ್ಟ ತೆರೆಯಿತು ಮಗನ! ಇನ್ನ ತಗಿ ನಿನ್ನ ಡೈರಿ. ಮೂರು ನಾಲ್ಕು ಒನ್ನಂಬರ್ ಸ್ಥಳನೋಡಿ, ಬರಿ ಇವತ್ತs ಪತ್ರಾ. ನಿನಗ ಬೇಕಾದ ಸಹಾಯ ಮಾಡಲಿಕ್ಕೆ ನಾ ತಯಾರ್ ಇದ್ದೇನಿ. ಇನ್ನ ತಡ ಮಾಡಬ್ಯಾಡ. ಇವತ್ತಿನಿಂದ ಕೆಲಸಕ್ಕ ಹತ್ತು. ಎಲ್ಲಾ ಯುಕ್ತಿಯಿಂದ ಸಾಧಸಬೇಕು. ಈ ಸುದ್ದೀ ಯಾರಿಗೂ ಹೇಳಬ್ಯಾಡಾ ಮತ್ತ! ಕುಡಕರ ಬಾಯಿ ಒಡಕ ಅಂಬೋದು ಕೇಳಿಯೋ ಇಲ್ಲೋ? ಬಾಟ್ಲಿ ನೋಡಿ ಬಾಯಿ ಬಿಡಬ್ಯಾಡಾ! ನಮ್ಮಿಬ್ಬರ ಹೊರ್ತು ಯಾರ ಕಿವಿಗೂ ಈ ಮಾತು ಮುಟ್ಟಿರಬಾರದು. ಒಂದು ವಾರದೊಳಗಾಗಿ ಹಾರಬೇಕು ಬಾಯ!

ಬಿ— ಇರ್ಲಿ ಚಂಚಿ ತಾ. ಇದು ನೋಡು ಶೇಷ್ಯಾ, ನಮ್ಮ ಡೈರಿ ಕಿಸೆಯೊಳಗ ಇಟ್ಟs ಬಿಟ್ಟೇನಿ— ಧೋತರಾ ಉಡೋದು ಮರತೇನು ಡೈರಿ ಮರಿಯೋದು ಎಂದಿಗೂ ಶಕ್ಯ ಇಲ್ಲ! ಹಾಂಗ ನೂರು ನೂರಾಇಪ್ಪತ್ತು ಸ್ಥಳದ ರಿಕಾರ್ಡ ಇದರಾಗ! ನಾಲ್ಕಾರು ಸ್ಥಳ ಅಂತೂ ಒನ್ನಂಬರ್ ಅವ! ಬಾಯಿಮಾತ್ಯಾಕ? ಓದೇ ಬಿಡ್ತಿನಿ ನಿನ್ನ ಮುಂದ.

[ಡೈರಿ ತೆಗೆದು ಪಾನು ತಿರುವಿದ ಹಾಗೆ ಮಾಡಿ ಓದುವನು]

ಇದು ನೋಡು – ಕೈಲಾಸ ನಾರಾಯಣ ಕೈವಲ್ಯ; ಇನ್ಸುರನ್ಸ್ಆರ್ಗನೈಜರ್; ತಿಂಗಳಿಗೆ ಸಂಬಳ ಮೇಲಾದಾಯ ಸಹಿತ ನಾಲ್ಕುನೂರು ರೂಪಾಯಿ ವರಮಾನ; ಒಬ್ಬಳೇ; ಮಗಳು – ಹೆಸರು ವಿಲಾಸಿನಿ; ವಯಸ್ಸು ೧೯ ವರ್ಷ ಮೂರು ತಿಂಗಳು; ಶಿಕ್ಷಣ ಇಂಗ್ಲೀಷ ೬ನೇ ಇಯತ್ತೆಯ ವರೆಗೆ; ಪೇಟೀ ಮ್ಯಾಲ "ಯಾರವ್ವಾ ಇವ ಚೆಲುವ" ಆಕ್ಟಿಂಗ್ ಸಹಿತ ಹಾಡಲಿಕ್ಕೆ ಬರ್ತದ; ಎತ್ತರ ೫ ಫೂಟು ೩ ಇಂಚು; ಬಣ್ಣ ತಿಳಿಗಪ್ಪು, ಕಣ್ಣು ಒಳ ಗೆಂಪು; ಕುಂದು ಅಂದರ ಒಂದs! short sight; ವರದಕ್ಷಿಣಿ ರೋಖ ಕೊಡೋದರ ಬದಲಾಗಿ ಐದು ಸಾವಿರಕ್ಕ ಅಳಿಯನ ಇನ್ಸುರನ್ಸ!

ನಂ ೨. ದುರ್ಗಾದಾಸ, ಶ್ಯಾಮನಾಥ, ಪೋಲೀಸ ಇನ್ಸ್ಪೆಕ್ಟರ್; (ರಿಟಾಯರ್ಡ, ಪೆನ್‌ಶನ್ ೧೧೦ ರೂ. ಒಬ್ಬ ಮಗಳು, ಒಬ್ಬ ಮಗ; ಮಗ ಅಣ್ಣನ ಆಸ್ತಿಗೆ ದತ್ತು. ಮಗಳ ಹೆಸರು ಶರಾವತಿ; ವಯಸ್ಸು ೨೦ ವರ್ಷ

೬ ತಿಂಗಳು; ಇಂಗ್ಲೀಷ್ ಮ್ಯಾಟ್ರಿಕ್ ಆಗೇದ. ಓದು ಬರೆಯುವ ಮಟ್ಟಿಗೆ ಹಿಂದೀ ಬರ್‍ತದ. ಗ್ಯಾದರಿಂಗದ ನಾಟಕದೊಳಗ ಹೊಲೆಯರಾಕೀ ಪಾರ್ಟ ಮಾಡಿ ಬಕ್ಷೀಸ್ ಪಡದಾಳ. ಸಾಲೆಯ ವಕ್ತೃತ್ವಸ್ಪರ್ಧೆಯೊಳಗೂ ಭಾಗ ವಹಿಸಿದ್ದಳು. ಶೇಷ್ಯಾ, ಈ ಹುಡುಗಿ ಬಹಳ ತೀಕ್ಷ್ಣ ಅದ! ಒಮ್ಮೆ ಸಾಲಿ ಯೊಳಗ ಒಂದು ಉಲ್ಕೋಚಿ ಹುಡುಗ ಅವಳ ಕೈಹಿಡಿದನಂತ; ಈಕಿ ಕಾಲಾಗಿನ ಚಪ್ಪಲಿ ತಗದ ಹೊಡದರ, ಆ ಭೋಕರಾನ ಮಾರಿ ಚಪಾತೀ ಹಾಂಗ ಆಗಿತ್ತಂತ!

ಶೇ— ಈ ಸುದ್ದಿಯೇನು ಅವರಪ್ಪನs ಹೇಳಿದ್ನೇನು ಬರದಿಡಲಿಕ್ಕೆ?

ಬಿ— ಹಾಂಗs ತಮ್ಮ ಹುಡುಗಿ ಕೌತುಕ ಅಂತ ಹೇಳಿದರು. ನಾವು ಅದೂ ಇರಲಿ ಅಂತ ಟಿಪ್ಪಣಿ ಹಚ್ಚಿಟ್ಟೇವಿ!

ಶೇ— ಇಂಥಾ ಸುದ್ದಿಯೆಲ್ಲಾ ಡೈರ್‍ಯಾಗ ಬರದಿಡ್ತಾರೇನೊ, ಮಗನ? ಅವರಪ್ಪ ಇದನ್ನ ನೋಡಿದರ ನಿನ್ನ ಮ್ಯಾಲ ಖಟ್ಲೆ ಹಾಕಿ ಜೇಲಿಗೆ ಕಳಿಸ್ಯಾನು!

ಜ— ನನ್ನ ಮ್ಯಾಲ ಖಟ್ಲೆ ಹಾಕೊ ಗಂಡಸು ಆದ್ಯಾವನಪಾ? ನಿಜಾಮನಿಂದ ಹಜಾಮನ ತನಕ ಎಲ್ಲರ ಗುಟ್ಟಿನ ಗವಸಣಿಕಿ ನಾನು! ನನ್ನ ತಡವೊ ಕುವ್ವತ್ತು ಯಾವನಿಗೂ ಇಲ್ಲ. ಆದಿರಲಿ, ಮುಂದ ಕೇಳು— ವರದಕ್ಷಿಣಿ ನಗದು ಇಲ್ಲ. ಅಳಿಯಗ ಪೋಲೀಸ್ ಖಾತೇದಾಗ ಜಮಾದಾರ ಕೆಲಸ ಕೈಯಾಗಿದ್ದಾಂಗ! ನಂ. ೩. ಶ್ರೀಮಂತ ಕೋಟೆಪ್ಪನವರು ದೇಸಾಯಿ. ಒಂದೂರು ಇನಾಮು; ೫ ಹಿಸೆ ಆಗ್ಯಾವ; ಇದು ಹಿರೇಮನೆತನ; ಉತ್ಪನ್ನ ಆರು ಸಾವಿರ; ಇವರ ಕೈಗೆ ಬರೋದು ೮೦೦; ಉಳಿದದ್ದೆಲ್ಲ ಸಾಲಕ್ಕ; ನಾಲ್ಕು ಗಂಡು, ೫ ಹೆಣ್ಣು. ಹಿರೇ ಹುಡುಗಿ ಕಾಮಾಕ್ಷಿ; ವಯಸ್ಸು ೨೧: ಸಪ್ಪನ ಮಾರಿ, ಬಟ್ಟಿನ ಮೂಗು, ತುಸು ವಾತಮೈ; ತೂಕ ಅಂದಾಜು ೨೧೦ ಪೌಂಡು; ಕನ್ನಡ ನಾಲ್ಕನೆಯ ಇಯತ್ತೆ ನಾಪಾಸ್; ಇಂಗ್ಲೀಷ್ ಕ್ಯಾಪಿಟಲ್ ಅಕ್ಷರ Q ತನಕ ಬರ್ತಾವ! ನೆಲದ ಮ್ಯಾಲ ನಡೆಯೋದು ತ್ರಾಸಾದರೂ ನೀರಾಗ ಬಿದ್ಲು ಅಂದರ ಮೀನ ಈಸಿಧಾಂಗ ಈಸ್ತಾಳ. ಕುಂದ ಅಂದರ ತುಸು ಕಿವುಡು! ಹದಿನೈದು ಕೂರಿಗಿ ಹೊಲಾ ಬರಕೊಡ್ತಾರ ವರದಕ್ಷಿಣಿ ಬದಲಾಗಿ! ಆದರ ಅದು ಸಾಲ ತೀರಿದ ಮ್ಯಾಲ!

ಶೇ— ಇನ್ನೂ ಎಷ್ಟು ಹೆಸರು ಓದುವ ನೀನು ?

ಬಿ— ಇನ್ನೊಂದು ಅದ. ನಂ. ೪. ನಾರಾಯಣ ರಾಮಚಂದ್ರ ವಾಜಪೇಯಿ. ಹೈಕೋರ್ಟ ಪ್ಲೀಡರ್ ಅಧಿಕ ವಿಮಾ ಏಜಂಟ. ಮಗಳು ವಾರಜಾ; ವಯಸ್ಸು ೨೪; ಎತ್ತರ ಸುಮಾರು ೬ ಫೂಟು; ಮಾಳಗಿ ಹತ್ತಲಿಕ್ಕೆ ನಿಚ್ಚಣಕಿ ಬೇಕು ಆಗಿಲ್ಲ ! ಇಂಗ್ಲೀಷ್ ಕನ್ನಡ ಪೂಜಿ; ಅಂದರ ಸಾಲಿಗೆ ಹೋಗಲೇ ಇಲ್ಲ! ಮನಿಕೆಲಸದಾಗ ನಿಪುಣಳು. ಪ್ರಸಂಗ ಬಿದ್ದರ ಐವತ್ತು ಮಂದಿಗೆ ಅಡಿಗಿ ಮಾಡಿ ಹಾಕ್ತಾಳ. ಕುಂದಂದರ ಒಂದು, ಗುಕ್ಕು ! ವರದಕ್ಷಿಣೆ ಸಾವಿರದ ವರೆಗೆ ಕೊಡಬಹುದು. ಆದರ ಇದು ಸಾಲ ಸಿಗೋದರ ಮ್ಯಾಲ ಅವಲಂಬಿಸ್ಯದ ! ಹೆಚ್ಚು ಸಾಲ ಸಿಕ್ಕರ ಹೆಚ್ಚು ವರ ದಕ್ಷಿಣೆ ಕೊಡ್ತಾರ ! ಸದ್ಯಕ್ಕ ಈ ನಾಲ್ಕು ಕನ್ಯಾ ಅಂತೂ ತಯಾರವ. ಇವು ಹ್ಯಾಂಗವ ಅಂತೀ ನೀನು ?

ಶೇ— ಮಗನ, ನಿನ್ನ ಡೈರಿವಳಗ ಎಲ್ಲಾ ಗಿರಾಕಿ ಇಂಥಾವು ಅವ ಏನು ? ಎಲ್ಲಿ ಹುಡುಕಿ ತಗದೀದಿ ಇವನ್ನ ? ಒಂದು ಕುರುಡಿ, ಒಂದು ಗಂಡರಾಮಿ, ಒಂದು ಕಿವುಡಿ, ಒಂದು ಗುಕ್ಕಿ ! ಅವು ಹ್ಯಾಂಗಾರ ಇರಲಿ. ಹಡೆದ ತಾಯಿ ತಂದೆಗಳಾದರೂ ಶ್ರೀಮಂತರಿದ್ದಾರೇನೊ · ಅಂದರ ಅವರೂ ಅಷ್ಟಕ್ಕಷ್ಟು ! ಒಬ್ಬವ ಅಳಿಯನ ವಿಮಾ ಇಳಸ್ತೇನಿ ಅಂತಾನ, ಒಬ್ಬವ ನವಕರಿ ಕೊಡಸ್ತೇನಿ ಅಂತಾನ; ಮೂರನೆಯವ ಸಾಲಾ ತೀರಿದ ಮ್ಯಾಲ ಹೊಲಾ ಬರಕೊಡತೇನಿ ಅಂತಾನ, ನಾಲ್ಕನೆಯವ ಸಾಲಕ್ಕು ಅರ್ಜಿ ಮಾಡ್ತೇನಿ ಅಂತಾನ ! ಅಂತೂ ವರದಕ್ಷಿಣಿಗೆ ರೋಖ ಗಿರಾಕಿ ಒಂದೂ ಇಲ್ಲ !

ಬಿ— ಶೇಷ್ಯಾ, ನಿನ್ನ ತಲ್ಯಾಗೇನು ಇತ್ತೀಚೆಗೆ ಗಜಗ ಬೆಳದಾವೇನು? ಅಲ್ಲೊ, ರೋಖ ವರದಕ್ಷಿಣಿ ಎಣಸೋ ಮಕ್ಕಳು ಏಜಂಟನ ಹತ್ತ್ಯಾಕ ಬರ್ತಾರ? ಪ್ರತಿಯೊಂದು ಕನ್ಯಾದಾಗೂ ಒಂದೊಂದು ಕುಂದದ ಅಂಬೋದು ನಾನು ಕಬೂಲ್ ಮಾಡ್ತೇನಿ. ಆದರ ಇಂಥವರ ಲಗ್ನ ಹೊಂದಿಸಿದರನ ನಮಗ ಕಮೀಶನ್ ಹೆಚ್ಚು ಸಿಗ್ತದ ಅಂಬೋದು ನಿನ್ನ ತಲ್ಯಾಗ ಬರೂದುಲ್ಲ.

ಬರೇ ಖರಡು ತೀಡಿ ತೀಡಿ ನಿನ್ನ ಮಿದುಳಂಬೋದು ಬರಡಾಗೇದ. ಎಲ್ಲಾ ನನಗ ಬಿಟ್ಟುಬಿಡು. ಹ್ಯಾಂಗ ಬಲಿ ಹಾಕಬೇಕಂಬೋದರಾಗ ನಾ ತಲಿ ಹಾಕ್ತನೀ, ನೀ ಬರೆ ಗೋಣು ಹಾಕು. ನಿನ್ನಿಂದ ಉಳಿದ ಸಹಾಯ ನನಗೇನೂ ಬೇಕಾಗಿಲ್ಲ. ಈ ನಾಲ್ಕೂ ಕನ್ಯಾದಾಗ ಯಾವದs ನಿಮ್ಮ ಚಿಕ್ಕ ರಾಯರಿಗೆ ಹೊಂದಲಿ, ನನಗ ಸಿಗೊ ಕಮೀಶನ್‌ದಾಗ ಅರ್ಧ ಹಿಸೆ ನಿನ್ನದು. ತಿಳೀತಿಲ್ಲೊ ?

ಶೀ— ಇದರಾಗ ಒಂದೂ ಹೊಂದೋಹಾಂಗಿಲ್ಲ !

ಬಿ— ಅದ್ಯಾಕೊ ?

ಶೀ— ಏಳೊ ಹುಚ್ಚs ! ಇಂಥಾ ಹೆಣ್ಣು ಆ ಹುಡುಗ ಎಂದೂ ಒಪ್ಪಲಾರ !

ಬಿ— ಇವನ್ನಂತೂ ಮೊದಲ ತೋರಿಸೋಣ. ಯಾವದೂ ಅವನ ಮನಸಿಗೆ ಬರಲಿಲ್ಲಾ ಅಂದರ ಮತ್ತ ಬ್ಯಾರೆ ಅವ ! ಅವನ್ನ ಕರಸೋಣ. ರಾಯರ ಹತ್ತರ ಯಾರಾದರೂ ಚೌಕಸಿ ನಡಸ್ಯಾರೇನು ? ಇದ್ದರ ಹೇಳು. ನಾ ಅಲ್ಲೇ ವಶೀಲಿ ಹಚ್ಚತೀನಿ. ಮತ್ತ ಆ ಗಿರಾಕಿನ್ನೂ ಕೈಯಾಗ ತೊಗೋತೀನಿ !

ಶೀ— ನಾನು ತಿಳಕೊಂಡು ಆಮ್ಯಾಲ ಹೇಳ್ತೀನಿ. ಮತ್ತ–ಇನ್ನೊಂದು ಕೆಲಸದ ರಾಯರದು. ಅವರ ಚಾಳಿನ ಬಾಡಿಗಿ ವಸೂಲಿ ಕೆಲಸದ. ಕಮೀಶನ್ ಮ್ಯಾಲ ಮಾಡ್ತಿಯೇನು ? ನೋಡು. ಮಾಡೊಹಾಂಗಿದ್ದರ ಕೊಡಸ್ತೀನಿ.

ಬಿ— ರೊಕ್ಕ ಸಿಗೋಹಾಂಗಿದ್ದರ ಬೇಕಾದ ಕೆಲಸಿದ್ದರೂ ಮಾಡ್ತೀನಿ ನೋಡು !

ಶೀ— ಆದರ ನಮ್ಮದೂ ಹಿಸೆ ಆದರಾಗ ! ಈಗs ಹೇಳಿರ್ತೀನಿ ಮತ್ತ !

ಬಿ— ಅಗತ್ಯ ಆಗಲಿ. ರಾಯರ ಜತಿಗೆ ಮಾತಾಡಿ ಹೊಂದಿಸಿಬಿಡು ಹೋಗಲಿ.

ಶೇ— ಅದಕ್ಕ ಜಾಮೀನ ಕೊಡಬೇಕು-ಐದು ನೂರು ರೂಪಾಯದ್ದು!

ಬಿ— ಅದನ್ನ ಮಾತ್ರ ನೀನಽ ಕೊಡಬೇಕು ನೋಡಪಾ! ನನಗ್ಯಾರು ಜಾಮೀನಾಗಬೇಕೊ?

ಶೇ— ಆಗಲಿ, ನಾ ಆಗ್ತೀನಂತ. ಮತ್ತ ನನ್ನಽ ಮುಣುಗಸಬ್ಯಾಡ. ಈಗಂತೂ ನಿನ್ನ ಕೆಲಸಕ್ಕ ಹತ್ತು. ಇವನ್ನ ಬಿಟ್ಟು ಬ್ಯಾರೆ ಒಳ್ಳೆ ಕನ್ಯಾ ಇದ್ದರ ನೋಡಲ್ಲ!

ಬಿ— ನಾ ಎಲ್ಲಾ ನೋಡ್ತಿನಿ. ನೀ ಅದರ ಕಾಳಜಿ ಬಿಡು. ನನಗ ಹೆಚ್ಚು ಹೇಳೊ ಕಾರಣಿಲ್ಲ. ನನ್ನ ತಲ್ಯಾಗೆಲ್ಲಾ ಬಂತು.

ಶೇ— ಇನ್‌ಮ್ಯಾಲ ನನಗ ದಿನಾಲು ಒಂದು ಸಾರೆಯಾದರೂ ಭೆಟ್ಟಿ ಆಗ್ತಾ ಇರು.

ಬಿ— ಓಹೊ, ಇನ್ನ ಜಿಗಳಿ ಹತ್ತಿಧಾಂಗ ಹತ್ತ್ತೀನಿ ಬಿಡು.

(ತೆರೆಯಲ್ಲಿ ಮೆಲುದನಿಯಲ್ಲಿ ಹಾರ್ಮೋನಿಯವರ್ದ ಮೇಲೆ ಹಾಡಿನ ಸ್ವರ ಕೇಳಬರುವದು.)

ಶೇ— ಯಾರು ಹಾಡ್ತಾರಪಾ ಇಲ್ಲೆ? ಯಾರು ಬಂದಾರ ಈ ಮನೀಗೆ?

ಬಿ— ವಸುಧಾಬಾಯಿ ಅಂತ ಬಂದಾರಲ್ಲೊ! ಹೊಸತಾಗಿ-ಅವರು ಇರ್ತಾರಿಲ್ಲೆ. ಅವರ ಮಗಳು ಸುಧಾ ಅಂತ ಕಾಲೇಜದಾಗ ಕಲೀತದ ನೋಡು—ಆ ಹುಡುಗಿ ಹಾಡ್ತಿರಬೇಕು.

ಶೇ— ಓಹೊ, ಲಕ್ಷ್ಯದಾಗ ಬಂತು. ನಮ್ಮ ಚಿಕ್ಕರಾಯರು ಮತ್ತ ಈ ಹುಡುಗಿ—ಕೂಡಿ ಇರೋದು ಬಹಳ. ಒಂದಽ ಕ್ಲಾಸಿನೊಳಗ ಕಲಿತಾರ.

ಬಿ— ಕೂಡಿ ಕಲಿಯೋದಷ್ಟಽ ಯಾಕ? ಇವರ ಮನೀಗೆ ಸಹ ಬರ್ತಾರ ನಿಮ್ಮ ಚಿಕ್ಕರಾಯರು. ಅಲ್ಲೊ, ಶೇಷ್ಯಾ, ಒಂದು ಸಂಶಯ ಬಂತೀಗ. ನಾವು ಕನ್ಯಾದ ಸಲುವಾಗಿ ಎಲ್ಲಾ ಖಟಪಿಟ ಮಾಡಿದಿವಿ.

ಆ ಹುಡುಗ ಒಳಗಿಂದೊಳಗः ಇಲ್ಲೇ ಹೊಂದಿಸಿಕೊಂಡುಬಿಟ್ಟ್ರಾ ಅಂದರ ನಾವು ನೂತದ್ದೆಲ್ಲ ಹಂಜಿ ಆದೀತಲ್ಲ ಅಂತೀನಿ !

ಶೇ— ಆ ಹುಡುಗಿನ್ನೇನು ಮಾಡಿಕೊಡತಾನೊ ? ಅವರ ಊರು ಯಾವದೊ, ಧರ್ಮ ಯಾವದೊ, ಜಾತಿ ಯಾವದೊ, ಕುಲ ಯಾವದೊ ! ಈಗಿನ ಕಾಲದಾಗ ಜನರ ಉಡಿಗಿ ತೊಡಗಿ ನೋಡಿ, ಇಂವ ಇದः ಧರ್ಮದವ ಅಂತ ಹೇಳೋದः ಕಠಿಣದ ! ಆ ಹೆಣ್ಣುಮಗಳಿಗೆ ಗಂಡ ಬ್ಯಾರೆ ಇಲ್ಲ ! ಗಂಡಸರ ಸರಿಜೋಡಿ ನಿರ್ಭೀತಿಯಿಂದ ನಡೀತಾಳ. ಕಲಸ-ಬೆರಕಿ ಇದ್ದರ ಕಥೀನः ಮುಗೀತು ! ಇಂಥಾ ಹೆಣ್ಣು ಮಾಡಿಕೊಂಡರ ನಮ್ಮ ರಾಯರು ಸುಮ್ಮನः ಇರःವರः ? ನಮ್ಮ ಬಾಯೇರಂತೂ ಅಳ್ಳಿತ್ತೀಲೆ ಪ್ರಾಣಾ ಬಿಟ್ಟಾರು! ನಮ್ಮ ರಾಯರು ಮಹಾ ಪಕ್ಕಾ ಇದ್ದಾರ ಬಾ. ಈಗೇನೊ ನಿನ್ನ ಹಾಂಗः ಆಗಲಿ, ಅಂತ ಅಂದಾರ ಅಂತ ಇಟಗೊ. ಆದರೂ ತಾವು ಮಾಡೋದನ್ನ ಮಾಡೇ ಬಿಡ್ತಾರ. ಅಂತः ನಾನು ಇನ್ನೊಮ್ಮೆ ನಿನಗ ಹುಷಾರಿ ಕೊಡ್ತೀನಿ. ನೀನು ಮಾಡೊ ಪ್ರಯತ್ನದಾಗ ಮೈಗಳ್ಳತನ ಮಾಡಬ್ಯಾಡ. ಕನ್ಯಾ ಪಾಸ್ ಬಿತ್ತು ಅಂದರ ನಿನ್ನ ಮಾಮೂಲ ನಿನ್ನ ಕಿಸೆಕ್ಕ ಬಿತ್ತः !

ಬಿ— ಅದನ್ನ ಈಗ ಮಾತಾಡೋದು ಬ್ಯಾಡಾ ! ಕನ್ಯಾ ತಂದು ಎದುರಿಗೆ ನಿಲ್ಲಸ್ತೀನಿ. ಆಮ್ಯಾಲ ಮಾತಾಡ್ತೀನಿ !

ಶೇ— ಆಗಲಿ, ಹಂಗಾರ ನೀ ಹೊರಡು ನಿನ್ನ ಕೆಲಸಕ್ಕ. ನಾನೂ ಹೋಗಬೇಕು.

(ಇಬ್ಬರೂ ಬೇರೆ ಬೇರೆ ದಾರಿಯಿಂದ ಹೋಗುವರು.)

———

ಪ್ರವೇಶ ೩

[ವಸುಧಾಬಾಯಿಯವರ ಮನೆ—ಆಡಂಬರವಿಲ್ಲದೆ, ಅಚ್ಚುಕಟ್ಟಾಗಿ, ಕಲಾಪೂರ್ಣವಾಗಿ ಶೃಂಗರಿಸಲ್ಪಟ್ಟಿದೆ. ಸುಧಾ ಹಾರ್ಮೋನಿಯಮ್‌ದ ಮೇಲೆ ಹಾಡುತ್ತಿದ್ದಾಳೆ. ತಾಯಿ ವಸುಧಾಬಾಯಿ ಸೋಫಾದ ಮೇಲೆ ಹೆಣೆಯುತ್ತ ಕೂತಿದ್ದಾರೆ.]

ಹಾಡು*

[ಹಾಡು ಮುಗಿಯುವ ಹೊತ್ತಿಗೆ ವಿಶ್ವಂಭರ ಬರುತ್ತಾನೆ. ಅವನನ್ನು ನೋಡಿ ಸುಧಾ ಹಾಡು ಹೇಳುವದನ್ನು ನಿಲ್ಲಿಸಿ ಓರಣವಾಗಿ ಕೂಡುವಳು]

ವಸು — ಓ, ಬನ್ರಿ, ವಿಶ್ವಂಭರ.

ವಿಶು— (ಕುರ್ಚಿಯ ಮೇಲೆ ಕೂಡುತ್ತ) ಸುಧಾ, ಹಾಡು ನಿಲ್ಲಿಸಬೇಡ. ಮನಸ್ಸು ಶಾಂತವಾಗುವಂಥ ಒಂದು ತತ್ವಪದ, ಭಾವಗೀತ, ಪದ್ಯ ಏನಾದರೂ ಹೇಳು.

ಸುಧಾ— ಮನಸ್ಸು ಅಶಾಂತವಾಗುವದಕ್ಕೆ ಆಯಿತೇನು ? ತಾಯಿಯ ಪ್ರಕೃತಿಯಲ್ಲಿ ಹೆಚ್ಚುಕಡಿಮೆ ಏನಾದರೂ.... ?

ವಿಶು— ಅಂಥದೇನಿಲ್ಲ. ಹೇಳ್ತೀನೆ. ತುಸು ಹೊತ್ತು ನನಗೆ ಮೌನವಾಗಿ ಕೂಡಗೊಡು. ಒಂದು ತತ್ವಪದ ಹೇಳು.

ಸುಧಾ— ನನಗೆ ತತ್ವಪದ ಬರುವದಿಲ್ಲ. ಮೊನ್ನೆ ನೀವೆ ಅಂದು ತೋರಿಸಿದ ಕವನ ಬೇಕಾದರೆ ಹೇಳ್ತೀನೆ.

ವಿಶು— ಹೇಳು, ಅದನ್ನೇ ಹೇಳು.

ವಸು— ಕಾಫಿ ಬೇಕೆ, ವಿಶ್ವಂಭರ ?

ವಿಶು— ಬೇಡ ಬೇಡ. ಸುಧಾ, ಹೇಳು ಆ ಕವನ ಹೇಳು.

---

* ಇಲ್ಲಿ ಹಾಡುವ ಹಾಡನ್ನು ಕೊನೆಗೆ ಕೊಟ್ಟಿದೆ.

[ಸುಧಾ ಪೇಟಿ ಬಾರಿಸಿಕೊಂಡು ಕವನವನ್ನು ಹೇಳತೊಡಗುವಳು. ವಿಶ್ವಂಭರ ಕಣ್ಣುಮುಚ್ಚಿ ಏಕತಾನತೆಯಿಂದ ಕೇಳುವನು]

ಕವನ*

[ಕವನ ಮುಗಿಸಿ ಸುಧಾ ಎದ್ದು ಬಂದು ವಿಶ್ವಂಭರನ ಹತ್ತಿರದ ಕುರ್ಚಿಯ ಮೇಲೆ ಕೂಡುವಳು]

ವಸುಧಾ— ಯಾಕೆ, ವಿಶ್ವಂಭರ ? ಇಂದು ನಿಮ್ಮ ಮನಸ್ಸು ಸರಿಯಾಗಿಲ್ಲವೆಂದು ಕಾಣುತ್ತದೆ. ಮತ್ತೆ ಮದುವೆಯ ಮಾತೇನಾದರೂ ಬಂದಿತ್ತೊ ಏನು ?

ವಿಶು— ಅಕ್ಕಾ, ನಾನು ಸುಳ್ಳು ಹೇಳಿ ಅದನ್ನು ಮುಚ್ಚಿಡಲಾರೆ. ಅಣ್ಣ ನನ್ನೊಡನೆ ಇಂದು ತೀಕ್ಷ್ಣವಾಗಿ ಮಾತನಾಡಿದರು. ಒಂದೆರಡು ವಾರಗಳಲ್ಲಿ ನನ್ನ ಮದುವೆಯನ್ನು ಮುಗಿಸಿಬಿಡುವ ನಿಶ್ಚಯ ಮಾಡಿದ್ದಾರೆ. ನಾನು ಅದಕ್ಕೆ ಒಪ್ಪಲೇಬೇಕು ಎಂದು ಅವರ ಆಗ್ರಹ.

ವಸು— ಈ ಅವಸರಕ್ಕೆ ಕಾರಣ ?

ವಿಶು— ತಾಯಿಯ ಅಸ್ವಾಸ್ಥ್ಯ ! ಅದು ಅತ್ಯಂತ ನಿರಾಶಾದಾಯಕವಾಗಿದೆ ಎಂದು ಡಾಕ್ಟರರ ಅಭಿಪ್ರಾಯ !

ವಸು— ಎಲ್ಲವೂ ಅರ್ಥವಾಯ್ತು ನನಗೆ. ನೀವೇನು ವಿಚಾರ ಮಾಡಿದ್ದೀರಿ ?

ವಿಶು— ಅದಕ್ಕಾಗಿಯೇ ಈಗ ಬಂದಿದ್ದೇನೆ. ಅದೆಲ್ಲ ನಿಮ್ಮನ್ನೇ ಕೂಡಿದೆ.

ವಸು— ಅಂದರೆ ?

ವಿಶು— ನೀವು ಹ್ಯಾಗೆ ಹೇಳುವಿರೊ ಹಾಗೆ ನಾನು ಮಾಡುವವ.

ವಸು— ವಿಶ್ವಂಭರ, ನೀವೇ ಈ ವಿಷಯವನ್ನು ವಿಚಾರಪೂರ್ವಕ ನಿರ್ಧರಿಸಬೇಕು. ನಿರ್ಧರಿಸಿದ ಹಾದಿಗೆ ಏನೇ ಎಡರುಗಳು ಬಂದರೂ

* ಇಲ್ಲಿಯ ಕವನವನ್ನು ಕೊನೆಗೆ ಕೊಟ್ಟಿದೆ.

ಅವನ್ನು ಎದುರಿಸಬೇಕು. ಗಂಡಸಿಗೆ ವಿದ್ಯಾಭ್ಯಾಸ, ವಿವಾಹ ಮತ್ತು ವ್ಯವಸಾಯ ಇವು ಮೂರು ಬಸಿರುಬೇನೆಯಂತೆ ಬರುವಾಗ ಬಾಧೆ ಕೊಡುವವೇ. ಪ್ರತ್ಯಕ್ಷ ಸಂಕಟಕ್ಕಿಂತ ಅದರ ಕಲ್ಪನೆಯೇ ಹೆಚ್ಚು ಭಯಾನಕ ಎನಿಸುವದಂತೆ ! ಆದರೆ ಅಳ್ಳೆದೆಯವರ ಮಾತಾಯ್ತುದು. ಎಲ್ಲವೂ ನಿಮ್ಮ ನಿಶ್ಚಯದ ಮೇಲೆ ಅವಲಂಬಿಸಿದೆ. ಬಂದ ಪ್ರಸಂಗಕ್ಕೆ ಎದೆಗೊಡಬೇಕು. ಬೆದರುವವರನ್ನು ಹೆಚ್ಚಾಗಿ ಬೆದರಿಸುವದು ಅದರ ಗುಣ.

ವಿಶು— ಅಕ್ಕಾ, ಎಂಥ ಪ್ರಸಂಗವೂ ನನ್ನನ್ನು ಬೆದರಿಸಲಾರದು. ನನ್ನ ನಿರ್ಧಾರವನ್ನು ಎಂದೊ ನಾನು ನಿಮಗೆ ಹೇಳಿಬಿಟ್ಟದ್ದೇನೆ. ಸುಧೆಗಾಗಿ ಸರ್ವಸ್ವವನ್ನು ತ್ಯಾಗ ಮಾಡುವ ಹೊತ್ತು ಬಂದರೂ ನನಗೆ ಎಳ್ಳಷ್ಟು ದುಃಖವಾಗಲಾರದು. ಅದಕ್ಕೆ ಇಲ್ಲಿಂದ ದೂರ, ಬಹುದೂರ, ಹೋಗಿ ಬಿಡಬೇಕೆಂದೆನಿಸುತ್ತದೆ. ಇಲ್ಲಿದ್ದು ಈ ತೊಡಕು ನನ್ನ ಇಚ್ಛೆಯಂತೆ ಬಗೆಹರಿಯುವ ಆಶೆಯೇನು ತೋರುವದಿಲ್ಲ ನನಗೆ !

ಸುಧಾ— ನೀವು ನನಗಾಗಿ ತಂದೆತಾಯಿಗಳಿಂದಗಲಿ ಓಡಿ ಹೋಗುವವರೊ ? ಇದು ಉಚಿತವಾದ ರೀತಿ ಅನಿಸಲಾರದು.

ವಸು— ಛೆ, ಛೆ, ವಿಶ್ವಂಭರ ! ನಿಮ್ಮ ತಾಯಿ ಸಾವಿಗೆ ತುತ್ತಾಗುವ ಸ್ಥಿತಿಯಲ್ಲಿರುವಾಗ, ನೀವು ಒಂದು ಹೆಣ್ಣಿಗಾಗಿ ಅವರನ್ನಗಲಿ ಹೋದರೆ ಅವರಿಗಾಗುವ ದುಃಖದ ಕಲ್ಪನೆ ಇದೆಯೇ ನಿಮಗೆ? ಅವರಿಗೆ ಪ್ರಪಂಚದಲ್ಲಿ ಪ್ರಾಣಕ್ಕಿಂತಲೂ ಪ್ರಿಯವಾದ ವಸ್ತುವೆಂದರೆ ನೀವು ! ನೀವೇ ಅವರ ಸುಖಸರ್ವಸ್ವ, ನೀವೇ ಅವರ ಪ್ರೇಮಸರ್ವಸ್ವ ! ನಿಮ್ಮನ್ನುಳಿದು ಅವರಿಗೆ ಬೇರೆ ಪ್ರಪಂಚವೇ ಇಲ್ಲ. ನನ್ನ ಸುಧೆಯನ್ನು ನೀವು ನಿತಾಂತವಾಗಿ ಪ್ರೀತಿಸುವದು ನನಗೆ ಬ್ರಹ್ಮಾಂಡದಷ್ಟು ಆನಂದ. ಆದರೆ ಆ ಆನಂದದ ಬುಡದಲ್ಲಿ ನಿರಾಶೆಯ ಜ್ವಾಲಾಮುಖಿಯೊಂದು ಹುದುಗಿದೆಯೆಂಬುದನ್ನು ನೀವೇನು ಬಲ್ಲಿರಿ ? ಅದೇನೇ ಇರಲಿ, ಹಡೆದವರನ್ನಗಲಿ ಸುಧೆಯನ್ನು ಮದುವೆಯಾಗಬೇಕೆಂಬ ಹವ್ಯಾಸವನ್ನು ಯಾರೂ ಮೆಚ್ಚಲಾರರು. ನಿಮ್ಮ ಅವರ ಸಂಬಂಧ ರಕ್ತಸಂಬಂಧ; ಕೂಡಿ, ಬೆರೆತು, ಬೆಳೆದು ಹೊರಬಂದ ಸಂಬಂಧ!

ನಿಮ್ಮ ಜನ್ಮಕ್ಕೆ ಕಾರಣಪುರುಷರವರು ! ಅವರ ಇಚ್ಛೆಗೆ ಮನ್ನಣೆ ಕೊಡುವದು ನಿಮ್ಮ ಪವಿತ್ರವಾದ ಕರ್ತವ್ಯ.

ವಿಶು— ಅಕ್ಕಾ, ಈ ಕರ್ತವ್ಯ ಅಕರ್ತವ್ಯಗಳ ಗೊಂದಲ ಬೇಕಿಲ್ಲ ನನಗೆ. ಮನಸ್ಸಿಗೆ ಸರಿಯೆನಿಸಿದ್ದನ್ನು ಮಾಡಿಬಿಡುವದೇ ನನ್ನ ರೀತಿ. ನನ್ನ ತಂದೆ ತಾಯಿ ನನ್ನನ್ನು ಅತೀವವಾಗಿ ಪ್ರೀತಿಸುವರೇನೊ ನಿಜ. ಅವರ ಆಶೆ ಆಕಾಂಕ್ಷೆಗಳು ನನ್ನಲ್ಲಿ ಕೇಂದ್ರೀಕೃತವಾಗಿರುವದೂ ನಿಜ. ಆದರೆ ತಮ್ಮ ಸುಖದ ಜತೆಗೆ ನನ್ನ ಸುಖದ ವಿಚಾರವನ್ನೂ ಅವರು ಮಾಡಲೇಬೇಕಲ್ಲವೆ? ನನ್ನ ಅವರ ಮಧ್ಯೆ ಕೆಲವು ಮೇರೆಗಳಿವೆ. ಅತಿಕ್ರಮಣವಾಯ್ತೆಂದರೆ ಅಧೋಗತಿ ಕಟ್ಟಿಟ್ಟದ್ದೇ. ಅಕ್ಕಾ, ತಾತ್ವಿಕ ವಾದಕ್ಕೆ ಬೇಕಾಗುವ .ತಾಳ್ಮೆ ಸದ್ಯಕ್ಕೆ ನನ್ನಲ್ಲಿಲ್ಲ ನನ್ನ ಮನಸ್ಸು ಈಗ ಬಹು ಗೊಂದಲಗೆಟ್ಟಿದೆ. ಮನಸ್ಸಿಗೆ ಒಗ್ಗಿದ್ದನ್ನು ಮಾಡಿಬಿಡುವದರಾಚೆಗೆ ನಾನು ಎಂದೂ ವಿಚಾರ ಮಾಡುತ್ತಿರುವದಿಲ್ಲ.

ವಸು— ಮನಸ್ಸಿಗೆ ಒಗ್ಗಿದುದು ಎಂದು ಮನಬಂದಂತೆ ಮಾಡಲಾದೀತೆ ? ಹಡೆದ ಮಕ್ಕಳಿಗೆ ಸುಖವಾಗಬಾರದೆಂಬ ಅಪೇಕ್ಷೆ ಯಾವ ತಂದೆತಾಯಿಗಳಿಗೂ ಇರಲಾರದು. ನಿಮಗಿರುವದು ಒಂದೇ ದೃಷ್ಟಿ; ಅವರಿಗೆ ಎರಡು ದೃಷ್ಟಿ. ನೀವನ್ನುವಂತೆ ಅತಿಕ್ರಮಣವಾಗಬಾರದು, ನಾನು ಒಪ್ಪುತ್ತೇನೆ. ಈ ಮಾತು ಇಬ್ಬರಿಗೂ ಅನ್ವಯಿಸುವದು. ಇದು ಹಾಗಿರಲಿ. ಕನ್ಯೆಯ ವಿಷಯದಲ್ಲಿ ಏನು ಮಾತು ನಡೆಯಿತು ? ಈಗಾಗಲೇ ಯಾರನ್ನಾದರೂ ನೋಡಿದ್ದಾರೊ ?

ವಿಶು— ಛೇ, ನೋಡುವವರಿದ್ದಾರೆ !

ವಸು— ಸುಧೆಯ ವಿಚಾರ ಅವರ ಕಿವಿಗೆ ನೀವು ಹಾಕಲಿಲ್ಲವೇನು ?

ವಿಶು— ಇಲ್ಲ, ಒಮ್ಮೆಲೆ ಹೇಳುವದು ಹ್ಯಾಗೆ ಎಂದು ಹೇಳಲಿಲ್ಲ.

ಸುಧಾ— ಬೇರೆ ಕನ್ಯೆಯನ್ನು ನೋಡಿ ಮದುವೆಯಾದ ಮೇಲೆ ಹೇಳ್ರಿ ! (ಎದ್ದು ಒಳಗೆ ಹೊರಟುಬಿಡುವಳು.)

ವಿಶು— ಸುಧಾ, ಹೀಗೆ ಹೋಗಬೇಡ. ಈ ಮಾತಿನಲ್ಲಿ ನೀನು ಇರಲೇಬೇಕು. ನಮ್ಮಿಬ್ಬರಿಗೂ ಇದು ಸಂಬಂಧಿಸಿದ್ದು.

ವಸು— ಸುಧಾ, ಕೂಡು. ಮನಸ್ಸು ಶಾಂತವಾಗಿಟ್ಟುಕೊಂಡು ಆಲೋಚನೆ ಮಾಡುವದಗತ್ಯ. ಈ ಉಲಕೋಚಿತನ ಇನ್ನು ಬಿಡು. (ಸುಧಾ ಮರಳಿ ಬಂದು, ಗಂಟುಮುಖ ಹಾಕಿಕೊಂಡು ಕೂಡುವಳು.)

ವಿಶು— ಅಕ್ಕಾ, ನಮ್ಮಿಬ್ಬರ ಮದುವೆಗೆ ನಿಮ್ಮೊಪ್ಪಿಗೆ ಇದೆಯೋ ಇಲ್ಲವೊ ಒಮ್ಮೆ ನಿರ್ಧಾರವಾಗಿ ಹೇಳಿಬಿಡ್ರಿ.

ವಸು— ನನ್ನ ಒಪ್ಪಿಗೆ ಇದ್ದರೂ ನಿಮ್ಮ ತಾಯಿತಂದೆಯುವರ ಒಪ್ಪಿಗೆ ಎಲ್ಲಿದೆ ? ನೀವು ಬೇರೆ ಸಮಾಜದ ಹೆಣ್ಣನ್ನು ಮದುವೆಯಾಗಲು ಅವರು ಸಮ್ಮತಿಸುವಂತೆ ಕಾಣುವದಿಲ್ಲ. ಈಗ ಬಂದಿರುವ ತೊಡಕು ಅದು. ಅವರ ಅನುಮತಿ ಇಲ್ಲದೆ............

ವಿಶು— ಅವರ ಅನುಮತಿಯ ಅಗತ್ಯವೇನು ? ವಿವಾಹವೆಂದರೆ ಒಂದು ಗಂಡು, ಒಂದು ಹೆಣ್ಣು ಎರಡೇ ವ್ಯಕ್ತಿಗಳ ವ್ಯವಹಾರ. ಈ ಮಾತು ನಿಮಗೆ ಒಪ್ಪಿಗೆಯಲ್ಲವೆ ? ಅಂದಮೇಲೆ ಇಲ್ಲಿ ತಂದೆತಾಯಿಗಳ ಸಮ್ಮತಿ ಅಸಮ್ಮತಿಗೆ ಅವಕಾಶವೆಲ್ಲಿದೆ ? ಮಕ್ಕಳ ಮದುವೆಯಾಗಬೇಕೆಂದು ಅವರು ಅಭಿಲಾಷೆಪಡುವದು ಮಕ್ಕಳ ಸುಖಕ್ಕಾಗಿ. ತಮ್ಮ ಸುಖಕ್ಕಾಗಿ ಅಲ್ಲ ! ನಾನಾದರೂ ಮದುವೆಯಾಗಬೇಕೆಂಬುದು ಮೊದಲು ನನ್ನ ಸುಖಕ್ಕಾಗಿ. ಅದರಿಂದ ತಂದೆ—ತಾಯಿ, ಬಂಧು-ಬಳಗ, ಆಪ್ತೇಷ್ಟರು ಇವರಿಗೆ ಸಂತೋಷವಾದರೆ ನನಗೆ ಬೇಡವಾಗಿದೆಯೆ ? ಆದರೆ ಕೇವಲ ಅವರ ಸಂತೋಷವೇ ಮುಖ್ಯ ಎಂದು ಮಾತ್ರ ನಾನು ತಿಳಿದಿಲ್ಲ. ಇದು ಎಲ್ಲೆಲ್ಲಿಯೂ ಕ್ರಾಂತಿ ತಲೆಯೆತ್ತಿದ ಕಾಲ. ಈ ಕ್ರಾಂತಿ ಇಂದು ವಿಶ್ವವನ್ನೇ ವ್ಯಾಪಿಸಿದೆ. ರಾಷ್ಟ್ರಗಳ ರಾಜಕಾರಣ, ಜಾತಿ-ಪಂಥಗಳ ನೀತಿ-ಧರ್ಮ, ಸಮಾಜಸಂಸ್ಥೆಗಳ ಆಚಾರವಿಚಾರ, ಯಾವುದನ್ನೂ ಅದು ಬಿಟ್ಟಿಲ್ಲ. ಪ್ರತಿಯೊಬ್ಬನೂ ಇಂದು ಹಳೆಯ ಕಟ್ಟುಗಳನ್ನು ನಿಷ್ಪ್ರ-ಯೋಜಕ ಎಂದು ಬಿಸುಟ್ಟೆ, ಹೊಸ ಕಟ್ಟುಗಳು ಬೇಕೊ ಬೇಡವೊ ಎಂಬ ಅನಿಶ್ಚಿತ ಮನಸ್ಥಿತಿಯಲ್ಲಿ ಕಾತರಬಡುತ್ತಿದ್ದಾನೆ. ಇಂಥ ಕತ್ತಲು ಕವಿದ ಕಾನನದಲ್ಲಿಯೇ ಹಾದಿಯನ್ನು ಹುಡುಕಬೇಕಾಗಿದೆ. ಪ್ರತಿಯೊಬ್ಬ ವಿಚಾರಜೀವಿಗೂ ಒಂದಿಲ್ಲೊಂದು ಬಗೆಯ ಧರ್ಮಸಂಕಟ ಒಮ್ಮಿಲ್ಲೊಮ್ಮೆ

ಬರುವವೇ. ಅಕ್ಕಾ, ನಾನು ಮಾತನಾಡುವದೆಲ್ಲ ನಿಮಗೆ ಅವ್ಯವಹಾರಿಕವಾದ ಧ್ಯೇಯವಾದಿಯ ಕನವರಿಕೆಯೆಂದೆನಿಸಬಹುದು. ಆದರೆ ಇಂಥ ಧ್ಯೇಯ ಜೀವಿಗಳೇ ಇಂದು ರಾಷ್ಟ್ರವನ್ನು ಕಟ್ಟುತ್ತಿದ್ದಾರೆ. ಸಮಾಜವನ್ನು ಹಾದಿಗೆ ಹಚ್ಚುತ್ತಿದ್ದಾರೆ; ವಾಙ್ಮಯವನ್ನು ಉಜ್ವಲಗೊಳಿಸುತ್ತಿದ್ದಾರೆ. ಇಂಥ ಧ್ಯೇಯಜೀವಿಗಳಲ್ಲೊಬ್ಬನೆಂದು ಹೇಳಿಕೊಳ್ಳಲು ನಾನು ಬಂದಿಲ್ಲ. ನನ್ನ ಸ್ವಂತದ ಜೀವನದ ಮಟ್ಟಿಗಾದರೂ ಒಂದು ನಿಶ್ಚಿತವಾದ ಹಾದಿಯನ್ನು ಹಾಕಿಕೊಂಡು, ಆ ಹಾದಿಯಿಂದಲೇ ಹೋಗಬೇಕೆಂಬದು ನನ್ನ ಹಟ. ಪರರಿಗೆ ಅದು ಸರಿದೋರಲಿಕ್ಕಿಲ್ಲ. ಅದಕ್ಕೆ ನಾನು ಮಾಡುವದೇನಿದೆ ?

ಸುಧಾ— ಏನೂ ಮಾಡಬೇಕಾದ್ದಿಲ್ಲ. ನನ್ನ ಜತೆಗೆ ಸಿನೇಮಾಕ್ಕೆ ಬರ್ತೀರೇನು ? ನಿಮ್ಮ ಹತ್ತರ ತಿಕೀಟಿಗೆ ರೊಕ್ಕ . ಇಲ್ಲದಿದ್ದರೆ ನನ್ನ ಹತ್ತಿರ ಇವೆ ! (ಏಳುವಳು.)

ವಸು— ಸುಧಾ, ಇದೇನು ಹುಡುಗತನ ?

ವಿಶು— ಸುಧಾ, ಈಗ ನಡೆದ ಮಾತು ನಿನಗೆ ಬೇಡವಾಗಿದೆಯೇನು ?

ಸುಧಾ— ಈ ನಿಮ್ಮ ಉದ್ದುದ್ದ ಉಪನ್ಯಾಸ ಕೇಳಲಾರೆ. ಇವನ್ನು ನಮ್ಮೆದುರಿಗೆ ಹೇಳಿ ಉಪಯೋಗವೇನು ? ನಮಗಿವು ಗೊತ್ತಾಗಿ ಎಷ್ಟೋ ದಿನಗಳಾದವು. ಅನವಶ್ಯಕ ಮಾತುಗಳನ್ನು ಬೆಳೆಯಿಸಿದರೆ ಮೊದಲೇ ನನಗೆ ತಲೆಬೇಸರ. ನೀವು ಮೊದಲು ನನಗೆ ಏನು ಹೇಳಿದ್ದಿರಿ ?

ವಿಶು— ಏನು ಹೇಳಿದ್ದೆ ?

ಸುಧಾ— ನಮ್ಮ ಮದುವೆಗೆ ನಿಮ್ಮ ತಂದೆತಾಯಿ ಒಪ್ಪುತ್ತಾರೆ ಎಂದು. ಒಪ್ಪದಿದ್ದರೆ ಒಪ್ಪಿಸುವ ವಿಶ್ವಾಸ ಇದೆ ಎಂದು. ಆ ವಿಶ್ವಾಸ ಈಗ ಎಲ್ಲಿ ಹೋಯಿತು ?

ವಿಶು— ಎಲ್ಲಿಯೂ ಹೋಗಿಲ್ಲ. ಆ ವಿಶ್ವಾಸ ಈಗಲೂ ಇದೆ.

ಸುಧಾ— ನನಗೇನು ಕಾಣುವದಿಲ್ಲ. ಆ ಮಾತು ಈಗ ಉಳಿದಿಲ್ಲ.

ವಿಶು— ನಾನು ಈಗಲೂ ಆ ಮಾತು ಹೇಳುತ್ತೇನೆ.

ಸುಧಾ— ಹೇಳುವದಕ್ಕಿಂತ ಮಾಡಿದರೆ ಒಳ್ಳೇದಾದೀತು. ಮದುವೆಯ ಮಾತು ನಡೆದಾಗ ನನ್ನ ಬಗ್ಗೆ ಹೇಳುವದಕ್ಕೇಕೆ ಹಿಂಜರಿದಿರಿ ?

ವಿಶು— ಕೆಲವು ವಿಷಯ ನಾನು ಇನ್ನೂ ತಿಳಿದುಕೊಳ್ಳಬೇಕಾಗಿದೆ.

ಸುಧಾ— ಯಾರ ಬಗ್ಗೆ ? ಯಾತರ ಬಗ್ಗೆ ?

ವಿಶು— ತಿಳಿದುಕೊಳ್ಳುವದು ನಿಮ್ಮ ಬಗ್ಗೆ. ಬೇಕಾಗಿರುವದು ತಂದೆಯವರಿಗೆ; ನನ್ನ ಸ್ವಂತಕ್ಕಲ್ಲ.

ವಸುಧಾ— ವಿಶ್ವಂಭರ, ಮನಸ್ಸು ಶಾಂತವಾಗಿಟ್ಟುಕೊಂಡು ನಾವು ವಿಚಾರಮಾಡದಿದ್ದರೆ ಪರಸ್ಪರರ ತಪ್ಪು ಭಾವನೆಯಿಂದ ಅನಹಿತವಾದೀತು. ನಾನು ಇಂಥ ಪೆಟ್ಟು ತಿಂದಿದ್ದೇನೆ. ಸುಧೆಗೆ ಇಂಥ ಕಟು ಅನುಭವ ಬರಬಾರದೆಂದೇ ನನ್ನ ಆಸೆ. ತರುಣ ರಕ್ತದಲ್ಲಿ ವೇಗ ಹೆಚ್ಚು. ಅದು ನಿಮ್ಮ ತಪ್ಪಲ್ಲ. ಆ ವೇಗಕ್ಕೆ ತಕ್ಕ ದಾರಿ ಕಲ್ಪಿಸಿಕೊಡುವದು ಹಿರಿಯರ ಕೆಲಸ. ಸುಧೆಯ ಕೈಯಿಂದ ಯಾವ ಅವಿಚಾರವೂ ಆಗಬಾರದೆಂದು ನನ್ನ ಇಚ್ಛೆ. ಈ ದೃಷ್ಟಿಯಿಂದಲೇ ನನಗೆ ಸರಿಕಂಡ ರೀತಿಯಲ್ಲಿ ನಾನು ಅವಳನ್ನು ಬೆಳೆಯಿಸಿದ್ದೇನೆ; ಶಿಕ್ಷಣ ಕೊಡಿಸಿದ್ದೇನೆ. ನಿಮ್ಮನ್ನು ಜೀವದ ಜೊತೆಗಾರನಾಗಿ ಆರಿಸುವದರಲ್ಲಿ ಅವಳಿಂದ ತಪ್ಪೇನು ಆಗಿಲ್ಲವೆಂದು ನನ್ನ ನಂಬಿಗೆ. ಆದರೆ ಅವಳನ್ನು ಪತ್ನಿಯಾಗಿ ಮಾಡಿಕೊಳ್ಳುವದರಲ್ಲಿ ನಿಮಗೆ ಸುಖವೆನಿಸಿದಂತೆ ನಿಮ್ಮ ಹಿರಿಯರಿಗೂ ಸಂತೋಷವಾದರೆ ಇದು ಸುಖಾಂತದಲ್ಲಿ ಪರಿಣಮಿಸೀತು. ಇಲ್ಲವಾದರೆ ಇದೊಂದು ದುರಂತ ನಾಟಕವಾದೀತು !

ವಿಶು— ಹಾಗೆ ಆಗಬಾರದೆಂದೇ ನನ್ನ ಪ್ರಯತ್ನ. ನನ್ನ ನಿರ್ಣಯವಂತೂ ಕೊನೆಗೆ ಇದ್ದೇ ಇದೆ. ಅದರಲ್ಲಿ ಎಂದಿಗೂ ಅಂತರ ಬರದು ಆದರೆ ತಂದೆಯವರನ್ನು ಒಪ್ಪಿಸುವಂತಾದರೆ ಎಲ್ಲವೂ ಸಕ್ಕರೆಯಾದೀತು. ಅದಕ್ಕಾಗಿ ನಿಮ್ಮಿಂದ ತಿಳಿಯಬೇಕಾದದ್ದು........ಇದು ಕೇವಲ ತಂದೆಯವರ ಸಮಾಧಾನಕ್ಕಾಗಿ.........ನನಗಾಗಿಯಲ್ಲ....ನಿಮ್ಮ....ನಿಮ್ಮ....ಮನೆತನ........ನಿಮ್ಮ ಕುಲ........ನಿಮ್ಮ ಗೋತ್ರ.........ಇವು ತಿಳಿದರೆ........

ವಸು— ವಿಶ್ವಂಭರ, ಇಂಥ ಪ್ರಶ್ನೆಯನ್ನು ಇನ್ನೊಮ್ಮೆ ಕೇಳಬೇಡಿ. ನನ್ನ ಕುಲ, ಸುಧೆಯ ಹುಟ್ಟು ನಾನು ಯಾರಿಗೂ ಇದುವರೆಗೆ ಹೇಳಿಲ್ಲ,

ಹೇಳುವದಿಲ್ಲ. ಅದು ಗೊತ್ತಾಗುವ ಕಾರಣವೂ ಇಲ್ಲ. ಆದರೆ ನಾನು ನಿಮಗೆ ಇಷ್ಟು ಮಾತ್ರ ಖಂಡಿತವಾಗಿ ಹೇಳಬಲ್ಲೆ—ನನ್ನ ಶೀಲವನ್ನು ನಾನು ಪ್ರಾಣದಂತೆ ಕಾಯ್ದುಕೊಂಡು ಬಂದಿದ್ದೇನೆ. ಸುಧೆಯೂ ತನ್ನ ಕೌಮಾರ್ಯವನ್ನು ಅಚ್ಚಳಿಯದೆ ಪರಿಶುದ್ಧವಾಗಿ ಉಳಿಸಿಕೊಂಡು ಬಂದಿದ್ದಾಳೆ. ನಿಮಗೆ ಬೇಕಾದದ್ದಿಷ್ಟೇ. ಸುಧೆ ನಿಮ್ಮನ್ನು ಪ್ರೀತಿಸುತ್ತಾಳೆ; ನೀವು ಸುಧೆಯನ್ನು ಪ್ರಿತಿಸುತ್ತೀರಿ. ಮುಗಿಯಿತು. ನೀವು ಸುಧೆಯನ್ನು ಪ್ರೀತಿಸುವದು ನಿಮ್ಮ ತಂದೆಯವರಿಗೆ ಗೊತ್ತಿರದೆ ಇದ್ದರೆ ಈಗ ಗೊತ್ತುಮಾಡಿಕೊಡಿ.

ವಿಶು— ಅಕ್ಕಾ, ಈ ಕೆಲಸದಲ್ಲಿ ನೀವೂ ನೆರವಾಗದಿದ್ದರೆ....

ವಸು— ನಿಮ್ಮ ತಂದೆಯವರನ್ನೊಪ್ಪಿಸುವ ವಿಷಯ ನಿಮ್ಮ ಕರ್ತವ್ಯದ ಸೀಮೆಯೊಳಗಿನದು. ಅಲ್ಲಿ ನಾನು ಕಾಲಿಡಲಾರೆ. ವಿರೋಧವೇ ಇದ್ದರೆ ನಿದರ್ಶನಕ್ಕೆ ಬರಲಿ. ನಮ್ಮ ನಡತೆಗೆ ನೀತಿಯ ಅಚ್ಚೊಂದಿದ್ದರೆ ಎಂಥ ವಿರೋಧವೂ ತಲೆಬಾಗುವದು.

ವಿಶು— ಆದರೆ ನಮ್ಮ ಆಚರಣೆಯ ಹೊಸ ರೂಪ ಹಳಬರಿಗೆ ಸರಿ ಎನಿಸುವದಿಲ್ಲ. ನಮ್ಮ ನಡತೆ ಅವರಿಗೆ ಸ್ವೇಚ್ಛಾಚಾರವೆನಿಸುವದು. ಅವರ ಆಚರಣೆ ನಮಗೆ ಡಾಂಭಿಕ ಧರ್ಮವೆನಿಸುವದು. ಈ ತಿಕ್ಕಾಟ ಎಂದಿನಿಂದಲೂ ನಡೆದದ್ದೇ. ಅಕ್ಕಾ, ಈ ಪ್ರಸಂಗದಲ್ಲಿ ನಾನೇನು ಮಾಡಬೇಕೆಂದು ನಿಮ್ಮ ಅಭಿಪ್ರಾಯ ?

ವಸು— ಅದನ್ನು ನಾನು ಹೇಳಲಾರೆ. ನಿಮಗೆ ಸರಿಕಂಡಂತೆ ನೀವು ನಡೆಯಬಹುದು ಆದರೂ ಇಷ್ಟು ಮಾತು ನಾನು ಹೇಳಬಹುದು – ತಂದೆಯವರಿಗೆ ನಿಮ್ಮ ಮನೋಗತವನ್ನು ತಿಳಿಸಿ ಸಾಧ್ಯವಾದ ರೀತಿಯಿಂದ ಅವರನ್ನು ಈ ಮಾತಿಗೆ ಒಪ್ಪಿಸಬೇಕು.

ವಿಶು— ಅವರು ಒಪ್ಪದೇ ಹೋದರೆ ?

ವಸು— ಒಪ್ಪದೇ ಹೋದರೆ........ಒಪ್ಪದೇ ಹೋದರೆ ಈ ವಿಚಾರ ತಲೆಯೊಳಗಿಂದ ತೆಗೆದುಹಾಕಬೇಕು ನೀವು ಸುಧೆಯನ್ನು ಮದುವೆಯಾದರೆ ನಿಮ್ಮ ತಾಯಿ ಪ್ರಾಣಬಿಡುತ್ತಾರೆ; ತಂದೆಯವರಿಗೆ ಪ್ರಾಣಾಂತಿಕ ವೇದನೆಯಾಗುತ್ತದೆ. ಇಂಥ ಕೃತಿಯನ್ನು ಮಾಡಿ ಮಾತೃಹತ್ಯೆಯ ಪಾಪಕ್ಕೆ

ಗುರಿಯಾಗಬೇಡಿ. ನಿಮ್ಮ ತಂದೆಯವರು ಹೇಳುವ ಹಾಗೆಯೇ ಮಾಡಿ. ನನ್ನ ಪಾಲಿಗೆ ಮದುವೆಯೆಂಬುದೊಂದು ಮೃಗಜಲವಾಯ್ತು. ಆ ಹಾಡು ಸುಧೆಗೂ ಬರುವದು ಬೇಡ. ದಾಂಪತ್ಯಜೀವನ ಅವಳ ಹಣೆಯಲ್ಲಾದರೂ ಬರೆದಿದೆಯೊ ಇಲ್ಲವೊ ಯಾರು ಕಂಡಿದ್ದಾರೆ ?

ವಿಶು— ಅಕ್ಕಾ, ಸುಧೆಯ ವಿಚಾರ ನಾನು ಖಂಡಿತವಾಗಿ ತಂದೆಯವರಿಗೆ ಹೇಳುತ್ತೇನೆ. ಆದರೂ ಕುಲಗೊತ್ರದ ಬಗ್ಗೆ ಅವರು ಕೇಳದೆ ಇರಲಾರರು. ಅವರು ಜಾತಿಯ ನೀತಿಯನ್ನು ಅನುಸರಿಸುವವರು, ನೀತಿಯ ಜಾತಿಯನ್ನು ಮನ್ನಿಸುವವರಲ್ಲ. ಈ ಪ್ರಶ್ನೆ ಬಂದಾಗ ಉತ್ತರ ಎಂಬುದೊಂದು ಕೊಡಲೇಬೇಕಾಗುವದಲ್ಲ ?

ವಸು— ಅದಕ್ಕೆ ನನ್ನಿಂದ ಉತ್ತರ ದೊರೆಯಲಾರದು.... ದೊರೆಯಲಾರದು ಅದಕ್ಕೆ 'ಉತ್ತರ ಇಲ್ಲ.' ಎಂದು ಹೇಳಿ ವಿಶ್ವಂಭರ. ನಿಮಗೆ ಜಾತಿಯ ಹೆಣ್ಣು ಬೇಕು; ಸುಧಾ ಜಾತಿಯ ಹೆಣ್ಣಲ್ಲ ನೀತಿಯ ಹೆಣ್ಣು. ಉತ್ತಮ ನೀತಿಯೇ ಉತ್ತಮ ಜಾತಿ ಎನ್ನುವವರಿಗೆ ನಮ್ಮದು ಉತ್ತಮ ಜಾತಿ; ಮಿಕ್ಕವರಿಗೆ ನಾವು ಬಹಿಷ್ಕೃತರು, ಅಧಮರು ! ಕುಲ ಬಾಯಿಂದಾಡಲಾರೆ ಎಂದು ಹೇಳಿದ್ದೇನೆ. ನೀವು ಪುನಃ ಪುನಃ ಅದೇ ಪ್ರಶ್ನೆಯನ್ನೆತ್ತಿ ನನಗೆ ವ್ಯಥೆ ಕೊಡಬೇಡಿ. ಸುಧಾ ಇದ್ದ ಹಾಗೆಯೇ ಅವಳನ್ನು ಅಂಗೀಕರಿಸಲು ನಿಮ್ಮ ತಂದೆ ತಾಯಿ ಸಿದ್ಧರಾಗದೆ ಹೋದರೆ ನಮ್ಮ ಮಟ್ಟಿಗೆ ನಾವು ಇದ್ದುಬಿಡುತ್ತೇವೆ. ನಮ್ಮಿಂದ ಯಾರ ಜೀವನವೂ ಹಾಳಾಗುವದು ಬೇಡ. ಜಾತಿ ! ಜಾತಿ ! ಎಲ್ಲಿ ನೋಡಿದರಲ್ಲಿ ಜಾತಿ ! ಜಾತಿಗೆ ಬೆಲೆ ಏರಿ ನೀತಿಗೆ ನೆಲೆಯಿಲ್ಲದಂತಾಗಿದೆ ! ಈ ಮಾತು ಕ್ಷಣಕ್ಷಣಕ್ಕೂ ನನ್ನ ಅನುಭವಕ್ಕೆ ಬರ್ತಾ ಇದೆ; ಹೃದಯ ವ್ಯಾಕುಲವಾಗುತ್ತಾ ಇದೆ. ಒಂದು ಕ್ಷಣದ ತಪ್ಪಿಗಾಗಿ ಸಾಯುವ ತನಕ ನಾನು ಮರುಗುತ್ತಾ ಇದ್ದೇನೆ, ಕೊರಗುತ್ತಾ ಇದ್ದೇನೆ ! ಆ ಪಾಡು ಸುಧೆಗೆ ಬರುವದು ಬೇಡ, ನಿಮಗೆ ಬರುವದು ಬೇಡ, ಯಾರಿಗೂ ಬರುವದು ಬೇಡ. (ವಿಹ್ವಲಳಾಗಿ, ಹಣೆಗೆ ಕೈ ಹಚ್ಚಿ ಕುಳಿತುಬಿಡುವಳು.)

ಸುಧಾ— ಅಕ್ಕಾ, ಹೆಚ್ಚು ಮಾತನಾಡಬೇಡ. ನಿನಗೆ ತೊಂದರೆ ಯಾದೀತು. ನೀನು ಹೋಗಿ ತುಸು ಅಡ್ಡಾಗು. ವಿಶು, ಈ ಮಾತನ್ನು ಬೆಳೆಸುವದು ಬೇಡ. (ವಸುಧಾಬಾಯಿ ಎದ್ದು ಹೋಗಿಬಿಡುವರು) ಈ ಮಾತ ನ್ನೆತ್ತಿದರೆ ಅವಳ ಮನಸ್ಸಿನ ಮೇಲೆ ಪರಿಣಾಮವಾಗಿ ಅವಳ ಪ್ರಕೃತಿ ಸರಿ ಉಳಿಯುವದಿಲ್ಲ. ನಿಮಗೆ ಏನೇ ಮಾತನಾಡುವದಿದ್ದರೆ ನನ್ನೊಡನೆ ಮಾತ ನಾಡ್ರಿ. ಅದು ಕೂಡ ಅಕ್ಕ ಇಲ್ಲದಾಗ! ಏನೇ ಆಗಲಿ ಈಗ ತಿಳಿಯಿತು ನಿಮ್ಮ ವಿಷಯ.

ವಿಶು— ಏನು ತಿಳಿಯಿತು?

ಸುಧಾ— ನಿಮ್ಮ ಮಾತು, ನಿಮ್ಮ ನಡತೆ ಇದರಲ್ಲಿ ಅಂತರ ಬಹಳ ಇದೆಯೆಂದು. ಇದು ವರೆಗೆ ಹೇಳುತ್ತ ಬಂದಿರಿ-ತಂದೆಯವರಿಂದ ವಿರೋಧ ಬರಲಾರದು ಎಂದು. ಈಗ ಹೇಳುತ್ತಾ ಇದ್ದೀರಿ-ಅಲಂಘ್ಯವಾದ ಹಿಮ ಗಿರಿಯೇ ಹಾದಿಯಲ್ಲಿ ಎದುರು ನಿಂತಿದೆಯೆಂದು!

ವಿಶು— ಸುಧಾ, ಇದು ಕಾಲ್ಪನಿಕ ವಿರೋಧವಲ್ಲ, ಇದ್ದ ಮಾತು. ಅದನ್ನು ತೆಗೆದು ಹಾಕುವದರ ಬದಲು ವಿರೋಧಿಸಿದರೆ ಎಲ್ಲರಿಗೂ ಕೇಡು. ಹಾಗೆ ಮಾಡುವದು ಬೇಡ ಎಂದು ನನ್ನ ಹವಣಿಕೆ. ಅದಕ್ಕೆ ನಿಮ್ಮಿಂದ ಬೇಕಾಗಿರುವದು ನನಗೆ ಒಂದೇ ಉತ್ತರ.

ಸುಧಾ— ನಮ್ಮ ಹತ್ತಿರ ಇರುವದಾದರೂ ಒಂದೇ ಉತ್ತರ!

ವಿಶು— ಇಲ್ಲ ಎಂದು ಹೇಳುವದು ಸರಿಯಾದ ಉತ್ತರವಾಗಲಾರದು.

ಸುಧಾ— ಸರಿಯೊ, ಡೊಂಕೊ! ಅಕ್ಕಗೆ ಅಷ್ಟೇ ಹೇಳಬೇಕಾಗಿದೆ.

ವಿಶು— ಸುಧಾ, ನನ್ನ ಹತ್ತಿರ ಹೇಳುವದಕ್ಕೊ ಸಂಕೋಚವೆ? ಇದ ರಲ್ಲಿ ಯಾವ ರಹಸ್ಯ ಇದೆ, ನನಗೆ ತಿಳಿಯಬಾರದಂಥದು?

ಸುಧಾ— ವಿಶು, ನನಗೂ ನಿಜವಾಗಿ ಗೊತ್ತಿಲ್ಲ. ಅಕ್ಕ ನನಗೂ ಇದನ್ನು ಹೇಳಿಲ್ಲ.

ವಿಶು— ಈ ಮಾತನ್ನೆಂದೂ ನಾನು ನಂಬಲಾರೆ.

ಸುಧಾ— (ಕೆರಳಿ) ಅಂದರೆ ನಾನು ಸುಳ್ಳಾಡುತ್ತೇನೆಂದೊ?

ವಿಶು— ನಾನು ಹೌದು ಅಂದರೆ ನಿನಗೆ ಸಿಟ್ಟು ಬರುವದು.

ಸುಧಾ— ನನ್ನ ಸಿಟ್ಟಿಗೆ ಇನ್ನು ಬೆಲೆ ಕೊಡುವ ಕಾರಣವಿಲ್ಲ.

ವಿಶು— ಇಂಥ ಚುಚ್ಚುಮಾತನಾಡಿ ಹತಾಶವಾದ ನನ್ನ ಹೃದಯಕ್ಕೆ ಹೆಚ್ಚಿಗೆ ಯಾತನೆಗಳನ್ನು ಕೊಡಬೇಡ! ನಿನಗೆ ಆ ರಹಸ್ಯ ಗೊತ್ತಿಲ್ಲ ಎನ್ನುವದನ್ನು ನಂಬಲು ನನ್ನ ಮನಸ್ಸು ಹಿಂಜರಿಯುವದು.

ಸುಧಾ— ಆಗಲಿ, ನಾನು ಅಪ್ರಾಮಾಣಿಕಳೆಂದೇ ತಿಳಿದುಕೊಳ್ರಿ! ಹೌದು, ನನಗೆ ಗೊತ್ತಿದೆ; ನಾನದನ್ನು ನಿಮಗೆ ಹೇಳುವದಿಲ್ಲ. ಸರಿ, ಮಾತು ಮುಗಿಯಿತು. ನಾನು ಅಕ್ಕನ ಹತ್ತಿರ ಹೋಗುತ್ತೇನೆ; ಅವಳನ್ನು ಉಪಚರಿಸಬೇಕು. (ಎದ್ದು ಹೋಗಲನುವಾಗುವಳು)

ವಿಶು— (ಮುನಿಸುಗೊಂಡು) ಇನ್ನುಮೇಲೆ ನಾನು ಈ ಮನೆಗೆ ಬರಬೇಕೊ ಬೇಡವೊ?

ಸುಧಾ— ಅದನ್ನು ನೀವೇ ವಿಚಾರಮಾಡ್ರಿ! (ಹೋಗಿಬಿಡುವಳು. ವಿಶ್ವಂಭರ ಅವಳು ಹೋದ ಕಡೆಗೆ ನೋಡುತ್ತ ಹೊರಬೀಳುವನು.)

— ಒಂದನೆಯ ಅಂಕು ಸಮಾಪ್ತ —

ಅಂಕ ೨

ಪ್ರವೇಶ ೧

[ವಿಶ್ವನಾಥರಾಯರ ಮನೆಯಲ್ಲಿಯ ವಿಶ್ವಂಭರನ ಅಭ್ಯಾಸದ ಕೋಣೆ. ಎಲ್ಲ ಓರಣವಾಗಿದೆ. ಸಾಮಾನ್ಯವಾಗಿ ವಿದ್ಯಾರ್ಥಿಗಳ ಕೋಣೆಯಂತೆ ಹೇಸಿಕೆ ಬರುವ ಹಾಗಿಲ್ಲ. ಕೋಣೆಯಲ್ಲಿಯ ಫರ್ನಿಚರ್: ಪುಸ್ತಕ ಇಡುವ ರ್ಯಾಕು, ಫೋಟೋಗಳು, ಗಡಿಯಾರ, ಬರೆಯುವ ಸಾಹಿತ್ಯ-ಸಿರಿವಂತಿಕೆಯ ದರ್ಶಕವಾಗಿವೆ. ವಿಶ್ವಂಭರ ಒಬ್ಬನೆ ವಿಚಾರ ಮಗ್ನನಾಗಿ ಕುಳಿತಿದ್ದಾನೆ. ಒಂದೆರಡು ನಿಮಿಷ ಕುಳಿತು, ಎದ್ದು ಹೋಗಿ ಒಂದು ಕವನ ಸಂಗ್ರಹದ ಹೊತ್ತಿಗೆಯನ್ನು ರ್ಯಾಕಿನಿಂದ ಹೊರತೆಗೆದು, ಅದರ ಒಂದು ಪುಟವನ್ನು ತೆಗೆದು ಕವನ ಒಂದನ್ನು ಗಟ್ಟಿಯಾಗಿ ಹಾಡಿಕೊಳ್ಳುವನು.]

ಕವನ*

[ಪುಸ್ತಕವನ್ನು ಮುಚ್ಚಿ ಟೇಬಲ್ ಮೇಲೆ ಇಡುವನು. ವಿಶ್ವಂಭರನ ಸ್ನೇಹಿತರಾದ ದೀಕ್ಷಿತ ದಿಗಂಬರ, ದೇಸಾಯಿ ದತ್ತ ಬರುವರು.]

ವಿಶು— ಹ್ಯಲ್ಲೊ! Boys, ಈಗ ನೀವು ಬರಬಹುದು ಅಂತ ಅನಿಸಿತ್ತು.

[ದಿಗಂಬರ ಮತ್ತು ದತ್ತ ಒಂದೊಂದು ಕುರ್ಚಿಯ ಮೇಲೆ ಕೂಡುವರು.]

ದಿಗ— ವಿಶು, ಈಗೆರಡು ದಿನ ನೀನು ಕಾಲೇಜದ ಕಡೆಗೆ ಅಡ್ಡಹಣಿಕಿ ಹಾಕಿಲ್ಲ! ಕಾರಣೇನಪಾ? ನಿನ್ನ ಸುಧಾನೂ ಇಲ್ಲ; ನೀನೂ ಇಲ್ಲ! ಎಲ್ಲಾದರೂ ಟ್ರಿಪ್-ಗಿಪ್ ತಗದಿದ್ದಿರೇನು, ಇಬ್ಬರೆ?

ದತ್ತ— ಅದೆಲ್ಲಾ ಬ್ಯಾರೆ ಅದೇಳೊ! ನಿನಗ ಗೊತ್ತಿಲ್ಲ.

---

* ಇಲ್ಲಿಯ ಕವನವನ್ನು ಕೊನೆಗೆ ಕೊಟ್ಟಿದೆ.

ದಿಗ— ಇವಂದೇನು ರಹಸ್ಯ ಇದ್ದರೂ ನಮಗೆ ಗೊತ್ತಿಲ್ಲದ್ದದಯೇನು? (ವಿಶ್ವಂಭರನಿಗೆ) ಯಾಕ ? ಯಾಕ ಬರಲಿಲ್ಲ ?

ವಿಶು— ಅಣ್ಣನ ಮನಸ್ಸಿನಲ್ಲೀಗ ನನ್ನ ಮದಿವಿ ಮುಗಿಸಿ ಬಿಡಬೇಕು ಅಂತ ಬಂದsದ. ಅದಕ್ಕ ತಾಯಿ ಅತ್ಯವಸ್ಥಳಾಗಿರುವದೇ ಕಾರಣ. ನಾಲ್ಕಾರು ದಿವಸದಲ್ಲಿ ನನ್ನೊಪ್ಪಿಗಿ ತಿಳಿಸಬೇಕು ಅಂತ ಆಗ್ರಹ ಹಿಡವಾನ ಅಣ್ಣ !

ದತ್ತ— ತಿಳಿಸಿಬಿಡಲ್ಲ, ಕನ್ಯಾ ನೋಡಿಟ್ಟೇವಿ ಅಂತ !

ದಿಗ— ಹಾಂಗಾರ ಏನು ಮಾಡಬೇಕೆಂದಿ ? ಇನ್ನೆಷ್ಟು ದಿವಸ ಇದನ್ನ ಮುಚ್ಚಿಡಾsವ ? ಆದಷ್ಟು ಬೇಗೂ ತಿಳಿಸೋದು ನಿನಗೂ ಹಿತ.

ವಿಶು— ಹಿತ ಅಹಿತ ಯಾವದನ್ನೂ ಹೇಳ್ಳಿಕ್ಕೆ ಬರೋಹಾಂಗಿಲ್ಲ. ಎಲ್ಲಾ ಬಹಳ "ಕಾಂಪ್ಲಿಕೇಟೆಡ್" ಅದ ! ಜಾತಿ ಬಿಟ್ಟರ ಅಣ್ಣಗ ಆಗೋದುಲ್ಲ, ಜಾತಿ ಅಂದರ ಅವರು ಬರೋದುಲ್ಲ !

ದಿಗ— ದತ್ತ್ಯಾ, ಇದಕ್ಕ ಒಂದು ಯುಕ್ತಿ ತಗಿಯುಲ್ಲ? ನಿನ್ನ ಬುದ್ಧಿ ಇಂಥಾದರಾಗ ಛಲೋ ಹರೀತದ. ಸಿನೇಮಾಕ್ಕ ಕಥಿ ಬರೀಬೇಕು ಅಂತೀ; ನಾಟಕ ಬರಿಬೇಕು ಅಂತೀ; ಈ ನಾಟಕ ಮುಂದ ಹ್ಯಾಂಗ ನಡಸಬೇಕು? ತಲಿ ಹಾಕು ಸ್ವಲ್ಪ !

ದತ್ತ— ಇಂಥಾದರಾಗ ತಲಿ ಹಾಕಿ ತಲಿ ಕಳಕೊಳ್ಳೋದು ಯಾಂವ ಹೇಳ್ಯಾನ ? ನಮ್ಮ ವಿಚಾರೆಲ್ಲ illogical, impracticable ಅಂತ ಬ್ಯಾರೆ ಹೆಸರಿಡ್ತೀರಿ ! ಹೇಳಿ ಅನಿಸಿಗೊಳ್ಳೋದೆಲ್ಲೀದು ಮಹಾರಾಯಾ !

ದಿಗ— ಹಾಂಗ ನೋಡಿದರ ಅಸಾಧ್ಯ ಅಂಬೋದು ಜಗತ್ತಿನೊಳಗ ಯಾವದೂ ಇಲ್ಲ. ಈ ಜನ್ಮದೊಳಗ ಸಾಧಿಸದು ಇದ್ದರ ಇನ್ನೊಂದು ಜನ್ಮದಾಗ ಸಾಧಿಸೀತು ಅಂದರ ಬಂತೇನು ?

ದತ್ತ— (ಕೈಯಲ್ಲಿಯ ಪುಸ್ತಕವನ್ನು ಮೇಜಿನ ಅಪ್ಪಳಿಸಿ) ನನ್ನ ತಲ್ಯಾಗ ಈಗೊಂದು ವಿಚಾರ ಬಂದsದ. ವಿಶ್ಯಾ ಮಾಡಲಿಕ್ಕೆ ತಯಾರಿದ್ದರ ಆ ಪ್ಲ್ಯಾನು ಹೇಳ್ತೀನಿ ಬೇಕಾದರ ! ಆದರ ನಮ್ಮವೆಲ್ಲ 'novel methods

ಹೊಸಾ ರೀತಿ! ವಿಶುನಂಥಾ sentimental ಮತ್ತು ಅತಿ sensitive ಮಂದಿಗೆ ಅದು ಒಗ್ಗತಕ್ಕದೊ ಇಲ್ಲೋ ನಾ ಹೇಳಲಾರೆ!

ದಿಗ— ಈ ಮಾತು ನಮಗ ಮೊದಲs ಗೊತ್ತಿತ್ತು. ಡಾಕ್ಟರ್ ಆದಂವ ರೋಗಿನ್ನೋಡಿ ಔಷಧ ಕೊಡಬೇಕು. ಕುದುರೆಗೂ ಅದೇ ಔಷಧ, ಸವಾರಗೂ ಅದೇ ಔಷಧ ಅಂದರ ಹ್ಯಾಂಗ ನಡದೀತು? ನಿನ್ನವೆಲ್ಲಾ ಏಕಮೂಲಿಕಾ ಪ್ರಯೋಗದ ಪದ್ಧತಿ! ಅಂತs impracticable ಅಂಬೋದು ನಾವು.

ವಿಶು— ದತ್ತ್ಯಾ, ನೀನು ನಮ್ಮ ಮಾತಿನೊಳಗ ಅಡ್ಡಡ್ಡ ಬಂದು ನಮ್ಮ ತಲಿ ಕೆಡಿಸಬ್ಯಾಡ. ಅಲ್ಲೊಂದು ಹೊಸ 'ಅಲ್ಬಮ್' ಅದ, ನೋಡಿಕೋತ ಥಣ್ಣಗ ಕೂಡು.

ದತ್ತ— ನಿಮ್ಮ ಕಡಿಂದ ಏನೂ ಆಗೋದುಲ್ಲ್ರ್ಯೊ! ಅದಕ್ಕೂ ಕುವ್ವತ್ತು ಬೇಕು, ಕುವ್ವತ್ತು! ಮಿಜಿ ಮಿಜಿ ಮಾಡುವರ ದಿವಸ ಅಲ್ಲಿವು! Speed is the Key-note of this age! Speed is actually life! The faster the motion the fuller the life!' ಹ್ಯಾಂಗದ ಮಾತು?

ದಿಗ— ವಿಶಾ, ಇವಗೊಂದು ಕಿಟ್ಲಿ ಚಹಾ, ಒಂದು ಪ್ಯಾಕ್ ಸಿಗರೇಟು ಕೊಟ್ಟು ಕೂಡಿಸಿಬಿಡೊ. ಇಲ್ಲದಿದ್ದರ ಹಿಂಗs ನಮ್ಮನ್ನ ಕಾಡ್ತಾನಿವ!

ದತ್ತ— ಮಗನs, ಈಗ ಚಹಾ ಬಂದರ ನೀನು ಕುಡೀಲಿಕ್ಕೇ ಇಲ್ಲ. ವಿಶ್ಯಾ, ದಿಗ್ಯಾ ಅಂಥಾಂಗs ಒಂದು ಕಿಟ್ಲಿ ಚಹ ಒಂದು ಸಿಗರೇಟ ಪಾಕೀಟು ತರಿಸಿಬಿಡಪಾ! ನಾವು ನಿಮ್ಮ ಮಾತಿನೊಳಗs ಬರೂದುಲ್ಲ.

ವಿಶಾ— ಈಗ ಚಹಾಗಿಹಾ ಏನೂ ಇಲ್ಲ. ನಾವು ಮೂರೂಮಂದಿ ವಿಚಾರ ಮಾಡಿ ಯಾವುದೂ ಒಂದು ಹಾದಿ ತೆಗೆಯಲೇಬೇಕು. ಏ ದತ್ತ್ಯಾ 'ಸ್ವಲ್ಪ' ಸೀರಿಯಸ್ ಆಗಲ್ಲ. (ದತ್ತ ಗಂಭೀರ ಮುಖ ಮಾಡಿಕೊಂಡು ಕೂಡುತ್ತಾನೆ. ಅಷ್ಟರಲ್ಲಿ ಆಳು ರಾಮು ಬರುವನು.)

ರಾಮು— ಹೊರಗ ಬಿಷ್ಟಂಭಟ್ಟ ಬಂದಾನ್ರಿ. ತಮ್ಮನ್ನ ಕಾಣಬೇಕಂತಾನ್ರಿ.

ದತ್ತ— ಏ, ಎಲ್ಲೀ ಬಿಷ್ಟಂಭಟ್ಟ? ಮೊದಲು ಚಹಾ ಬರಲಿ.

ವಿಶು— ರಾಮಾ, ಒಂದು ಕಿಟ್ಲಿ ಚಹಾ ಮತ್ತು ಒಂದು ಸಿಗರೇಟ್ ಪಾಕೀಟು ತೊಗೊಂಡು ಬಾ. ಮತ್ತ ಆ ಭಟ್ಟನ್ನ ಕಳಿಸಿಕೊಡು ಒಳಗ. (ರಾಮು ಹೋಗುವನು.) ಈ ಬಿಷ್ಟಂಭಟ್ಟ ಪೀಡಾ ನಮ್ಮ ಭೆಟ್ಟಿಗ್ಯಾಕಪಾ ? ನಮ್ಮ ಹತ್ತರ ಇವನ ಕೆಲಸ ಏನಿರಬೇಕು ?

ದತ್ತ— ಎಂ. ಎ.ದ ನೋಟ್ಸು ಬೇಕಾಗಿದ್ದಾವೇಳೊ ?

ದಿಗ— ಅಂವ ವಧುವರ ಏಜನ್ಸಿ ಮಾಡ್ತಾನಂತೊ ಇತ್ತೀಚೆಗೆ ! ಕನ್ಯಾದ ಗಿರಾಕಿ ಕರಕೊಂಡು ಬಂದಿರಬೇಕು ನೋಡಂವ ! ವಿಶ್ವನಾಥ ರಾಯರs ಕಳಿಸಿದ್ದಾರು ಬಹುಶಃ!

ವಿಶು— ಇದ್ದರೂ ಇರಬಹುದು. ಈಗ ಬರ್ತಾನಲ್ಲ. ಏನಿದ್ದದ್ದು ಬೈಲಿಗೇ ಬೀಳ್ತsದ. ಆದರ ನೀವಿಬ್ಬರೂ ಎದುರಿಗೆ ಇದ್ದಾಗ ಹೇಳ್ತಾನೊ ಇಲ್ಲೊ ಅಂವ !

ದತ್ತ— ನಾವಿಬ್ಬರೂ ವರ ಅಲ್ಲೇನೊ ಪಾಪ ! ನೀ ಒಬ್ಬನೇ ಏನೊ ಕಾಮಣ್ಣ ! ನಿನಗ ಅವು ಬಾಡಾದರ ನಮಗೂರs ಬಂದಾವಲ್ಲ ! ನೀನು ಸುಮ್ಮನೆs ಕೂಡು, ನಾ ಎಲ್ಲಾ ಅವನ್ನ ಮಾತಾಡಸ್ತೀನಿ !

(ಬಿಷ್ಟಂಭಟ್ಟ ಬರುತ್ತಾನೆ.)

ವಿಶು— ಓ, ಬನ್ರಿ, ಆ ಕುರ್ಚಿ ಮ್ಯಾಲ ಕೂಡ್ರಿ. (ಬಿಷ್ಟಂಭಟ್ಟ ಎಲ್ಲರಿಗೂ ಕೈಮುಗಿದು ಕೂಡುವನು.) ಏನು ಬಂದಿದ್ದಿರಿ ?

ಬಿ— ನಿನ್ನೆ ರಾಯರ್ನ ಕಂಡಿದ್ದೆ. ತಮ್ಮನ್ನೂ ಕಾಣೋಣ ಅಂತ ಬಂದೆ.

ವಿಶು— ಕಾರಣ ? (ರಾಮು ಚಹ ತಂದು ಎಲ್ಲರಿಗೂ ಕೊಡುತ್ತಾನೆ.)

ಬಿ— ಒಂದು ವಿಷಯ ಪ್ರಸ್ತಾಪ ಮಾಡೋದಿತ್ತು.....(ಅತ್ತಿತ್ತ ನೋಡಿ, ಅನುಮಾನಿಸುತ್ತ) ಸಾಯಂಕಾಲ ಬರ್ತೀನಿ....

ದಿಗ— ಸಂಕೋಚಪಡುವ ಕಾರಣಿಲ್ಲ, ಭಟ್ಟರs !

ವಿಶು— ಇವರು ತೀರ ನನ್ನ ಗೆಳೆಯರು. ಹೇಳ್ರಿ, ಹೇಳ್ರಿ.

ದತ್ತ— ಹೇಳ್ರಿ ಭಟ್ಟರs, ಲಗ್ನದ್ದೇನಾವರೂ ಇದ್ದರ ನಮಗೂ ಅಷ್ಟು ತಿಳೀಲಿ! ನಮ್ಮವೂ ಇನ್ನೂ ಲಗ್ನ ಆಗೋವವ! ಒಂದು ಹೊಡತಕ್ಕ ಮೂರು ಹಕ್ಕಿ ಜಿಗದು ಬೀಳ್ತಾವ ನೋಡ್ರಿ!

ಬಿ— ರಾಯರು ಹೇಳಿದರು—ತಮ್ಮ (ವಿಶೂನ ಕಡೆಗೆ ಕೈಮಾಡಿ) ಮದಿವಿ ವಿಚಾರ. ಮೂರು ನಾಲ್ಕು ಸರ್ವೋತ್ಕೃಷ್ಟ ಸ್ಥಳ ಅವ........

ದಿಗ— ಅಂವಗ ಬೇಕಾಗೋದು ಒಂದs ಭಟ್ಟರ!

ದತ್ತ— ಉಳಿದ ಕನ್ಯಾಕ್ಕ ನಾವಿದ್ದೀವಲ್ಲ!

ವಿಶು— ಸದ್ಯಕ್ಕ ಮದಿವಿ ವಿಚಾರ ಇಲ್ಲ ನನ್ನದು. ಮಾಡಿಕೋಬೇಕು ಅಂತ ಅನಿಸಿದಾಗ ನಿಮಗ ತಿಳಿಸ್ತೀನಂತ.

ಬಿ— ಇಲ್ಲ, ತಾವೊಮ್ಮೆ ಕಣ್ಣಿನಿಂದಾದ್ರೂ ನೋಡ್ರಿ. ಕನ್ಯಾ ಮನಸಿಗೆ ಬಂದರ ಕಬೂಲಿ ಕೊಡ್ರಿ. ಕಲಿತವರಿದ್ದಾರ; ರೂಪವತಿಯರಿದ್ದಾರ; ಒಳ್ಳೇ ಮನೆತನ; ಯಾವ ಕುಂದೂ ತಗಿಯೋ ಹಾಂಗಿಲ್ಲ!

ದತ್ತ— ತಗೀಲಿಕ್ಕೆ ಬಾರದಿದ್ದರ ಮುಂದ ಗತಿ?

ಬಿ— ಹಾಂಗಲ್ಲ ರಾಯರ. ಲಕ್ಷಣವತಿಯರು; ಯಾವ ಕುಂದೂ ಇಲ್ಲಾ ಅಂತ!

ದತ್ತ— ಅವರ 'ಚೆಹರಾ ಪಟ್ಟಿ' ಅದ ಏನು ನಿಮ್ಮ ಹತ್ತರ? ಇದ್ದರ ಕೊಡ್ರಿ.

ದಿಗ— ಇದೇ ಊರವರೇನು?

ಬಿ— ಅಲ್ಲ, ರಾಯರ. ಪರಸ್ಥಳದ ಕನ್ಯಾ. ಇವತ್ತ ನಾಳೆ ಇಷ್ಟರಾಗs ಬರೋವವ.

ದತ್ತ— ಇಂಥಾ ಸುದ್ದಿ ನೀವು 'ಬ್ರಾಡ್‌ಕಾಸ್ಟ'ಮಾಡಿ ತಿಳಿಸ್ತಿರೇನು? ಇದಕ್ಕಂತಾರ speed! ಹಾಂಗಾರ ಕರಕೊಂಡು ಬಂದುಬಿಡ್ರಿ. ವಿಶ್ವಂಭರ ನೋಡದಿದ್ದರ ನಾವು ನೋಡ್ತಿವಿ! ನಾಲ್ಕಾರು ದಿನ ಚಹಾ ಬೇಸನ್ನುಂಡಿ ಯಾದರೂ ಯಥೇಚ್ಛಾ ಸಿಕ್ಕೀತು.

ವಿಶು— ಬಿಷ್ಟಂಭಟ್ರ, ಸದ್ಯಕ್ಕ ಪತ್ರ-ಗಿತ್ರ ಹಾಕಿ ಕರಸೊ ಉಸಾಬರಿ ಮಾಡಬ್ಯಾಡ್ರಿ. ನಾನು ನೋಡಬೇಕು ಅಂದಾಗ ನಿಮಗ ತಿಳಿಸ್ತೀನಿ. ಒಳ್ಳೇದು, ನಮಗ ಬ್ಯಾರೆ ಕೆಲಸವ, ಮತ್ತ ಭೆಟ್ಟಿಯಾಗ್ರಿ. ನಮಸ್ಕಾರ.

ಬಿ— ಉಂ, ಹಂಗಾರ ಬರ್ತೀನಿ ರಾಯರ. ಮತ್ತ ಬಂದು ತಮ್ಮನ್ನ ಕಾಣ್ತೇನಿ. (ಹೋಗುವನು.)

ದಿಗ— ಹುಂ, ದತ್ತ್ಯಾ, ನೀನು ಆಗಲೇ ಏನೊ ಹೇಳತಿದ್ದೆಲ್ಲ ? ನಿನ್ನ ಪ್ಲ್ಯಾನು ? ಏನದೊ ಒಮ್ಮೆ ಬೈಲಿಗೆ ಹಾಕು .

ವಿಶು— ಅವನ ಪ್ಲ್ಯಾನೂ, ಅಂವ ! ಇರೋದೇನದರಾಗ ? Something nonsense!

ದಿಗ— ವಿಶು, ಒಮ್ಮೆ ಕೇಳೋಣ. ದತ್ತ್ಯಾ, ವಿಚಾರಮಾಡಿ ಹೇಳಿದಿ, ನಿನ್ನ ಗತಿ ನೆಟ್ಟಗದs ! ಇಲ್ಲದ ಹುಚ್ಚುಚ್ಚಾರ ಬಡಿದಿ ಅಂದರ ನಿನ್ನ ಜೀವಾನs ತೊಗೋತೀನಿ !

ದತ್ತ— ಅಂದಮ್ಯಾಲ ಹೇಳೋದs ಬಿಟ್ಟರಾತ್ಯಲ್ಲ! ಪ್ಲ್ಯಾನು ಚಲೊ ಇದ್ದರ ಬಕ್ಷೀಸೇನಿಲ್ಲ. ಕೆಟ್ಟಿದ್ದರ ಮಾತ್ರ ಶಿಕ್ಷಾಕ್ಕ ನಾವು ಪಾತ್ರರು ! ಇರಲಿ. ನ್ಯಾಯ ಅನ್ಯಾಯ ನಿಮ್ಮ ಸುತ್ತ ! ನಮ್ಮ ಕರ್ತವ್ಯ ನಾವು ಮಾಡಿದರಾತ್ಯು, ಅದೂ ಫಲಾಪೇಕ್ಷೆ ಇಲ್ಲದೆ !

ದಿಗ— ಅಹಹ, ಮಹಾ ಕರ್ಮಯೋಗಿ ಮಗಾ ! ವಿಶು, ದತ್ತ್ಯಾನ ಪ್ಲ್ಯಾನು ಇರಲಿ, ನಾನು ಕೇಳ್ತೀನಿ, ಹೇಳು: ನಿನ್ನ Love affairದ ಬಗ್ಗೆ ವಿಶ್ವನಾಥರಾಯರಿಗೆ ಏನೂ ಗೊತ್ತಿಲ್ಲ ಹೌದಲ್ಲೊ ?

ವಿಶು— ತುಸು ಸಂಶಯ ಬಂದಿರಬೇಕು.

ದಿಗ— ನೀನೇನು ಹೇಳಿಲ್ಲ ಅನ್ನು.

ವಿಶು— ಇಲ್ಲ.

ದಿಗ— ಒಳ್ಳೇದು ಈ ವಸುಧಾಬಾಯಿಯವರು ಯಾವ ಜಾತಿಯವರಂತ ? ಅವರ ಗಂಡ ಯಾರು ? ಊರ್ಯಾವದು ?

ವಿಶು— ಎಲ್ಲಾ Mysteryನs ಅದsನಪಾ !

ದಿಗ— ಏನು ? ಹೇಳಿದರೇನು ?

ವಿಶು— ಸುಧೆಯು ಹುಟ್ಟು, ತಮ್ಮ ಕುಲ ಎಂದೂ ಹೇಳುವದಿಲ್ಲ, ಯಾರಿಗೂ ಹೇಳುವದಿಲ್ಲ ಅಂದರು.

ದಿಗ— ಎಲ ! ಇದೊಂದು ವಿಚಿತ್ರsನs ಅದsಲ್ಲಾ !

ದತ್ತ— ಏ, ಏ, ಹೆಣ್ಣಿನ ಕುಲ, ತಾಯಿಯ ಶೀಲ ಎಣಿಸಬಾರದು ! ಒಟ್ಟು ಹೇಳೋದಕ್ಕ ಬಾರದು ಅಂದವ್ಯಾಲ ಹೇಳೊ ಹಾಂಗಿಲ್ಲ ಅಂತರ್ಥ! ವಿಶಾ, ನಿನ್ನ life romantic ಆಗೋದದ, ಇದರಾಗೇನೂ ಸಂಶಯ ಇಲ್ಲ ! ಎಲ್ಲರ ಮದುವೆ ಹಾಂಗ ಮದುವೆ ಆತ್ಯು, ಅವರ್ಹ್ಯಾಂಗ ಮಕ್ಕಳ್ನ ಹಡದ, ಹ್ಯಾಂಗೊ ಜೀವಿಸಿದ, ಹ್ಯಾಂಗೂ ಸತ್ತ, ಅಂದರ ಸ್ವಾರಸ್ಯ ಇಲ್ಲ ! Romance! Adventure!! Mystery!!

ವಿಶು— and misery. ನನ್ನ ಅದೃಷ್ಟದಲ್ಲಿ ಏನೇ ಇದ್ದರೂ ಸುಧೆಗಾಗಿ ಅದನ್ನ ಅನುಭವಿಸಲಿಕ್ಕೆ ತಯಾರಿದ್ದೀನಿ ನನ್ನ ಪ್ರಾಣಾನs ಆಕಿ ! Oh, such a lovely thing!

ದಿಗ— ಅದು ನಮಗ ಗೊತ್ತದsನೊ ! ಆದರ ಈ ರಹಸ್ಯ ಏನಿರಬೇಕು ಅಂತ ನಿನ್ನ ಕಲ್ಪನಾ ಅದ ?

ವಿಶು— ಈ ವಿಷಯ ತಿಳಕೋಬೇಕು ಅಂತ ಎಂದೂ ನನ್ನ ತಲಿಯೊಳಗs ಬರಲಿಲ್ಲ ! ಕಾಲೇಜದೊಳಗ ಸುಧಾನ ಪರಿಚಯ ಆತ್ಯು, ಸ್ನೇಹ ಬೆಳೆಯಿತು, ಮನಸ್ಸು ಕೂಡಿತು. ಸರಿ, ನಿಶ್ಚಯಮಾಡಿದೆ—ಮದುವೆಯಾದರ ಅವಳ್ನs ಮದುವೆಯಾಗಬೇಕೂ ಅಂತ. ಅವಳೂ ಅದಕ್ಕ ಒಪ್ಪಿದ್ಲು.

ದತ್ತ— ಇನ್ನ ಉಳಿದ ಕೆತ್ತೇಬಾಜಿ ಹಿರೇರು ಮಾಡಬೇಕು ! ವಿಶಾಗ ಮಾಡೊ ಕಾರಣೇನದ ?

ದಿಗ— ಮನಿಯೊಳಗಿನ ಅವರ ರೀತಿ ಪದ್ಧತಿ ಹ್ಯಾಂಗವ ?

ವಿಶು— ಎಲ್ಲಾ ಈಗಿನ ಕಾಲದ ನವನಾಗರಿಕತೆಯ ರೀತಿ. ಅದರಿಂದ ಏನೂ ತಿಳಿಯುವದಿಲ್ಲ.

ದಿಗ— ಅವರ ಊಟ ತಿಂಡಿ ಹ್ಯಾಂಗ ?

ವಿಶು— ಎಲ್ಲಾ ನಮ್ಮ ಹ್ಯಾಂಗs. ಆದರ ಒಮ್ಮೊಮ್ಮೆ ಆಮ್ಲೆಟ್ ಮಾಡ್ತಾರ, ಮೀನ ತರಸ್ತಾರ !

ದತ್ತ— ಈ ಕಾಲದಾಗ ಮೀನ ಮೇಷ ಅಂದರ ನಡಿಯೋದಿಲ್ಲ! ಈಗಿನ ಯಾವ ಕಾಲೇಜ ತರುಣಿ ಆಮ್ಲೆಟ್ ತಿನ್ನುವದಿಲ್ಲ ?

ವಿಶು— ಅದಕ್ಕೆಲ್ಲಿ ನನ್ನ ಆಕ್ಷೇಪಣೆ ಅದ ? ನಾವು ಸದ್ಯಕ್ಕ ವಿಚಾರ ಮಾಡ್ತೀರೋದು ಅಣ್ಣಾನ ದೃಷ್ಟಿಯಿಂದ.

ದಿಗ— ಇರಲಿ, ವಸುಧಾಬಾಯಿಯವರ ನಡತಿ ಹ್ಯಾಂಗದ ?

ವಿಶು— ನನ್ನ ದೃಷ್ಟಿಯಿಂದ ಆಕ್ಷೇಪಾರ್ಹವಾದದ್ದೇನೂ ಕಾಣುವದಿಲ್ಲ. ಸ್ವಲ್ಪ ಸೊಗಸಿನ ಸ್ವಭಾವ; ಪುರುಷ ಸಮಾಜದಲ್ಲಿ ಸಲಿಗೆಯಿಂದ ನಡೀತಾರ. ಅದು ಕಲಿತವರೊಳಗ ಸಹಜ ಅನ್ನು !

ದತ್ತ— All's well that ends well. Here all is not well.

ದಿಗ— ಅವರ ವಿಷಯ ಕೇಳಿ ಗೊತ್ತದಯೇನು ವಿಶ್ವನಾಥರಾಯರಿಗೆ?

ವಿಶು— ನನಗs ಗೊತ್ತಿಲ್ಲ, ಅವರಿಗೇನು ಗೊತ್ತಿರಬೇಕು ?

ದತ್ತ— ಏ ದಿಗ್ಯಾ, ನಾನು ಪ್ಲ್ಯಾನು ಹೇಳಬೇಕು ಅಂದರ ನೀ ಪಂಚ-ನಾಮೆ ನಡಸೀಯೇನು ?

ವಿಶು— ಈ ಮೂರ್ಖನ್ನ್ಯಾಕ ಕರಕೊಂಡು ಬಂದೀ? ದತ್ತ್ಯಾ ಇದರ ಬಗ್ಗೆ ಏನಾದರೂ ವಿಚಾರ ಮಾಡೋಣಂತಿಯೊ ಬ್ಯಾಡೊ ?

ದತ್ತ— ಏ, ಹಂಗಾರ Inner Voiceಗೆ ಕೇಳ್ತೀನಿ, ಸ್ವಲ್ಪ ಸಮಾಧಾನ ಮಾಡು. (ಕುರ್ಚಿಯ ಮೇಲೆ ಪದ್ಮಾಸನ ಹಾಕಿ ಎದೆಗೆ ಕೈಹಚ್ಚಿ ಕಣ್ಣು ಮುಚ್ಚುವನು. ಒಂದೆರಡು ನಿಮಿಷ ವಿಶ್ವಂಭರ ಮತ್ತು ದಿಗಂಬರ ಅವನನ್ನು ನೋಡುತ್ತ ಕೂಡುವರು.)

ದಿಗ— ದತ್ತ್ಯಾ, ಈ ನಿನ್ನ ಸಮಾಧಿಗೆ ಸಮಾಧೀನs ಆಗ್ತದ ನಿನ್ನದು !

ದತ್ತ— (ಸಮಾಧಿಯಿಂದ ಎಚ್ಚತ್ತವನಂತೆ ಕಣ್ತೆರೆದು ಅಭಯ ಕೊಡುವವ ರಂತೆ ಕೈಮಾಡಿ) ಬೇಟಾ ನಿನ್ನ ಚಿಂತೆ ಬೇಗನೆ ಪರಿಹಾರವಾದೀತು ! ಪೃಥ್ವಿ ಎಂಬರ್ಥದ ನಾಮಧೇಯ ಯಾರದಿದೆಯೊ ಅವರಿಂದ ನಿನ್ನ ಕಾರ್ಯ ಕೈಗೂಡೀತು. ವಸುಧಾ ಅಂದರೆ ಪೃಥ್ವಿ. ಅವರು ವಿಶ್ವನಾಥರಾಯರನ್ನು ಕಾಣಬೇಕು; ಪರಿಚಯ ಬೆಳಸಬೇಕು ಇಂಥ ವಿಷಯದಲ್ಲಿ ಸ್ತ್ರೀಯರ ಸಂಧಾನ ಎಂದಿಗೂ ನಿಷ್ಫಲ ಆಗೋದಿಲ್ಲ! ಇದು practical psychology ! ಪ್ರಯೋಗ ಮಾಡಿ ನೋಡು, ಕೆಲಸ ಕೈಗೂಡದಿದ್ದರ ಹೇಳು !

ದಿಗ— ವಿಶು, ಇದರಲ್ಲಿಯ ಚೇಷ್ಟೆಯ ಮಾತು ಬಿಟ್ಟರೂ ನಿಮ್ಮ ತಂದೆಯವರನ್ನ ವಸುಧಾಬಾಯಿಯವರು ಕಂಡು ಮಾತನಾಡಿದರ ಈ ಸಮಸ್ಯೆ, ಬಗೆ ಹರಿದರೂ ಹರಿದೀತು. ನೀನೇ ಅವರ ಮನವೊಲಿಸಿದರ ನೆಟ್ಟಗಾದೀತು.

ವಿಶು — ಅದು ಸಾಧ್ಯ ಇಲ್ಲ ಅದನ್ನೂ ಕೇಳಿ ನೋಡಿದೆ. ಅದಕ್ಕೆ ಅವರು ಸಿದ್ಧರಿಲ್ಲ

ದತ್ತ— ಇದೇನೊ ಎಲ್ಲಾ ಅಡ್ಡಾತಿಡ್ಡಾ, ಅವ್ಯವಸ್ಥಾ, ಅನವಸ್ಥಾ, ದುರವಸ್ಥಾ ! ಯಾಕ ಬೇಕಾಗಿದ್ದೀತಪಾ ಮಹಾರಾಯಾ ಈ ಪ್ರೇಮ ವಿವಾಹ ! ಸುಸೂತ್ರ ನಮ್ಮ ಜಾತೀದs ಯಾವದೊ ಒಂದು ಹೆಣ್ಣು ನೋಡಿ ಗಂಟುಹಾಕಿಕೊಂಡು ಬಿಟ್ಟರ, ವಡ್ಡರ ಬಂಡಿ ನಡೆದಾಂಗ ನಡದಿರ್ತ್ತದ ಸಂಸಾರದ ರಥ ಕುಂಟಿಗೊ ಕೂರಿಗೊ ಅಂತ ! ಎಲ್ಲ್ಯಾದರೂ ಸ್ವಲ್ಪ ಒಗ್ಗಾಲಿ ಆದರೂ ಸಹsಜ ಎತ್ತಿ ಹಾದಿಮ್ಯಾಲ ಇಡಬಹುದು. ಈ ಪ್ರೇಮವಿವಾಹ ಅಂದರ ವಿಮಾನದಾಗ ಹೋಧಾಂಗ! ಸುರಳೀತ ಹೋದವು ಬಲು ಸುಖ. ಆದರ ಯಾವಾಗ ಮುರುಕೊಂಡು ಬಿದ್ದಾವು ಗೊತ್ತಿನವಲ್ಲ. ಇಂಥಾ ಮದಿವಿ ಆಗೋವಾಗೂ ಸುಖ ಇಲ್ಲ, ಆದಮ್ಯಾಲೂ ಸುಖ ಆದೀತು ಅಂಬೊ ಭರವಸ ಇಲ್ಲ. ಮಾತು ಮಾತಿಗೂ ನೀವೇನು ಹೆಚ್ಚು ನೀವೇನು ಹೆಚ್ಚು ! ಎರಡು ತಕ್ಕಡಿಯೊಳಗ ಎರಡು ಕಪ್ಪಿ ಹಚ್ಚಿ ತೂಕಾ ಮಾಡಿ ಧಾಂಗ ಇರ್ತ್ತsದ! ನಾ ಮಾತ್ರ ಎಂದೆಂದೂ ಈ ಪ್ರೇಮವಿವಾಹದ ಗೋಜಿಗೇ ಹೋಗೋದಿಲ್ಲ ನೋಡು ! ಊಂ, ಹುಂ ! ಅಚ್ಚ ಬಯಲುಸೀಮೆಯ

ಕೆಚ್ಚ ಧಡೂತಿ ಹೆಣ್ಣು ಮಾಡಿಕೊಂಡು ಬಿಡsಂವ! ಒಮ್ಮೆ ಮದವಿ ಮಾಡಿಕೊಂಡು ತಂದು ಮನ್ಯಾಗ ಒಗದಿವಿ ಅಂದರ, ಜನ್ಮ ಇರೋತನಕ ನಮ್ಮನ್ನ ಅವರು ಬಿಡೊಹಾಂಗಿಲ್ಲ, ಅವಗ್ನ ನಾವು ಬಿಡೊಹಾಂಗಿಲ್ಲ!

ದಿಗ— ದತ್ತ್ಯಾ, ಬರೆ ಚಾಷ್ಟಿಯೊಳಗs ನಿನ್ನ ಜನ್ಮ ಹೋತ್ಯಲ್ಲೊ! ಪ್ರಸಂಗೇನು? ನಾವು ಎಷ್ಟು seriously ವಿಚಾರಮಾಡ್ತಾ ಇದ್ದೀವಿ! ಇಲ್ಲಿ ನೋಡು, ನಿನಗ ಕೈಮುಗೀತೀವಿ. ಒಂದು ಗಳಿಗಿ ಬ್ರೆಕ್ ಹಾಕಿ ಪಿಟ್ಟನದ ಕೂತುಬಿಡು. ನಡುವೆ ಬಾಯಿ ಹಾಕಿದಿ ಅಂದರ ನೋಡು....

(ದತ್ತ ಸಮ್ಮತಿ ಸೂಚಕ ಗೋಣು ಅಲ್ಲಾಡಿಸಿ, ಎದ್ದು ಒಂದು ಪುಸ್ತಕ ತೆಗೆದು ಕೊಂಡು ಬೇರೆ ದೂರವಿರುವ ಕುರ್ಚಿಯಲ್ಲಿ ಓದುತ್ತ ಕೂಡುತ್ತಾನೆ.)

ದತ್ತ— ನಮ್ಮ ಕುಲದೇವರಾಣಿ, ಇನ್ನ ಮಾತಾಡೋದುಲ್ಲ ಮಹಾ ರಾಯಾ!

ದಿಗ— ಇರಲಿ, ವಿಶು, ಸುಧೆಯು ಹುಟ್ಟು, ತಮ್ಮ ಕುಲ ಅವರು ಯಾರಿಗೂ ಹೇಳದs ಇರಬೇಕಾದರ ಅದು ಅನೀತಿಪೂರಿತವಾಗಿರಬೇಕು, ಇದರಲ್ಲಿ ಸಂಶಯವನs ಇಲ್ಲ.

ವಿಶು— ಆದರ ಅವರು ಇರೋದನ್ನ ನೋಡಿದರ ಅವರು ಅತ್ಯಂತ ಸಚ್ಛೀಲರಾಗಿರಬೇಕು ಅನಸ್ತದ.

ದಿಗ— ಅವರ ಈ ರಹಸ್ಯ ಬಹಳ ಸಂಶಯಕ್ಕ ಕಾರಣಾಗಿ ಕೂತsದ. ಅವರಿಗೆ ಗಂಡನಾದರೂ ಇದ್ದನೊ ಇಲ್ಲೊ ಯಾರಿಗೆ ಗೊತ್ತು? ಅಥವಾ ಗಂಡ ಸತ್ತ ಮ್ಯಾಲ ಸುಧಾ ಹುಟ್ಟಿರಬೇಕು. ಅದೂ ಇರದಿದ್ದರ ವಿವಾಹ ಬಾಹಿರ ಪ್ರೇಮದಿಂದ ಅವಳ ಜನ್ಮ ಆಗಿರಬೇಕು! ಅವರ ಜಾತೀದೂ ಇಂಥಾದs ಗೊಂದಲಿದ್ದಿದ್ದೀತು. ಹೇಳಲಿಕ್ಕೆ ಬಾರದ ಜಾತಿ!

ದತ್ತ— ತಿಪ್ಪೀ ಕೆದರಿಧಾಂಗ ಅದ ಇದು! ಇದು ನೋಡು, ಈ ಪುಸ್ತಕ ದೊಳಗ ಬಂದsದ ಈ ಮಾತು! ನಿಮ್ಮ ಮಾತಿಗೂ ಇದಕ್ಕೂ ಏನೂ ಸಂಬಂಧಿಲ್ಲ.

ವಿಶು— ಯಾವ ಕುಲದೊಳಗ ಯಾವ ರಕ್ತ ಸೇರಿದೆಯೊ ಯಾರು ಹೇಳಬಲ್ಲರು? ಅಂತೇ ಋಷಿಯ ಕುಲ, ನದಿಯ ಮೂಲ ಎಣಿಸಬಾರದು

ಅಂತ ಹೇಳೋದು. ನಾವು ಯಾವ ಋಷಿಯ ಗೋತ್ರದವರು ಅಂತ ಹೇಳಿಕೊಳ್ತೇವೊ ಅವರ ಕುಲವನ್ನೇ ಎಣಿಸಬಾರದು ಅಂದಮ್ಯಾಲ ಅವರ ಗೋತ್ರದವರಾದ ನಮುಗ ಕುಲ ಎಲ್ಲಿಯದು ? ಕುಲ ಅನ್ನುವದೆಲ್ಲ ಒಂದು ಕಣ್ಣುಕಟ್ಟು ! ನನಗ ಅದರ ಮ್ಯಾಲ ಎಳ್ಳಷ್ಟೂ ಶ್ರದ್ಧೆ ಇಲ್ಲ. ಇನ್ನು ಮುಂದೆ ಉತ್ತಮ ಸಂಸ್ಕೃತಿಯುವನೇ ಉತ್ತಮ ಜಾತಿಯುವ. ಆದು ಯಾವ ತರಗತಿಯದಿರಬಹುದೊ ಆ ತರಗತಿಯ ಜಾತಿಗೆ ಅವನು ಸೇರಬಹುದು. ಅಭ್ಯಾಸ ಬೆಳೆದ ಹಾಗೆ ವಿದ್ಯೆಯ ತರಗತಿ ಹೆಚ್ಚಾಗುವಂತೆ ವ್ಯಕ್ತಿಯಲ್ಲಿ ಸಂಸ್ಕೃತಿ ಬೆಳೆದ ಹಾಗೆ ಜಾತಿಯ ತರಗತಿಯೂ ಹೆಚ್ಚಾಗಬೇಕು. ಅಂದರ ಮಾತ್ರ ಜನ್ಮದಿಂದ ಬರುವ ಈ ಜಾತಿಯ ತಲೆಬರಹ ಒರಸಿ ಹೋದೀತು, ಅದು ಸಮೂಲ ನಷ್ಟವೂ ಆದೀತು.

ದಿಗ— ವಿಶು, ನೀನು ಆಡುವ ಮಾತೆಲ್ಲ ತೀರ ಯೋಗ್ಯವಾದವುಗಳಾದರೂ ನೀನು ಎದುರಿಸಬೇಕಾದ ಸಮಸ್ಯೆಗೆ ಪರಿಹಾರ ಇದಲ್ಲ. ನೀನು ಹಡದವರಿಗಾಗಿ ನಿನ್ನ ಪ್ರೇಮಕ್ಕೆ ತಿಲಾಂಜಲಿ ಕೊಡಬೇಕು; ಇಲ್ಲವೇ ಹಡೆದವರು ತಮ್ಮ ಒತ್ತಾಸೆ ಬಿಟ್ಟುಕೊಡಬೇಕು. ಅವರು ಅದಕ್ಕೆ ಸಿದ್ಧರಿಲ್ಲ ಅಂದಮ್ಯಾಲ ನೀನು ಈ ತ್ಯಾಗಕ್ಕೆ ಸಿದ್ಧನಾಗು. ಭಾವನೆಯ ಛಲ ಹಿಡಿದು, ಎಲ್ಲರಿಗೂ ಹೊರತಾಗಿ ನೀನು ದೊರಕಿಸುವದೇನು ? ಒಂದು ಪ್ರೀತಿಸುವ ಹೆಣ್ಣು ಸುಧಾ ಶೀಲವತಿಯಾಗಿರಬಹುದು, ಸದ್ಗುಣಿಯಾಗಿರಬಹುದು; ಆದರೆ ವಸುಧಾಬಾಯಿಯೇ ಚರಿತ್ರಹೀನೆಯಾಗಿದ್ದರೆ ಈ ನೆಂಟಸ್ತಿಕೆಯಿಂದ ನಿಮ್ಮ ಮನೆತನದ ಗೌರವಪರಂಪರೆಗಳಿಗೆ ಕುಂದುಂಟಾದೀತು. ನಿನ್ನ ತಂದೆಯವರು ಇದನ್ನೆಂದೂ ಸಹಿಸರು.

ವಿಶು— ವಸುಧಾಬಾಯಿಯವರ ಪೂರ್ವಾಯುಷ್ಯ ಹ್ಯಾಗಿತ್ತೊ ನನಗ ತಿಳಿಯದು. ಈಗಿನ ಅವರ ನಡತೆಯಂತೂ ಅತ್ಯಂತ ಪರಿಶುದ್ಧವಾಗಿದೆಯೆಂದು ನನಗಂತೂ ನಂಬಿಗೆಯಾಗಿದೆ. ಎಂಥದೇ ಇರಲಿ ಅವರಿಗೊಂದು ಜಾತಿ, ಇದ್ದಿರಲಿ ಸತ್ತಿರಲಿ ಒಬ್ಬ ಮದುವೆಯ ಗಂಡ ಇವೆರಡಾಗಿದ್ದರ ನನಗಿಷ್ಟು ತೊಂದರಿ ಆಗ್ತಿರಲಿಲ್ಲ. (ಯೋಚಿಸಿ) ಅವರಿಗೆ ಇವೆರಡೂ ಇದ್ದಂತೆ ಕಾಣಲಿಲ್ಲ. ಅವರಿಬ್ಬರ ಜನ್ಮರಹಸ್ಯ ಏನಿದೆಯೊ ತಿಳಿಯದು !

ದಿಗಂಬರ, ನಾನು ಸುಧೆಯನ್ನ ಮದುವೆಯಾದೆ ಅಂತ ತಿಳಿ. ಏನಾಗ ಬಹುದು ? ತಾಯಿ ವ್ಯಥೆಯಿಂದ ಪ್ರಾಣ ಬಿಡಬಹುದು; ತಂದೆಯವರು ಖತಿಗೊಂಡು ನನ್ನನ್ನು ಹೊರತಳ್ಳಿಬಿಡಬಹುದು. ಎರಡಕ್ಕೂ ನನ್ನ ಮನಸ್ಸು ಅಳುಕುವದಿಲ್ಲ. ಈ ಆಸ್ತಿಯ ಆಸೆ ನನಗಿಲ್ಲ. 'ಮನಃ ಪೂತಂ ಸಮಾಚರೇತ್' ಮನಸ್ಸಿಗೆ ಶುದ್ಧವೆನಿಸಿದ್ದನ್ನು ಮಾಡ್ತಾ ಹೋಗೋದು. ಆಮೇಲೆ ಬಂದದ್ದು ಬರಲಿ. ಸಮಾಜ ಟೀಕಿಸಬಹುದು, ಟೀಕಿಸಲಿ; ಮಠ ಬಹಿಷ್ಕಾರ ಹಾಕ ಬಹುದು, ಹಾಕಲಿ; ತಂದೆಯ ಆಸ್ತಿಗೆ ನಾನು ಎರವಾಗಬಹುದು, ಅದೂ ಆಗಲಿ. ಯಾವುದರ ಪರಿವೆ ನನಗಿಲ್ಲ. ನನಗೆ ಸರಿಯೆನಿಸಿದ್ದನ್ನು ಧೈರ್ಯ ವಾಗಿ ನಾನು ಮಾಡಿದ್ದೇನೆಂದರೆ ನನ್ನ ಆದರ್ಶದ ಒಂದು ಮೆಟ್ಟಿಲನ್ನು ಏರಿದೆಯೆಂದು ನನ್ನಾತ್ಮಕ್ಕೆ ಅಷ್ಟೇ ಸಮಾಧಾನ !

ರಾಮ— (ಪ್ರವೇಶಿಸಿ) ರಾವಸಾಬ್, ಧನೇರು ಕರಿತಾರ್ರಿ ತಮ್ಮನ್ನ.

ವಿಶು— ಎಲ್ಲಿದ್ದಾರೊ ? ಏನ್ಮಾಡ್ತಾರ ? ಮತ್ಯಾರಿದ್ದಾರ ?

ರಾಮ— ಯಾರೂ ಇಲ್ರಿ. ಒಬ್ಬರs ಅದಾರ್ರಿ.

ವಿಶು— ಈಗ ಬರ್ತೀನಿ ಅಂತ ಹೇಳು. (ರಾಮ ಹೋಗುವನು) ದಿಗ್ಯಾ, ನೀನೂ ಬರ್ತೀಯೇನು ? ಬಹುಶಃ ಇದೇ ಮಾತಿಗೆ ಕರೀತಿರಬೇಕು ! ಜತೆಗೆ ನೀನಿದ್ದರ ನೆಟ್ಟಗ.

ದಿಗ— ಬ್ಯಾಡ. ನಾವು ಹೋಗ್ತೇವೆ. ನಮಗೂ ಬ್ಯಾರೆ ಕೆಲಸವ. ಅಪ್ಪ-ಮಗನ ವಾಗ್ಯುದ್ಧ ಏನ್ನಡೀತದೊ ನಡೆಯಲಿ. ನಾವು ಆಮ್ಯಾಲ ನಿನ್ನನ್ನು ಕಾಣ್ತೇವೆ. ನಡಿ ದತ್ಯಾ. (ಏಳುವರು.)

ವಿಶು— ಸುಧೆಯ ಬಗ್ಗೆ ಮಾತು ಬಂದರೆ ಹೇಳಿಯೇ ಬಿಡ್ತೀನಿ. ಇನ್ನ ಈ ಮಾತನ್ನ ಗುಟ್ಟಾಗಿಟ್ಟು ಪ್ರಯೋಜನಿಲ್ಲ.

ದಿಗ— ಹಾಂಗs ಮಾಡು. ಹೇಳಿದರೂ ಸೌಮ್ಯ ಮಾತಿನೊಳಗ ಹೇಳು. ಅವರ ಮನಸ್ಸು ಒಲಿಸೊ ಪ್ರಯತ್ನ ಮಾಡು. ಒಳ್ಳೇದು.

ದತ್ತ— ಬ್ಯಾರೆ ಕನ್ಯಾಗಿನ್ಯಾ ನೋಡೋದಾದರ ನಮ್ಮನ್ನೂ ಕರೆಸು ಮರೀಬ್ಯಾಡ ಮತ್ತ! (ದಿಗಂಬರ ದತ್ತ ಹೋಗುವರು ಕೆಲ ನಿಮಿಷ ವಿಶ್ವಂಭರ

ದೀರ್ಘ ಆಲೋಚನೆಯಲ್ಲಿ ಅತ್ತಿಂದಿತ್ತ ತಿರುಗಾಡುವಾಗ ತನ್ನಷ್ಟಕ್ಕೆ ಹಾಡಿಕೊಳ್ಳುವನು.)

ಹಾಡು*

(ಹಾಡು ಮುಗಿಯುವದು. ಆಗ ವಿಶ್ವನಾಥರಾಯರು ತಾವೇ ಅಲ್ಲಿಗೆ ಬರುವರು.)

ವಿಶ್ವ— ಯಾರು ಬಂದಿದ್ದರು ? ದಿಗಂಬರ ದತ್ತರೇನು ?

ವಿಶು— ಹೌದು.

ವಿಶ್ವ— ವಿಶು, ನಿನಗೆ ಕೇಳುವ ಮೊದಲೇ ನಾನು ಕನ್ನೆಯರಿಗಾಗಿ ಕಾಗದ ಬರೆದಿದ್ದೆ. ಶಿವಪುರದ ಶಿವದೀಕ್ಷಿತರು ಮಗಳನ್ನು ಕರೆದುಕೊಂಡು ಬಂದೇ ಬಿಟ್ಟಿದ್ದಾರೆ. ಶಿವದೀಕ್ಷಿತರ ವಿಷಯ ನಿನಗೆ ಗೊತ್ತು. ತುಂಬ ಗೌರವ ಪ್ರತಿಷ್ಠೆಯುಳ್ಳವರು. ಕನ್ಯೆ ಬಿ. ಎ.ದಲ್ಲಿ ಓದುತ್ತಿದ್ದಾಳೆ. ಅವಳನ್ನು ನೋಡುವ ವಿಚಾರದಲ್ಲಿ, ನಿನ್ನ ಹೊಸ ಪದ್ಧತಿಯಂತೆ ಏನು ಮಾಡಬೇಕೋ ಹೇಳು. ಹಾಗೆ ಅವರಿಗೆ ತಿಳಿಸೋಣ. ಅವರು ಇಂದು ಮಧ್ಯಾನ್ಹ ಹುಡುಗೆಯನ್ನು ನಮ್ಮಲ್ಲಿಗೆ ಕರೆತರಬೇಕೆಂದಿದ್ದಾರೆ.

ವಿಶು— (ವಿಸ್ಮಯಗೊಂಡು) ಅಣ್ಣಾ, ಸ್ಪಷ್ಟವಾಗಿ ಹೇಳ್ತೀನೆ. ನನಗೆ ಯಾರನ್ನೂ ನೋಡಬೇಕಾಗಿಲ್ಲ.

ವಿಶ್ವ— ಅಂದರೆ ? ನಿನ್ನ ಮನಸ್ಸಿನಲ್ಲೇನಿದೆಯೊ ಒಮ್ಮೆ ಬಯಲಿಗೆ ಹಾಕಿಬಿಡು. ನನಗೆ ನಿನ್ನ ಬಗ್ಗೆ ಅನುಮಾನವಾಗಿದೆ. ನೀನು ಈಗಾಗಲೆ ಯಾರನ್ನಾದರೂ ಪ್ರೀತಿಸುತ್ತಿರುವಿಯೇನು ? ಇದ್ದರೆ ಹೇಳಿಬಿಡು. ಏನು ? ಯಾರ ಮೇಲಾದರೂ ನಿನ್ನ ಪ್ರೇಮ ಇದೆಯೇನು ? ಏನು ? ಸುಮ್ಮನೇ ಇದ್ದೀಯಲ್ಲ ! ಯಾರನ್ನಾದರೂ ಪ್ರೀತಿಸುವಿಯೇನು ?

ವಿಶು— .... ಹೌದು.

ವಿಶ್ವ— ಯಾರು ? ಯಾರದು ? ಯಾರನ್ನು ಪ್ರೀತಿಸುತ್ತಿರುವಿ ? ಹೇಳು,-ನೀನು ಹೇಳಲೇಬೇಕು. ಹೇಳಿಬಿಡು ಅವಳ ಹೆಸರು !

* ಇಲ್ಲಿ ಹಾಡುವ ಹಾಡನ್ನು ಕೊನೆಗೆ ಕೊಟ್ಟಿದೆ.

ವಿಶು— ಕಾಲೇಜದಲ್ಲಿಯ ನನ್ನ ಗೆಳತಿ.

ವಿಶ್ವ— ಕಾಲೇಜದ ಗೆಳತಿ! ಯಾರವರು ? ಯಾರವರು ?

ವಿಶು— ಸುಧಾ ಪ್ರಧಾನ.

ವಿಶ್ವ— (ಒಮ್ಮೆಲೆ ಬೆಚ್ಚಿಬಿದ್ದು) ಏನು ? ಸುಧಾ ಪ್ರಧಾನ! ಆಕೆ ಯಾರು ? ಯಾರ ಮಗಳು ?

ವಿಶು— ವಸುಧಾಬಾಯಿ ಅಂತಿದ್ದಾರೆ. ಅವರ ಮಗಳು.

ವಿಶ್ವ— ವಸುಧಾಬಾಯಿ ? ತಂದೆ ಯಾರು ? ಎಲ್ಲಿಯ ಮನೆತನ ?

ವಿಶು— ಗೊತ್ತಿಲ್ಲ.

ವಿಶ್ವ— ಗೊತ್ತಿಲ್ಲ! ಯಾವ ಜಾತಿ ? ಯಾವ ವರ್ಣಕ್ಕೆ ಸೇರಿದವರು ?

ವಿಶು— ಅದೂ ತಿಳಿಯದು.

ವಿಶ್ವ— ಆಂ,ತಂದೆ ಗೊತ್ತಿಲ್ಲ! ಜಾತಿ ಗೊತ್ತಿಲ್ಲ ! (ಏರಿಕೆಯ ದನಿಯಲ್ಲಿ) ಯಾವ ಊರವರಂತೆ ? ಏನು ಕಥೆ ?

ವಿಶು— ಅದನ್ನೂ ನಾನು ತಿಳಿದುಕೊಂಡಿಲ್ಲ.

ವಿಶ್ವ— ವಿಶು, ಅದನ್ನೆಲ್ಲ ನೀನು ತಿಳಿದುಕೊಳ್ಳಬೇಕು. 'ಪ್ರಧಾನ' ಎಂಬ ಅಡ್ಡಹೆಸರು ನಮ್ಮ ಸಮಾಜದಲ್ಲಂತೂ ನಾನು ಕೇಳಿಲ್ಲ. ಅವರು ಬ್ರಾಹ್ಮಣರಂತೂ ಇರಬಹುದಲ್ಲ ?

ವಿಶು— ಅಣ್ಣಾ, ಅವರು ಸುಸಂಸ್ಕೃತರು, ನೀತಿವಂತರೂ ಆಗಿದ್ದರೆ ಸಜಾತಿಯವರೇ ಇರಬೇಕೆಂಬುದೇನು ?

ವಿಶ್ವ— ಬ್ರಾಹ್ಮಣ ಜಾತಿಯ ಯಾವ ಒಳಪಂಗಡಕ್ಕೆ ಅವರು ಸೇರಿದ್ದರೂ ನಮಗೆ ನಡೆದೀತು.

ವಿಶು— ಅವರು ಯಾವುದಕ್ಕೂ ಸೇರದ ಜಾತಿಯವರಾಗಿದ್ದರೆ ?

ವಿಶ್ವ— ಅಂಥ ವಿಜಾತೀಯರೊಡನೆ ಸಂಬಂಧ ನಮಗೆ ಎಂದೂ ಬೇಡ. ನಾವು ಸಮಾಜದ ಜೊತೆಗೆ ಕೂಡಿಕೊಂಡು ಹೋಗಬೇಕಾಗಿದೆ. ಒಬ್ಬರೇ ಬಾಳಬೇಕಾಗಿಲ್ಲ. ವಸುಧಾಬಾಯಿ ಸುಸಂಸ್ಕೃತರಿರಬಹುದು;

ಸದಾಚಾರಿಗಳೂ ಇರಬಹುದು; ಆದರೆ ನೆಂಟಸ್ತಿಕೆ ಆಗಬೇಕಾದರೆ ಕುಲ ಗೋತ್ರ ನೋಡಲೇಬೇಕು. ಯಾವುದೊ ಜಾತಿಯ ಹೆಣ್ಣು ಸೊಸೆಯೆಂದು ನನ್ನ ಮನೆಯಲ್ಲಿ ಬರಲಾರದು ವಿಶು, ವಸುಧಾಬಾಯಿಯನ್ನು ವಿಚಾರಿಸು. ಇವೆಲ್ಲ ನಮಗೆ ಸರಿಹೋಗುವ ಹಾಗಿದ್ದರೆ ನೀನು ಸುಖೆಯನ್ನು ಮಾಡಿಕೊಳ್ಳಲು ನನ್ನದೇನೂ ಆಕ್ಷೇಪಣೆಯಿಲ್ಲ. ಇಲ್ಲವಾದರೆ ಇಂಥ ಮದುವೆ.......ನನ್ನ ಮನೆಯಲ್ಲಿ........ಈ ಮನೆಯಲ್ಲಿ.......ಎಂದೂ ಆಗಲಾರದು ! ವಿಶೂ, ಏನೇ ಆದರೂ ಕುಲಗೋತ್ರ ನಾವು ಬಿಡಲಾರೆವು !

ವಿಶು— ಅಣ್ಣಾ, ಈ ಕುಲಗೋತ್ರ ಎಂಬುದೆಲ್ಲ ಅರ್ಥಹೀನವಾದ ಆಚಾರ; ನನಗೆ ಅದರಲ್ಲಿ ಶ್ರದ್ಧೆ ಇಲ್ಲ. ಈ ಕಾಲದಲ್ಲಾದರೂ ನಾವು ಈ ಕುಲದ ಕುಲಾಯಿಯನ್ನು ಕಿತ್ತೊಗೆಯಲೇಬೇಕು.

ವಿಶ್ವ— ಕುಲಗೋತ್ರ ನೋಡುವದು ಮೋಜಿಗಾಗಿ ಅಲ್ಲ ಅದರಲ್ಲಿ ಕೆಲವು ಧಾರ್ಮಿಕ ಶಾರೀರಿಕ ತತ್ವಗಳು ಅಡಕವಾಗಿವೆ. ಇದು ನಿನ್ನೆ ಇಂದು ಬಂದದ್ದಲ್ಲ. ಸಹಸ್ರಾರು ವರ್ಷಗಳಿಂದ ಆಚರಣೆಯಲ್ಲಿದ್ದದ್ದು ಅದು ಶಿಥಿಲವಾಗಿರಬಹುದು, ಈಗ ನಡೆದಷ್ಟರ ಮಟ್ಟಿಗಾದರೂ ನಾವು ಪಾಲಿಸಲೇಬೇಕು ಯಾರೂ ಮಾಡದ್ದನ್ನು ನಾವು ಮಾಡಲು ಹೋದರೆ ಸಮಾಜದಿಂದ ತಿರಸ್ಕೃತರಾಗಬೇಕಾದೀತು ! ಅದು ನನಗೆ ಬೇಕಾಗಿಲ್ಲ.

ವಿಶು— ಯಾರೂ ಮಾಡದ್ದು ಎಂದು ಯಾರೂ ಮಾಡದೆ ಹೋದರೆ? ಯಾರಾದರೂ ಮಾಡಲು ಮುಂದುವರಿಯಬೇಕಲ್ಲ ? ಜವಾಹರಲಾಲರ ಮಗಳು, ಗಾಂಧಿಯವರ ಮಗ-ವಿಜಾತೀಯ ವಿವಾಹವನ್ನೇ ಮಾಡಿಕೊಂಡರಲ್ಲ ?

ವಿಶ್ವ— ಸಮಾಜ ಅದನ್ನೆಲ್ಲಿ ಒಪ್ಪಿದೆ ? ಅವರಿಗೆ ಸಮಾಜವನ್ನು ಅಲ್ಲಗಳೆದೇ ಇರಬೇಕಾದೀತು !

ವಿಶು— ಇಂಥ ಮದುವೆಗಳನ್ನು ಅಜ್ಞಜನಸಮಾಜ ಮನ್ನಿಸಲಿಕ್ಕಿಲ್ಲ. ಆದರೆ ವಿಚಾರಶೀಲರು ಒಪ್ಪುತ್ತಾರೆ. ಅಂಥವರೇ ನಾಳೆ ಬಾಂಧವ್ಯ ಬೆಳೆಯಿಸಲು ಮುಂದೆ ಬರುತ್ತಾರೆ.

ವಿಶ್ವ— ಈ ಆಚಾರ ಕ್ರಾಂತಿ ನನಗೆ ಸಮ್ಮತವಿಲ್ಲ. ಒಂದು ಆಡಳಿತಕ್ಕೆ ಒಳಪಟ್ಟವರು ಅಲ್ಲಿಯ ಕಾನೂನುಗಳನ್ನು ಹ್ಯಾಗೆ ಅನುಸರಿಸಬೇಕಾಗುವದೊ ಹಾಗೆ, ಒಂದು ಸಮಾಜದಲ್ಲಿರುವವರು ಅದಕ್ಕೆ ಪ್ರಕೃತವಾದ ಪದ್ಧತಿಗಳನ್ನು ಮನ್ನಿಸಲೇ ಬೇಕಾಗುವದು. ಆಚಾರ ವಿಚಾರದಲ್ಲಿ ಮನಸೋಕ್ತವಾದ ಸ್ವಾತಂತ್ರ್ಯ ಯಾವನಿಗೂ ಇಲ್ಲ. ಪ್ರೇಮ ಪ್ರೇಮ ಎಂಬುದೆಲ್ಲ ಅವ್ಯಕ್ತ ಭಾವನಾಪ್ರಪಂಚ. ಭಾವನೆಯಲ್ಲಿಯೇ ಅದರ ಜನ್ಮ, ಭಾವನೆಯಲ್ಲಿಯೆ ಅದರ ಬೆಳೆವಣಿಗೆ. ಮನುಷ್ಯ ಬದುಕಿ ಬಾಳುವದಾಗಲಿ, ಸೆಣಸಿ ಸಾಯುವದಾಗಲಿ ತನ್ನ ಭಾವನೆಯ ತೃಪ್ತಿಗಾಗಿ. ಪ್ರೇಮದ ಭಾವನೆ ಮಿಂಚಿನಂತೆ ಬರುವದಲ್ಲ. ಅದು ಸಹವಾಸದಿಂದ ಹುಟ್ಟಿ ಸಂಸ್ಕಾರದಿಂದ ಬೆಳೆಯತಕ್ಕದ್ದು. ವಿಶು, ಸಾವಿರ ಮಾತಿನಿಂದೇನು ಪ್ರಯೋಜನ ? ವಧುವಿನ ಕುಲ ಶೀಲ ಮುಖ್ಯ ನಾವು ಗಮನಿಸತಕ್ಕ ಭಾಗ. ನೀನು ಪ್ರೀತಿಸುವ ಸುಧಾ ಈ ಪರೀಕ್ಷೆಗೆ ನಿಲ್ಲುವ ಹಾಗಿದ್ದರೆ, ನನ್ನ ಆಕ್ಷೇಪಣೆ ಏನೂ ಇಲ್ಲ. ಅವರ ಮನೆತನದ ಬಗ್ಗೆ ಸಂಪೂರ್ಣವಾದ ತಿಳಿವಳಿಕೆ ಮಾಡಿಕೊಳ್ಳುವದು ಅತ್ಯಗತ್ಯ !

ವಿಶು— ಅಣ್ಣಾ, ಅದು ತಿಳಿಯುವದು ಸಾಧ್ಯವಿಲ್ಲ.

ವಿಶ್ವ— ವಿಶು, ಇದರಲ್ಲಿ ತಿಳಿಯಬಾರದಂಥದೇನಿದೆ ? ಇದು ಯಾರು ಯಾರಿಗೂ ಹೇಳುವಂಥ ವಿಷಯ.

ವಿಶು— ಅವರ ವಿಷಯದಲ್ಲಿ ಇದು ಹಾಗಿಲ್ಲ.

ವಿಶ್ವ— ಅಂದರೆ ? ಆ ಹುಡುಗಿಗೆ ತಂದೆಯಿಲ್ಲ, ಜಾತಿ ಇಲ್ಲ ಎಂದೊ?

ವಿಶು— ಹೌದು, ಹಾಗೇ.

ವಿಶ್ವ— (ಅತ್ಯಂತ ಕ್ರುದ್ಧನಾಗಿ) ವಿಶ್ಯಾ, ನಿನಗೆ ತಲೆ ಕೆಟ್ಟಿದೆಯೊ, ಬುದ್ಧಿ ಮಂಕಾಗಿದೆಯೊ ? ಆಗಿದೆಯಾದರೂ ಏನು ? ಇಂಥ ಕುಲಗೇಡಿ, ಕಲಬೆರಕಿ ಹೆಣ್ಣನ್ನು ನೀನು ಹೆಂಡತಿಯೆಂದು ಮನೆಗೆ ತರುವೆಯಾ ? ಮೂರ್ಖ ! ಓದಿ ಅನ್ಯಾಯವಾಗಿ ಕೆಟ್ಟು ಹೋದೆ ! ನೀನು ಕೆಡುವದಲ್ಲದೆ ನಮ್ಮ ಮನೆತನಕ್ಕೆ ಕಲಂಕ ತರುವ ಕೃತಿಗೆ ಮನಸ್ಸು ಮಾಡಿದೆ. ನಾನು ಎಷ್ಟೋ ವಿಧದಲ್ಲಿ ಸುಧಾರಕನೆಂದೆನಿಸಿಕೊಳ್ಳುತ್ತೇನೆ. ಆದರೆ ಇದು ಎಂಥ ಸುಧಾರಕನಿಗೂ ಹೇಸಿಕೆ ಬರುವ ಮಾತು ! ಇಂಥ ಅವಿವೇಕವನ್ನು

ಯಾವ ಪ್ರಗತಿಶೀಲನೂ ಮಾಡಲಾರ. ವಿಶು, ನಿನಗೆ ಖಂಡಿತವಾಗಿ ಹೇಳುತ್ತೇನೆ, ಈ ತಲೆತಿರುಕ ಕಲ್ಪನೆಯನ್ನು ತಲೆಯೊಳಗಿಂದ ನೀನು ತೆಗೆದು ಹಾಕಲೇಬೇಕು. ಅದಾಗುವ ವರೆಗೆ ನಾನು ನಿನ್ನ ಮುಖವನ್ನು ಕೂಡ ನೋಡುವದಿಲ್ಲ ! ಛೆ, ಇಂಥ ದುಷ್ಟ ಮಕ್ಕಳಾಗುವದಕ್ಕಿಂತ ಆಗ ದಿದ್ದರೇ ಒಳಿತಾಗುತ್ತಿತ್ತು ! ಛೆ, (ಎಂದು **ಆಲಪಿಸುತ್ತ ಹೋಗಿಬಿಡುವರು. ವಿಶ್ವಂಭರ ಶೂನ್ಯ ದೃಷ್ಟಿಯಿಂದ ತಂದೆ ಹೋದ ಕಡೆಗೆ ನೋಡುತ್ತ ಹಾಡಿಕೊಳ್ಳು ವನು.**

ಹಾಡು*

(ಹಾಡು ಮುಗಿದ ಮೇಲೆ ತೆರೆ ಬೀಳುವದು)

---

* ಇಲ್ಲಿ ಹಾಡುವ ಹಾಡನ್ನು ಕೊನೆಗೆ ಕೊಟ್ಟಿದೆ.

ಪ್ರವೇಶ ೨

[ಬಿಷ್ಟಂಭಟ್ಟ ಶೇಷಪ್ಪ ಕೂಡಿ ಬರುವರು.]

ಬಿ— ನಾಯೇನು ಹೇಳಿದ್ದೆ ನಿನಗ? ನಿಮ್ಮ ಧಣೇರ ಮಗ ಹೀಂಗೇನಾದರೂ ಆಸುತ ವ್ಯಾಳ್ಯಕ್ಕ ಮುರಗಡಿ ಹಾಕ್ತಾನ ಅಂತ ಅಂದಿದ್ನಿಲ್ಲೊ? ಈಗೇನಾತ್ಯು?

ಶೇ— ಏನಾದದ್ದೇನಿಗ? ಅಂವ ಬೇಕಾದಷ್ಟು ಹಾರ್‍ಯಾಡಿದರೂ ದೊಡ್ಡರಾಯರು ಅದನ್ನೆಂದೂ ಆಗಗೊಡುದಿಲ್ಲ. ಅಲ್ಲೊ, ಆ ಹುಡಿಗ್ಗೆ ತಂದಿ—ಸಾರ್ವಜನಿಕ ತಂದಿ; ಕುಲ - ಅಂದರ ಬೆರಕೀ ಕುಲ; ಅಥವಾ....

ಬಿ— ನಕುಲ! ಹೌದಲ್ಲೊ?

ಶೇ— ಅಷ್ಟs! ಈ ಹೆಣ್ಣುಮಗಳ ಹತ್ತರ ಹ್ಯಾಂಗೊ ಗಳಿಸಿದ್ದು .. ದುಡ್ಡದ; ಠಾಕ್‌ಠೀಕ್ ಮಾಡಿಕೊಂಡು ಇರ್ತಾರ. ಹುಡುಕಿ ಎಂ. ಎ ದಾಗ ಅದ. ದೊಡ್ಡ ಮನೆತನದವರಿರಬೇಕು ಅಂತ ನೋಡುವವರಿಗೆ ಭ್ರಮ ಬೀಳ್ತದ. ಆದರ ನೋಡಿದರ—ಎಲ್ಲಾ ಬ್ರಮ್ಹ ಘೋಟಾಳೆ! ಇದು ಈಗ ತಂದೀ-ಮಗ್ಗs ಖಾಡಾಖಾಡಿ ಮಾತು ಆಗೇಹೋತ್ಯು! ನಮ್ಮ ರಾಯರ ಪ್ರಾಣ ಹೋದರೂ ಇಂಥಾ ಸಂಬಂಧಕ್ಕ ಒಪ್ಪೋದು ಶಕ್ಯನs ಇಲ್ಲ!

ಬಿ— ಅಲ್ಲೊ, ದೊಡ್ಡರಾಯರು ಇದಕ್ಕೊಪ್ಪಲಿಲ್ಲ, ಸಣ್ಣರಾಯರು ಇನ್ನೊಂದಕ್ಕೊಪ್ಪಲಿಲ್ಲ, ಅಂದರ ನಾವು ಹೀಂಗs ಕೂತೆವೆಲ್ಲಾ ಕಬ್ಬಕ್ಕ ಹಾಂಗ ಬಾಯಿ ಬಾಯಿ ಬಿಟಗೋತ!

ಶೇ— ಹುಡುಗ ಅಂಥಾ ಧೈರ್ಯದವ ಅಲ್ಲ ಬಾ. ಬರೇ ಉದ್ದುದ್ದ ಉಪನ್ಯಾಸಧಾಂಗ ಮಾತಾಡ್ತದ! ಈಗಿನ ಹುಡುಗರಾಗ ಅಂಥಾ ನೀರs ಇಲ್ಲ! ಮಾತಿನ್ಯಾಗ ಹೊಯ್ದಾಟ, ಕೃತಿಯೊಳಗ ಹೊಯ್ದಾಟ! ನಿರ್ಧಾರ, ನಿಶ್ಚಲ ಅಂತ ಇಲ್ಲೇ ಇಲ್ಲ! ಮೊದಲಿನ ಮಂದಿ, ಒಂದು ಛಲ

ಹಿಡಿದರು ಅಂದರ ಅಚಲ! ಯಾರಪ್ಪಗೂ ಬಿಟ್ಟಪ್ಪರಲ್ಲ! ಸಾಧಿಸೇ ಬಿಡುವರು! ಈ ಮಾತಿರಲಿ, ಶಿವಪುರದ ಶಿವದೀಕ್ಷಿತರು ಹುಡಗಿನ್ನ ಕರ ಕೊಂಡು ಬಂದುಬಿಟ್ವಾರ! ನೀಯೇನ್ನಡಿಸೀದಿ? ನಿನ್ನ ಗಿರಾಕಿ ಎಲ್ಲ್ಯವ?

ಬಿ— ದುರ್ಗಾದಾಸ, ಪೋಲೀಸ ಇನ್ಸ್ಪೆಕ್ಟರು ಮಗಳ್ನ ಕರಕೊಂಡು ಇಂದು ಬರ್ತಾರ. ಉಳಿದ ಒಬ್ಬಿಬ್ಬರೂ ಇವತ್ತ ನಾಳೆ ಇಷ್ಟರಾಗು ಬರ ಬೇಕು. ಅಲ್ಲಪಾ, ಶಿವಪುರದ ಶಿವದೀಕ್ಷಿತರ ಹುಡುಗಿ ಹ್ಯಾಂಗದ? ನೋಡಿಯೇನ್ನೀನು?

ಶೇ— ಹುಡಿಗೇನು ಕೇಳ್ತಿಯೋ? ಸರ್ವೋತ್ಕೃಷ್ಟ ಹುಡುಗಿ! ಆ ಗಿರಾಕಿಗೂ ಈಗಾಗಲೇ ವಶೀಲಿ ಹಚ್ಚಿಟ್ಟೇನಿ ನಾನು! ನಿನ್ನ ಕೆಲಸಾನೂ ನಾನು ಮಾಡಬೇಕಾಗೇದ.

ಬಿ— ಮಾಡದಿದ್ದರ ಅರ್ಧ ಕಮೀಶನ್ ಹ್ಯಾಂಗ ಸಿಕ್ಕೀತು? ಅಲ್ಲೊ ಶೇಷ್ಯಾ, ನನಗ ಹಿಂಗೊಂದು ವಿಚಾರ ಬಂದದ—ಆ ವಸುಧಾಬಾಯಿಗೆ ಗಂಡಿಲ್ಲ, ಜಾತಿಯಿಲ್ಲ--ಅಂಬೋದೊಂದು ಪಕ್ಯಾನ? ಅವರ ಬಗ್ಗೆ ಊರ ತುಂಬಾ ಗಿಲ್ಲಾ ಎಬ್ಬಿಸಿಬಿಡಬೇಕು—ಅಂತೀನ್ನಾ? ಇದಕ್ಕ ನಿನ್ನ ಅಂಬೋಣೇನದ?

ಶೇ— ಅಂದರ ಏನೇನು ಮಾಡಬೇಕು ಅಂತೀ?

ಬಿ— ಅವರ ಮನೀಮ್ಯಾಲ ರಾತ್ರಿ ಕಲ್ಲೊಗೆಸಬೇಕು; ಬಾಗಿಲಿಗೆ ಬರೆದು ಹಚ್ಚಬೇಕು; ಮೂಕೀಪತ್ರ ಹಚ್ಚಬೇಕು; ಪೇಪರ್‌ದಾಗ ಸುದ್ದಿ ಕೊಡಬೇಕು. ಎರಡು ದಿವಸದಾಗ ಹೇಳದ ಕೇಳದ ದೇಶಾಂತರ ಹೋದರಾತಿಲ್ಲೊ!

ಶೇ— ಏನಡ್ಡಿ ಇಲ್ಲ. ಇದೂ ಒಂದು ಯುಕ್ತೀನು ಈ ಮುಳ್ಳು ತಗೀಲಿಕ್ಕೆ. ಮಿಕ್ಕದ್ದು ಏನೇ ಮಾಡಬಹುದು, ಪೇಪರದಾಗ ಸುದ್ದಿ ಕೊಡೋಧ್ಯಾಂಗೊ? ಇಂಥಾ ಸುದ್ದಿ ಯಾರು ಕೊಡವರು?

ಬಿ— ಸುದ್ದಿಗೆ ಬಾಯಿ ತಗದು ಕೂತು ಸಂಪಾದಕರು ಎಷ್ಟು ಬೇಕು, ನಿನಗ? ಇದು ನೋಡು, ಹತ್ತು ರೂಪಾಯಿ ಒಗಿ ನನ್ನ ಕೈಯಾಗ! ಬೇಕಾದ ಸುದ್ದಿ ಪೇಪರದಾಗ ಹಾಕಸ್ತೀನಿ! ಈಗಿನ ಸಂಪಾದಕರು

ಅಂದರ ಏನು ತಿಳಕೊಂಡಿ ನೀನು ? ಕಳ್ಳರು ಮನೀಗೆ ಕನ್ನಾ ಹಾಕ್ತಾರ; ಇವರು ಮರ್ಯಾದಿಗೆ ಕನ್ನಾ ಹಾಕ್ತಾರ. ಈಗ ಯಾರ ಮ್ಯಾಲ ಏನು ಬರೆದರೂ ನಡೀತದ. ಸ್ವಾತಂತ್ರ್ಯ ಬಂದು ಬಿಟ್ಟದ ! ಕೇಳವರ್‍ಯಾರು, ಹೇಳವರ್‍ಯಾರು ? ಮೊದಲಃ ಉಲ್ಲಾಸ, ಅದರಾಗ ಫಾಲ್ಗುಣಮಾಸ ! ಇರಲಿ. ಇಷ್ಟೆಲ್ಲಾ ಮಾಡಿದಿವೆಂದರ—ಹೇಳಿಕೇಳಿ ಹೆಣ್ಣುಮಕ್ಕಳು. ಗಂಡಸರ ಬಲ ಬ್ಯಾರೆ ಇಲ್ಲ—ದಿಕ್ಕಾಪಾಲಾಗೇ ಓಡ್ತಾವ ನೋಡು ! ಇದಕ್ಕ ನಿನ್ನ ಕಬೂಲಿ ಇದ್ದರ ಇವತ್ತಃ ಸುರುಮಾಡಿಬಿಡ್ತೇನಿ ? ಮತ್ತ ಇದಕ್ಕೆಲ್ಲಾ ತುಸು ಕಾಂಚಾಣ ಬೇಕಾಗ್ತದ. ಅಷ್ಟು ನೀನು ಕೊಡಬೇಕು ಮತ್ತ !

ಶೇ— ಆಗಲಿ, ಈ ಕೆಲಸ ಕೈಯಾಗ ತೊಗೊಂಡೀವಿ, ಅಂದ ಮ್ಯಾಲ ಮಾಡೋದೆಲ್ಲಾ ಮಾಡೇಬಿಡೋದು. ಮನಸಿನಂತೆ ಆದರ ಮುಂಷ ರಾಯರಕಡಿಂದ ಕೂಡ ನಾವು ವಸೂಲಿ ಮಾಡಿಕೊಬಹುದು.

ಬಿ— ಅಷ್ಟಾದರಂತೂ ಭಂಗಾರಾತ್ಯು ! ನಮ್ಮ ಸಹಾಯಕ್ಕ ಇನ್ಸ್ಪೆಕ್ಟರ ದುರ್ಗಾದಾಸನ್ನೂ ಹಿಡಿತೀನಿ. ಅವ ರಿಟೈರ್ ಆದರೇನಾತ್ಯು? ಇಂಥಾವು ಬೇಕಾದಷ್ಟು ಮಾಡಿಸಿ ಅವಗ ಅನುಭವ ಇದ್ದೇ ಇತ್ತದ ! ತನ್ನ ಮಗಳ ಮದಿವಿ ಆಸೆಯೊಂದದ ಅಲ್ಲ ? ಹೇಳಿದ್ದು ಮಾಡ್ತಾನ.

ಶೇ— ಹಾಂಗಾರ ಏಕಸಮಯಾವಚ್ಛೇದದಿಂದ ಸುರು ಆಗಲಿ ನಿನ್ನ ಹಸ್ತಲಾಘವ ! ಬಾಗಿಲಿಗೆ ಬರೆದು ಹಚ್ಚೋದು, ಮೂಕಿಪತ್ರ ಹಾಕೋದು, ಪೇಪರ್‌ದಾಗ ಸುದ್ದಿ ಕೊಡೋದು, ಇವನ್ನೆಲ್ಲಾ ನೀ ಮಾಡಬಹುದು. ಅವರ ಮನೀಮ್ಯಾಲ ಕಲ್ಲೊಗಸೋದು ?....ಅದನ್ನ ಯಾರ ಕಡಿಯಿಂದ ಮಾಡಿಸಂವ ನೀ ?

ಬಿ— ಅದನ್ನೂ ನಾನಃ ಮಾಡಬೇಕು. ಅವರ ಮನೀ ಹಿಂದ ಹಾಳ್-ಗುಡಿ ಅದಲ್ಲಾ ? ಅಲ್ಲಿ ನಿಂತು ಒಗತಾ ಒಗದರ, ಸರೀಗೆ ಅವರ ಮನಿ ಹಿತ್ತಲದಾಗಃ ! ನೀನು ಶಿವದೀಕ್ಷಿತರನ್ನಷ್ಟು ಹಿಡಿ ! ಇವರ್ನ ಒಂದು ಕೈ ನಾನು ನೋಡಿಕೋತೀನಿ. ಇವತ್ತು ರಾತ್ರಿ ನಮ್ಮ ಕಾರ್ಯ ಸುರು

ಆಗೇಬಿಡ್ತದ ! ಎಲ್ಲಾ ಕಡಿಂವ ಹಲ್ಲಾ ! (ಮೋಟರ್ ಹಾರ್ನ ಸಪ್ಪಳ ಕೇಳಿ ಬರುವದು.)

ಶೇ— ಬಿಷ್ಟ್ಯಾ, ನಮ್ಮ ರಾಯರ ಮೋಟರ್ ಹಾರ್ನ ಇದು. ಬಹುಶಃ ಅವರು ಆ ವಸುಧಾಬಾಯಿ ಮನೀಗೆ ಹೋಗ್ತಿರಬೇಕು. ನಡಿ, ನಡಿ, ನಾವೂ ಇಲ್ಲಿಂದ ಕಾಲು ಕಿತ್ತ್ಗೋಣ.

ಬಿ— ಅಂತೂ ನಿಮ್ಮ ರಾಯರು ಏನಾದರೂ ತಲ್ಯಾಗ ಹಾಕಿಕೊಂಡ-ರಂದರ ಬಿಡವರಲ್ಲ. ಇನ್ನ ಇಲ್ಲ್ಯೂ ಖಡಾ ಜಂಗಿ ಆಗ್ತದ ! ಮಗನ ಮ್ಯಾಲ ರೇಗಿಕೊಂಡಾರ; ಇವರ ಮ್ಯಾಲಷ್ಟು ಒದರಾಡಿ ಬರ್ತಾರ ! ನಮಗ ಮತ್ತಷ್ಟು ಅನುಕೂಲ ಆತ್ಯು. ಅಲ್ಲಿ ಏನು ನಡೀತು ಅಂಬೋದು ನಮಗ ಹ್ಯಾಂಗ ತಿಳೀಬೇಕು ?

ಶೇ— ನಮಗ ಆ ಡ್ರಾಯ್‌ವರ್ ಹೇಳ್ತಾನ ನಡಿ. ಹೋಗೋಣ ಅವರ ಕಣ್ಣಿಗೆ ಬಿದ್ದರ ಪಂಚೇತಿ !

(ಹೋಗುವರು.)

ಪ್ರವೇಶ ೩

[ವಸುಧಾಬಾಯಿಯವರ ಮನೆಯ ಬೈಠಕ್‌ಖಾನೆ. ವಸುಧಾಬಾಯಿ ಪತ್ರ ಬರೆಯುತ್ತ ಕೂತಿದ್ದಾರೆ.]

ವಸು— (ಗಂಟೆಯ ಸಪ್ಪಳವಾಗುವದು; ಅದನ್ನು ಕೇಳಿ) ಗೋಪಾಳ್ ಯಾರು ನೋಡು. (ಗೋಪಾಳ ಹೋಗಿ, ನೋಡಿ ಬಂದು ಒಂದು ಭೆಟ್ಟಿಯ ಕಾರ್ಡನ್ನು ತರುವನು. ಅದನ್ನು ನೋಡಿ ವಸುಧಾಬಾಯಿ ಚಟ್ಟನೆ ಎದ್ದು) ಅವರಿಗೆ ಬರಹೇಳು. (ಗೋಪಾಳ ಹೋಗಿ ವಿಶ್ವನಾಥರಾಯರನ್ನು ಕರೆತರುವನು. ವಿಶ್ವನಾಥರಾಯರು ವಸುಧಾಬಾಯಿ ಪರಸ್ಪರರು ನಮಸ್ಕರಿಸುವರು.) ಬನ್ನಿ, ಕೂತುಕೊಳ್ಳಿ.

ವಿಶ್ವ— (ಆಸನದಲ್ಲಿ ಕುಳಿತು) ನಮ್ಮ ಮಗ ವಿಶ್ವಂಭರನ ಮದುವೆಯ ವಿಷಯದಲ್ಲಿ ನಿಮ್ಮನ್ನು ಕಾಣಬೇಕಾಯಿತು, ಬಂದೆ.

ವಸು— ಸಂತೋಷ.

ವಿಶ್ವ— ನಿಮಗೆ ಸಂತೋಷವಿರಬಹುದು. ನಮ್ಮ ಮನೆತನದ ಗೌರವ ಹಾಳಾಗಿ ಹೋಯಿತು!

ವಸು— ರಾಯರೆ, ನನ್ನ ಮಾತನ್ನು ತಾವು ಅಪಾರ್ಥದಲ್ಲಿ ಭಾವಿಸಬಾರದು. ತಾವು ನಮ್ಮಂಥವರ ಮನೆಗೆ ಬಂದದ್ದು ಸಂತೋಷ ಎಂದು ನಾನು ಹಾಗೆಂದೆ.

ವಿಶ್ವ— ಅಷ್ಟು ನನಗೆ ತಿಳಿಯುತ್ತದೆ. ನಮ್ಮ ಹುಡುಗ ನಿಮ್ಮ ಮಗಳನ್ನು ಪ್ರೀತಿಸುತ್ತಾನಂತೆ! ಅದಕ್ಕೆ ನೀವು ಉತ್ತೇಜನ ಕೊಡಬಾರದಿತ್ತು! ನಿಮ್ಮ ತಿಳಿವಳಿಕೆಯಿಂದಲೇ ಇದು ನಡೆದಿರಬೇಕು!

ವಸು— ನನಗೂ ಇದು ಎಷ್ಟೋ ದಿವಸಗಳ ಮೇಲೆ ಗೊತ್ತಾಯಿತು. ಇಬ್ಬರೂ ಪ್ರಬುದ್ಧರು. ಸಂಪೂರ್ಣ ಅರಿವಿನಿಂದಲೇ ಅವರು ನಿಶ್ಚಯಿಸಿಕೊಂಡಿರಬೇಕು.

ವಿಶ್ವ— ನಿಮ್ಮ ಮಗಳ ದೃಷ್ಟಿಯಿಂದ ಇದು ಉತ್ಕೃಷ್ಟವೇ ಆಗಿದೆ. ಯಾಕಂದರೆ ಅವಳಿಗೆ ಇಂಥ ವರ ಸಿಗಬೇಕೆಲ್ಲಿ ? ಅರಿಯದ ಹುಡುಗನನ್ನು ಮರುಳು ಮಾಡಿ ಮಬ್ಬಿಗೆ ಕೆಡವಿದಿರಿ ! ನಿಮ್ಮ ಹುಡುಗೆಗೆ ತಿಳಿಯದಿದ್ದರೂ ನಿಮಗೆ ತಿಳಿಯಬೇಕಿತ್ತು !

ವಸು— ವಿಶ್ವನಾಥರಾಯರೆ, ನಮ್ಮ ವಿಷಯದಲ್ಲಿ ತಪ್ಪುಗ್ರಹಿಕೆ ಮಾಡಿಕೊಂಡು ಮಾತನಾಡಹತ್ತಿದರೆ ನಿಮಗೆ ಸಮಾಧಾನ ಹೇಳುವದು ನನಗೆ ಕಠಿಣವಾದೀತು. ನೀವು ಪೂರ್ವಗ್ರಹದೂಷಿತರಾಗಿ ಮಾತನಾಡ ಬೇಡಿ. ಏನೇ ನನ್ನಿಂದ ಕೇಳಿ ತಿಳಿದುಕೊಳ್ಳುವದಿದ್ದರೆ ಅವಶ್ಯವಾಗಿ ಕೇಳ ಬಹುದು. ನನಗೆ ಹೇಳಬೇಕಾದುದನ್ನು ಹೇಳುತ್ತೇನೆ.

ವಿಶ್ವ— ನಮ್ಮ ವಿಶ್ವಂಭರ ನಿಮ್ಮ ಮನೆಗೆ ಆಗಾಗ್ಗೆ ಬರುತ್ತಾನಲ್ಲ – ಅವನನ್ನು ನೀವು ಹಾಗೆ ಬರಗೊಡುವದು ಸರಿಯೆ ?

ವಸು— ಅದರಲ್ಲಿ ತಪ್ಪೇನಿದೆ ? ಸುಧೆಯ ಸಂಗಾತಿ. ಇಬ್ಬರೂ ಒಂದೇ ವರ್ಗದಲ್ಲಿ ಓದುತ್ತಿದ್ದಾರೆ. ರೂಪ, ಗುಣ, ಶೀಲ, ಸಂಸ್ಕಾರ ಎಲ್ಲ ದೃಷ್ಟಿಯಿಂದಲೂ ಶ್ರೇಷ್ಠನೆನಿಸಿಕೊಂಡ ಹುಡುಗ. ನನ್ನ ಸುಧೆಯೂ ಯಾವುದರಲ್ಲಿಯೂ ಕಡಿಮೆಯಾದವಳಲ್ಲ. ವಿಶ್ವಂಭರ ಮತ್ತು ಸುಧಾ ಒಬ್ಬರನ್ನೊಬ್ಬರು ಪ್ರೀತಿಸಿದರೆ ನಾನು ಅದಕ್ಕೆ ತಡೆಯೊಡ್ಡುವದು ಧರ್ಮವೇ ?

ವಿಶ್ವ— ನಿಮ್ಮ ದೃಷ್ಟಿಯಿಂದ ಇದು ಧರ್ಮವಾಗಿದ್ದೀತು. ಆದರೆ ವಿಶ್ವಂಭರನ ಮನೆತನ, ಕುಲ, ಅವನ ಗೌರವಗಳ ದೃಷ್ಟಿಯಿಂದ ಇದು ಧರ್ಮವೇ ? ಅದನ್ನು ನೀವು ಆಲೋಚನೆ ಮಾಡಿದ್ದೀರಾ ?

ವಸು— ಈ ಬಗೆಯಲ್ಲಿ ನಿಮ್ಮ ಅಭಿಪ್ರಾಯಗಳೇನಿವೆಯೊ ನಾನರಿಯೆ. ವಿಶ್ವಂಭರ ತಾನೇ ಮನಗೊಂಡು ಸುಧೆಗೆ ಮಾತು ಕೊಟ್ಟಿದ್ದಾನೆ. ಯಾವ ಮರುಳಿಗೂ ಅವನು ಮನಸೋತಿಲ್ಲ. ಇಷ್ಟೇ ಅಲ್ಲ, ಈ ಲಗ್ನಸಂಬಂಧಕ್ಕೆ ನೀವು ಒಪ್ಪುವಿರೆಂದೂ ಅವನು ಭರವಸೆಯನ್ನಿತ್ತಿದ್ದಾನೆ. ಇದಕ್ಕೂ ಹೆಚ್ಚು ನಾನೇನು ವಿಚಾರಮಾಡಬೇಕು ?

ವಿಶ್ವ— ಮದುವೆಗೆ ಗಂಡು ಹೆಣ್ಣಿನಲ್ಲಿ ಕೆಲವಾದರೂ ಸಮಾನ ಧರ್ಮಗಳು ಇರಲೇಬೇಕು. ನಾನು ಮುಖ್ಯವಾಗಿ ನೋಡುವದು ಕುಲ, ಮನೆತನ, ಶೀಲ, ಸಂಪ್ರದಾಯ ! ರೂಪ, ಶಿಕ್ಷಣ ಅಷ್ಟು ಮಹತ್ವವಾದವುಗಳಲ್ಲ. ಇವು ನನಗೆ ತೃಪ್ತಿಕರವಾಗುವಂತೆ ಇದ್ದರೆ ಈ ಸಂಬಂಧಕ್ಕೆ ನಾನು ಸಂತೋಷದಿಂದ ಸಮ್ಮತಿ ಕೊಡುತ್ತೇನೆ. ಆದರೆ ನಿಮ್ಮ ಬಾಬತ್ತಿನಲ್ಲಿ ಅವು ಹಾಗಿಲ್ಲ ಎಂದು ನನಗೆ ತಿಳಿದುಬಂದಿದೆ. ಇದಕ್ಕೆ ನಿಮ್ಮ ಉತ್ತರ ವೇನು ?

ವಸು— ವಿಶ್ವನಾಥರಾಯರೆ, ನಾನು ಜಾತಿಯುವಳಾಗಿಲ್ಲ; ನೀತಿಯುವಳಾಗಿದ್ದೇನೆ. ಜಾತಿಯುವಳಾಗಿ ಬಾಳಲು ನನಗೆ ಬರಲಿಲ್ಲ. ದೇವರು ಅಂಥ ತಂದೆತಾಯಿಗಳ ಹೊಟ್ಟೆಯಲ್ಲಿ ನನ್ನನ್ನು ಹಾಕಲಿಲ್ಲ. ಅದು ತಪ್ಪೊ ಒಪ್ಪೊ ನಾನರಿಯೆ. ಮನುಷ್ಯ ನೀತಿವಂತನಾಗಿ ಬಾಳಬೇಕು. ನಾನು ಪ್ರಮಾಣವಾಗಿ ಹೇಳಬಲ್ಲೆ, ನಾವು ಅದರಿಂದ ತಿಲಮಾತ್ರವಾದರೂ ವಿಮುಖರಾಗಿಲ್ಲ.

ವಿಶ್ವ— ಸುಧೆಯ ತಂದೆ ಯಾರೆಂಬುದರ ಬಗೆಗೂ ತಿಳಿವಳಿಕೆಯನ್ನು ಕೊಡಲು ನೀವು ಸಿದ್ಧರಿಲ್ಲ ಎಂದು ಕೇಳಿದ್ದೇನೆ. ಇದೂ ನಿಜವೊ ?

ವಸು— ಹೌದು ವಿಶ್ವನಾಥರಾಯರೆ, ಇದಾವುದನ್ನೂ ತಾವು ಕೇಳತಕ್ಕದ್ದಲ್ಲ. ನಾನು ಹೇಳುವ ಸ್ಥಿತಿಯಲ್ಲಿಲ್ಲ. ಅದೊಂದು ನನ್ನ ಜೀವನದ ಜೀವಾಳಕ್ಕೆ ಸಂಬಂಧಿಸಿದ ರಹಸ್ಯ. ಅದನ್ನು ಯಾರಿಗೂ ನಾನು ಉಸುರಲಾರೆ !

ವಿಶ್ವ— ಜಾತಿ ಹೇಳುವದಕ್ಕೆ ಬಾರದು; ಪತಿ ತಿಳಿಸುವದಕ್ಕೆ ಬಾರದು. ಬರೆ ನೀತಿಯ ನೆಲಗಟ್ಟಿನ ಮೇಲೆ ನಿಂತ ನಿಮ್ಮ ಸತೀತ್ವವನ್ನಾದರೂ ಯಾರು ಪ್ರಮಾಣಿಸಿ ನೋಡಿದ್ದಾರೆ ?

ವಸು— ನನ್ನ ಅಂತರಾತ್ಮನೇ ನನಗೆ ಸಾಕ್ಷಿ. ಯಾರ ಪರೀಕ್ಷೆ ಪ್ರಮಾಣಗಳೂ ನನಗೆ ಕಾರಣವಿಲ್ಲ. ನೀತಿ ಆಡುವ ಮಾತಲ್ಲ; ನಡೆಯುವ ಮಾತು. ನಮ್ಮ ನಡೆಯಿಂದಲೇ ಅನುಭವಕ್ಕೆ ಬರುವ ವಿಷಯ. ರಾಯರೆ, ಯಾರಿಗೂ ಭಾರವಾಗಿ ತೊಂದರೆಯಾಗಿ ಬಾಳಬೇಕೆಂದು ನಮ್ಮ

ಉದ್ದೇಶವಿಲ್ಲ. ಯಾರ ಜೀವನದಲ್ಲಿಯೂ ನಾವು ತೊಡಕುಂಟುಮಾಡುವದು ಬೇಡ. ನಮ್ಮ ಮಟ್ಟಿಗೆ ನಾವು ಸಮಾಜದಿಂದ ಅಲಿಪ್ತರಾಗಿ ಜೀವನದ ಜಂಜಾಟದಿಂದ ನಿರ್ಲಿಪ್ತರಾಗಿ ಇರಬೇಕೆಂದಿದ್ದೇವೆ. ನಾನು ಸಮಾಜಕ್ಕೆ ಇಷ್ಟೇ ಬೇಡಿಕೊಳ್ಳುತ್ತೇನೆ—ನಮ್ಮಷ್ಟಕ್ಕೆ ನಮ್ಮನ್ನು ಬಿಟ್ಟುಬಿಡಿ !

ವಿಶ್ವ— ನಮ್ಮ ಹುಡುಗನ ಬುದ್ಧಿಯನ್ನು ನೀವು ಕೆಡಿಸದೆ ಇದ್ದರೆ ನಾನು ನಿಮ್ಮ ಮನೆಗೆ ಬರುವ ಕಾರಣವೇ ಇರಲಿಲ್ಲ. ಈ ತೊಂದರೆ ಯನ್ನುಂಟುಮಾಡಿದವರು ನೀವೇ ಅಲ್ಲವೆ? ಅದರ ಹೊಣೆಯೆಲ್ಲ ನಿಮ್ಮ ಮೇಲೆಯೇ ಇದೆ

ವಸು— ವಿಶ್ವಂಭರನಿಗೆ ನಾನು ಹಲವುಬಾರಿ ಎಚ್ಚರಿಕೆ ಕೊಟ್ಟದ್ದೇನೆ, ತಿಳಿವಳಿಕೆ ಹೇಳಿದ್ದೇನೆ. ಸುಧಾ ಮತ್ತು ವಿಶ್ವಂಭರರು ಮೈತುಂಬ ಎಚ್ಚರ ಇಟ್ಟುಕೊಂಡೇ ಮದುವೆಗೆ ಮನಸ್ಸು ಮಾಡಿದ್ದಾರೆಂದ ಮೇಲೆ ಅದರ ಹೊಣೆಯೆಲ್ಲ ಅವರಿಬ್ಬರ ಮೇಲೆಯೇ ಇದೆ. ಅದಕ್ಕೆ ಒಪ್ಪಿದ ಮಟ್ಟಿಗೆ ಹೊಣೆ ನನ್ನದು ಎಂಬುದನ್ನು ನಾನು ಹೇಳಬಲ್ಲೆ.

ವಿಶ್ವ— ಆದರೆ ನಿಮ್ಮ ಜಾತಿಯ ವಿಷಯದಲ್ಲಿ ಮತ್ತು ಸುಧೆಯ ಜನ್ಮದ ವಿಷಯದಲ್ಲಿ ನೀವು ಅವನಿಗೆ ಕಲ್ಪನೆ ಮಾಡಿಕೊಟ್ಟಿದ್ದರೆ ಅವನಿಂದ ಈ ತಪ್ಪು ಆಗುತ್ತಿರಲಿಲ್ಲ.

ವಸು— ಹಾಗೇನಿಲ್ಲ. ಅದರಲ್ಲಿ ತನಗೆ ಶ್ರದ್ಧೆಯಿಲ್ಲ ಎಂದು ಅವನು ಮಾತುಮಾತಿಗೂ ಆಡುತ್ತಿರುತ್ತಾನೆ.

ವಿಶ್ವ— ಇದೇ ನಿಮ್ಮ ಮೋಸಗಾರಿಕೆ. ಭಾವನಾಪ್ರಧಾನವಾದ ತರು ಣರು ಬಾವಿಗೆ ಬೀಳುವದು ಹೀಗೆಯೇ ! ನಮ್ಮ ಹುಡುಗ ಎಂಥ ಒಳ್ಳೇ ಹುಡುಗ ! ನಿಮ್ಮ ಬಲೆಗೆ ಬಿದ್ದು ವ್ಯರ್ಥವಾಗಿ ಕೆಟ್ಟುಹೋದ ! ಉಜ್ವಲ ವಾಗಬೇಕಾದ ಅವನ ಭವಿಷ್ಯ ಹಾಳುಗುಂಡಿಯು ಸಮನಾಯ್ತು !

ವಸು— ವಿಶ್ವನಾಥರಾಯರೆ, ಯಾರ ಉತ್ಕರ್ಷದಲ್ಲಿಯೂ ಕಾಲ್ತೊಡ ಕಾಗುವದು ನಮಗೆ ಬೇಡವೇ ಬೇಡ. ಆತ್ಮಸಾಕ್ಷಿಯಾಗಿ ಹೇಳುತ್ತೇನೆ— ನನ್ನ ಸುಧೆಯಿಂದ ವಿಶ್ವಂಭರನ ಬಾಳು ಹಾಳುಗುಂಡಿಯಾಗುವುದು ಬೇಡ ನನ್ನ ಸುಧೆ ವಿವೇಕಿಯಾಗಿದ್ದಾಳೆ, ಸಂಯಮಿಯಾಗಿದ್ದಾಳೆ, ಸುಶೀಲೆ ಯಾಗಿದ್ದಾಳೆ. ಆಜನ್ಮ ಅವಿವಾಹಿತೆಯಾಗಿಯೂ ಅವಳು ತನ್ನ

ಆಯುಷ್ಯವನ್ನು ಕಳೆಯಬಹುದು. ಪ್ರಸಂಗ ಬಂದರೆ ಅಂಥ ತ್ಯಾಗಕ್ಕೂ ಅವಳು ಹಿಂಜರಿಯಲಾರಳು. (ಸುಧಾ ಕಾಲೇಜದಿಂದ ಬರುವಳು. ವಿಶ್ವನಾಥ ರಾಯರು ಅವಳನ್ನು ದಿಟ್ಟಿಸಿ ನೋಡುತ್ತಿರುವರು) ಸುಧಾ, ಇವರು ವಿಶ್ವಂಭರನ ತಂದೆಯವರು. (ವಿಶ್ವನಾಥರಾಯರಿಗೆ) ಇವಳೇ ನನ್ನ ಮಗಳು ಸುಧಾ. (ಸುಧಾ ವಿಶ್ವನಾಥರಾಯರಿಗೆ ನಮಸ್ಕರಿಸುವಳು, ವಿಶ್ವನಾಥರಾಯರು ಆಶೀರ್ವದಿಸುವರು.) ಕೂಡು, ಸುಧಾ. (ಸುಧಾ ಕುರ್ಚಿಯ ಮೇಲೆ ತಾಯಿಯ ಹತ್ತಿರ ಕೂಡುವಳು.)

ವಿಶ್ವ— ನೀನು ಈ ಹೊತ್ತಿನಲ್ಲಿ ಬಂದದ್ದು ಬಹಳ ಒಳ್ಳೇದಾಯಿತು. ನೀನು ಅತ್ಯಂತ ವಿಚಾರಶೀಲಳಾಗಿರುವಿಯೆಂದು ನಿನ್ನ ತಾಯಿ ಹೇಳಿದರು. ಬಹಳ ಸಂತೋಷದ ಮಾತು. ಸುಧಾ, ನಾವು ಎಷ್ಟೇ ಸುಧಾರಕರೆಂದೆನಿಸಿಕೊಂಡರೂ ನಮ್ಮದು ಸಂಪ್ರದಾಯವಂತರ ಮನೆತನ. ಪೂರ್ವದಿಂದ ನಡೆದು ಬಂದ ಧಾರ್ಮಿಕ ಸಂಸ್ಕಾರಗಳನ್ನು ನಾವು ಆಮೂಲಾಗ್ರವಾಗಿ ಬಿಡಲಾರೆವು. ನಮಗಿರುವ ದೊಡ್ಡ ಆಪ್ತಸಮೂಹ, ಅಪಾರ ಪರಿವಾರ, ಎಲ್ಲರನ್ನೂ ದೂರೀಕರಿಸಿ ನಾವು ಅವರಿಂದ ಪರಿತ್ಯಕ್ತರಾಗಿ ಬಾಳ್ವೆ ಮಾಡುವದು ನಮಗೆಂದೂ ಸೇರದ ಮಾತು. ನಮ್ಮ ಕುಲಪರಂಪರೆಗೆ, ಗೌರವ ಪರಂಪರೆಗೆ ಕ್ಷತಿ ಬಾರದ ಹಾಗೆ ನಮ್ಮ ಮಗನೂ ನಡೆದುಕೊಳ್ಳಬೇಕೆಂದು ನಮ್ಮ ಏಕಮೇವ ಆಕಾಂಕ್ಷೆ. ಅದನ್ನು ನಡೆಸಿಕೊಡುವದು, ಸುಧಾ, ನಿನ್ನನ್ನೇ ಕೂಡಿದೆ. ವಿಶ್ವಂಭರನ ಮನಸ್ಸನ್ನು ಈ ಮದುವೆಯಿಂದ ಪರಾವೃತ್ತಗೊಳಿಸುವ ಕಾರ್ಯವು ನಿನಗೆ ತೀರ ಕಟುವಾಗಿದ್ದರೂ ಅದನ್ನು ನೀನು ನಿರ್ವಹಿಸಲೇಬೇಕು. ಈ ಔದಾರ್ಯವನ್ನು ನೀನು ತೋರಿಸಬಲ್ಲೆಯಾ? ನಿನ್ನಲ್ಲಿ ಅಂಥ ಸಂಯಮ ತ್ಯಾಗಬುದ್ಧಿ ಇದೆಯೆಂದು ನನ್ನ ಭಾವನೆ. ನಿನ್ನಿಂದ ಈ ತ್ಯಾಗವನ್ನು ನಾನು ಅಪೇಕ್ಷಿಸಬಹುದೆ? ವಿಶ್ವಂಭರನ ತಾಯಿ ಮರಣಾಂತಿಕ ಸ್ಥಿತಿಯಲ್ಲಿದ್ದಾಳೆ! ಅವಳ ಪ್ರಾಣ, ನನ್ನ ಮಾನ ನಿನ್ನನ್ನೇ ಕೂಡಿವೆ. ಇದೊಂದನ್ನು ಮಾಡಿ ನಮ್ಮ ಮನೆತನವನ್ನು ಉಳಿಸು! ವಿಶ್ವಂಭರ ಭಾವನಾವಾದಿ ಹುಡುಗ. ಯಾವದೇ ಹಟ ಹಿಡಿದರೆ ಬಿಡುವವನಲ್ಲ. ನೀನೇ ಅವನನ್ನು ಈ ಸಂಕಟದಿಂದ ಪಾರುಗಾಣಿಸಬೇಕು. ಅಷ್ಟು ನೀನು ಮಾಡುವೆಯಾ ಸುಧಾ? ಮಾಡುವೆ ಎಂದು

ಹೇಳು. ಹೇಳುವೆಯಾ ? (ಸುಧೆಯ ಕಣ್ಣುಗಳಿಂದ ಅಶ್ರುಗಳು ಧಾರೆಯಾಗಿ ಬೀಳುತ್ತಿರುವವು)

ಸುಧಾ— ನೀವು ನನಗೆ ತಂದೆಯಂತೆ ಪೂಜ್ಯರು. ನಾನೊಬ್ಬ ಮಗಳೆಂದೇ ಭಾವಿಸಿ. ವಿಶ್ವಂಭರರೊಡನೆ ನನ್ನ ಮದುವೆಯಾಗದಿದ್ದರೆ ನಿಮಗೆ ತೃಪ್ತಿಯಾಗುವದಲ್ಲ? ಆಗಲಿ. ಹಾಗೆಯೇ ನಾನು ಈ ಜನ್ಮದಲ್ಲಿ ಅವರನ್ನೆಂದೂ ಮದುವೆಯಾಗುವದಿಲ್ಲ ಎಂದು ವಚನ ಕೊಡುತ್ತೇನೆ. ಆಮರಣ ನಾನು ಅವಿವಾಹಿತಳಾಗಿಯೇ ಇರಬೇಕೆಂದು ವಿಧಿಸಂಕಲ್ಪವಿದ್ದರೆ ನಾನು ಅದನ್ನು ತಪ್ಪಿಸಲಾರೆ. ನಾನು ಆಮರಣ ಹೀಗೆಯೇ ಉಳಿಯುವೆ. ಎಲ್ಲ ಸುಖಗಳೂ ಎಲ್ಲರಿಗೂ ಸಮಾನವಾಗಿ ಎಂದೂ ದೊರಕುವದಿಲ್ಲ. ನಾನು ವಿಶ್ವಂಭರರನ್ನು ಪ್ರೀತಿಸಿದೆ; ಇಂಥ ಪ್ರೀತಿಗೆ ಸಾಮಾಜಿಕ, ಧಾರ್ಮಿಕ ಮನ್ನಣೆ ದೊರಕುವ ಕಾಲಬರಬೇಕಾದರೆ ಇನ್ನೂ ಬಹಳ ದಿವಸಗಳು ಹೋಗಬೇಕು. ನಮ್ಮಂಥವರ ಸಂತಪ್ತ ಹೃದಯದ ಕಾಡ್ಗಿಚ್ಚಿನಲ್ಲಿ ಈ ಜಾತಿಯ ಭೂತದ ಕಗ್ಗಂಟು ಸುಟ್ಟು ಭಸ್ಮವಾದಾಗಲೇ ನೈಜವಾದ ಪ್ರೀತಿಗೆ ಉಳಿಗಾಲ ! ಆಗಲಿ, ವಿಶ್ವಂಭರರು ಬೇರೆ ಮದುವೆಯಾಗಿ ಸುಖವಾಗಿ ಬಾಳಲಿ. ಅದರಿಂದ ನಿಮಗೂ ಸಂತೃಪ್ತಿಯಾಗಲಿ.

ವಿಶ್ವ— ಇದನ್ನು ನೀನು ಕೊನೆಯವರೆಗೆ ನಡಸಿಕೊಡುವೆಯಾ, ಸುಧಾ ?

ಸುಧಾ— ಇದಕ್ಕೆ ನಾನೆಂದೂ ತಪ್ಪುವದಿಲ್ಲ. ಆಮರಣಪರಿಯಂತ ನಡಸಿಕೊಡುತ್ತೇನೆ. ಆಯಿತೆ ?

ವಿಶ್ವ— ಸಂತೋಷ. ಸುಧಾ, ವಿಶ್ವಂಭರನಂತೆ ನೀನೂ ಕೂಡ ಬೇರೆಯವರನ್ನು ಮದುವೆಯಾಗಿ ಸುಖದಿಂದ ಬಾಳು, ಎಂದು ನನ್ನ ಹರಕೆ.

ಸುಧಾ— ನಿಮ್ಮ ಆಶೀರ್ವಾದಕ್ಕಾಗಿ ನಿಮಗೆ ನನ್ನ ಅನಂತ ಪ್ರಣಾಮಗಳು. ಆದರೆ ಇದೆಂದೂ ಫಲಿಸಲಾರದ ಹರಕೆ. ಅದು ನನ್ನ ದೈವದ ದುರ್ವಿಲಾಸ ! ನಿಮ್ಮ ದೋಷವಲ್ಲ.

ವಿಶ್ವ— (ಎದ್ದು) ಬರ್ತೇನೆ....ವಸುಧಾಬಾಯಿ. ಬರ್ತೇನೆ....ಸುಧಾ.

ವಸು— ದಯವಿಟ್ಟು ವಿಶ್ವಂಭರನಿಗೆ ಹೇಳಿ—ನಮ್ಮ ಮನೆಗೆ ಇನ್ನು ಬರಬೇಡಿ ಎಂದು. ಸುಮ್ಮನೆ ಸಂತಾಪಕ್ಕೆ ಕಾರಣ.

ವಿಶ್ವ— ಆಗಲಿ, ಹೇಳುತ್ತೇನೆ. ಆದರೆ ಇನ್ನೊಂದು....ವಿಚಾರ.... (ಸ್ವಲ್ಪ ಯೋಚಿಸಿ) ಏನೂ ಇಲ್ಲ........ಏನೂ ಇಲ್ಲ. ಬರ್ತೀನೆ, ನಮಸ್ಕಾರ.............(ವಸುಧಾಬಾಯಿ ಹಾಗು ಸುಧಾ ವಿಶ್ವನಾಥರಾಯರನ್ನು ಬೀಳ್ಕೊಡುವರು.)

ವಸು— ಸುಧಾ........ ! (ತುಂಬಿ ಬಂದ ದುಃಖದ ಭಾರದಿಂದ ಅಲ್ಲಿಯೇ ಒರಗುವಳು.) ದುರ್ದೈವಿ ಸುಧಾ ! ನಿನ್ನ ಜೀವನದಲ್ಲಿಯೂ ವೈವಾಹಿಕ ಸುಖ ಎಂಬುದು ಇಲ್ಲದೆ ಹೋಯಿತೇ, ಮಗೂ ? ನಾವು ಪೂರ್ವಜನ್ಮದಲ್ಲಿ ಎಂಥ ಪಾಪವನ್ನು ಆಚರಿಸಿದ್ದೇವು? ಯಾವ ದುಷ್ಕೃತ್ಯವು ನಮ್ಮಿಂದ ಘಟಿಸಿದ್ದೀತು ? ಹೇ ಭಗವನ್ ! ಪಾಪೋಽಹಂ ಪಾಪಕರ್ಮಾಣಾಂ ಪಾಪಾತ್ಮಾ ಪಾಪಸಂಭವಃ | ತ್ರಾಹಿಮಾಮ್ ನರಕಾತ್ ಘೋರಾತ್ ಶರಣಾಗತ ವತ್ಸಲ ॥ (ವಸುಧಾಬಾಯಿ ಕಣ್ಣು ಮುಚ್ಚಿ ಕೈಜೋಡಿಸಿ ಕುಳಿತು ಬಿಡುವರು ಕಂಬನಿಗಳು ಗಲ್ಲದ ಮೇಲಿಂದ ಜಾರಿ ಬೀಳುತ್ತಿರುವವು. ಸುಧಾ, ತಾಯಿಯ ಬಳಿ ಬಂದು ಅವಳ ಹೆಗಲ ಮೇಲೆ ಕೈಯಿಟ್ಟು ಅವಳನ್ನು ಸಾಂತ್ವನಗೊಳಿಸುವಳು.)

ಸುಧಾ— ಅಕ್ಕಾ, ಎಲ್ಲರಿಗೂ ಧೈರ್ಯವನ್ನು ಹೇಳುವಾಕೆ—ನೀನೇ ಎದೆಗೆಟ್ಟರೆ ಹೇಗೆ ? ನನಗಾಗಿ ದುಃಖಿತಳಾಗಬೇಡ. ಕರ್ಮಗತಿ ಯಾರಿಗೂ ತಪ್ಪದು ಎಂದು ನೀನೇ ಹೇಳುತ್ತೀಯಲ್ಲ ? ಮಾನವನ ಇತಿ ಕರ್ತವ್ಯತೆ ಮದುವೆಯಲ್ಲಿಯೇ ಇದೆಯೆ ? ವಿಶ್ವಂಭರರ ಹೆಂಡತಿ ಆಗಿ ಬಾಳಲಾರೆ; ಆದರೆ ಎಲ್ಲರ ಮಗಳಾಗಿ ಬಾಳುವೆ ! ಶುದ್ಧವಾದ ಪ್ರೇಮವು ಸ್ವಾರ್ಥರಹಿತವಾಗಿರುವದಂತೆ. ಅಂಥ ಸಾತ್ವಿಕ ಪ್ರೇಮವು ನನ್ನಲ್ಲಿ ನೆಲೆಯೂರಲಿ! (ಹೀಗೆನ್ನುವಾಗ ಸುಧೆಯ ಕಣ್ಣುಗಳಿಂದಲೂ ಕಂಬನಿಗಳು ದಳದಳನೆ ಹೋಗುತ್ತಿರುವವು)

ವಸು— ಸುಧಾ, ಮಗೂ....ನನಗೆ ನೀನು ಧೈರ್ಯ ಹೇಳಬೇಕು. ನಿನಗೆ ನಾನು ಧೈರ್ಯ ಕೊಡಬೇಕು. ನಮ್ಮಿಬ್ಬರ ಧೈರ್ಯಕ್ಕೂ ಆಧಾರನಾಗಿರುವ ಆ ಭಗವಂತನನ್ನೇ ಮೊರೆಹೊಗೋಣ. ನಮಗೆ ಬೇರೆ

ಯಾರ ಆಧಾರವಿದೆ? ತೆಗೆ ಆ ಭಗವದ್ಗೀತೆಯನ್ನು. ಅದರಲ್ಲಿಯ ೧೧ನೆಯ ಅಧ್ಯಾಯವನ್ನೋದು. (ಸುಧಾ ಭಗವದ್ಗೀತೆಯನ್ನು ತಂದು ೧೧ನೆಯ ಅಧ್ಯಾಯದಲ್ಲಿ ೨ ಶ್ಲೋಕಗಳನ್ನು ಹೇಳುವಳು.)

ಶ್ಲೋಕ ೧

ತ್ವಮಾದಿ ದೇವಃ ಪುರುಷಃ ಪುರಾಣ- |
ಸ್ತ್ವಮಸ್ಯ ವಿಶ್ವಸ್ಯಪರಂ ನಿಧಾನಂ ||
ವೇತ್ತಾಸಿ ವೇದ್ಯಂಚ ಪರಂಚ ಧಾಮ |
ತ್ವಯಾ ತತಂ ವಿಶ್ವಮನಂತ ರೂಪ ! ||

೨

ಪಿತಾಸಿ ಲೋಕಸ್ಯ ಚರಾಚರಸ್ಯ |
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ||
ನತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ |
ಲೋಕತ್ರಯೇಽಪ್ಯಪ್ರತಿಮಪ್ರಭಾವಃ ||

[ತೆರೆ ಬೀಳುವದು.]

— ಎರಡನೆಯ ಅಂಕ ಸಮಾಪ್ತ —

ಅಂಕ ೩

ಪ್ರವೇಶ ೧

[ವಿಶ್ವನಾಥರಾಯರು ಸೋಫಾದ ಮೇಲೆ ಒರಗಿದ್ದಾರೆ. ಬೀದಿಯಲ್ಲಿ ಒಬ್ಬ ಭಿಕ್ಷುಕನು ಒಂದು ತತ್ತ್ವಪದವನ್ನು ಹೇಳುತ್ತ ಹೊರಟಿರುವನು. ವಿಶ್ವನಾಥರಾಯರು ಅದನ್ನು ಆಲಿಸಿ ಕೇಳುವರು. ಒಂದೆರಡು ನಿಮಿಷಗಳಲ್ಲಿ ಹಾಡು ನಿಲ್ಲುವದು. ರಾಯರು ಎದ್ದು ಅತ್ತಿತ್ತ ಅಡ್ಡಾಡುವರು. ಅವರು ತೀರ ವಿವಂಚನೆಯಲ್ಲಿರುವುದು ಕಾಣುವುದು. ಆಗ ದಿಗಂಬರ ಪ್ರವೇಶಿಸುವನು.]

ವಿಶ್ವ— (ದಿಗಂಬರನನ್ನು ನೋಡಿ) ಏನು ದಿಗಂಬರ ? ಏನಾದರೂ ಬೇಕಿತ್ತೇ ?

ದಿಗ— ಡಾಕ್ಟರರು ಬಂದು ಕುಳಿತಿದ್ದಾರೆ. ವಿಶೂನೊಡನೆ ತಾವು ಮಾತನಾಡುವಾಗ ಯಾರೂ ಹತ್ತಿರ ಇರಕೂಡದೆಂದು ಹೇಳಿದರು; ಬಂದೆ.

ವಿಶ್ವ— ಡಾಕ್ಟರು ಬರುವ ಮೊದಲು ವಿಶು ಏನು ಮಾಡುತ್ತಿದ್ದ ? ಸುಮ್ಮನೆ ಬಿದ್ದುಕೊಂಡಿದ್ದನೆ ? ಅಥವಾ ಉದ್ರೇಕಾವಸ್ಥೆಯಲ್ಲಿ ತೂಕತಪ್ಪಿ ಮಾತನಾಡುತ್ತಿದ್ದನೆ ? ಇದೆಲ್ಲವನ್ನೂ ನೋಡಿ ನಿನಗೇನೆನಿಸುವದು ದಿಗಂಬರ ?

ದಿಗ— ಕಾಕಾ, ವಿಶೂನ ಮನೋರಚನೆಯೇ ಒಂದು ವಿಜಾತೀಯವಾಗಿದೆ. ಅವನು ಸಹಸಾ ತಪ್ಪು ಹಾದಿಯಲ್ಲಿ ಹೆಜ್ಜೆ ಹಾಕುವವನಲ್ಲ. ಯಾವುದನ್ನು ಮಾಡಿದರೂ ಭಾವನೆಯ ಉತ್ಕಟತೆಯಿಂದಲೆ ಮಾಡುವವ. ಅರೆಮನಸ್ಸೆಂಬುದನ್ನು ಅವನೆಂದೂ ಅರಿಯ. ತೂಕತಪ್ಪಿದ ಅವನ ಮಾತಿಗೆ, ಅವನ ಈಗಿನ ಉನ್ಮನಾವಸ್ಥೆಯೆ ಕಾರಣವಿರಬೇಕು.

ವಿಶ್ವ— ಇದು ಉನ್ಮನವಲ್ಲ; ಉನ್ಮಾದ! ಹೆಣ್ಣಿಗಾಗಿ ಬರುವ ಉನ್ಮಾದ ದಿಗಂಬರ !

ದಿಗ— ನೀವು ಯಾವದೇ ಅಂದರೂ ಇದರ ಪರಿಣಾಮ ಅವನ ಮೈ-ಮನಗಳ ಮೇಲೆ ಎಂಥ ಅನಿಷ್ಟಕಾರಕವಾಗಬಹುದೆಂಬುದನ್ನು ನೀವು ಆಲೋಚಿಸಬೇಕು. ಅವನ ಈ ಮನಃಸ್ಥಿತಿಯಲ್ಲಿ ನೀವು ಬೇರೆ ಮದುವೆಯ ವಿಚಾರವನ್ನಾದರೂ ಹೇಗೆ ಮಾಡುವವರು ? ಸುಧೆಯಂತೆ ತಾನೂ ....

ವಿಶ್ವ— ಸುಧೆಯಂತೆಯೇನು ? ಹೇಳು ದಿಗಂಬರ, ಹೇಳು!

ದಿಗ— ತಾನೂ ಆಮರಣ ಅವಿವಾಹಿತನಾಗಿರುವವನೆಂದು ಪ್ರತಿಜ್ಞೆ ಮಾಡಿದ.

ವಿಶ್ವ— (ಗಾಬರಿಗೊಂಡು) ಯಾವಾಗ? ಯಾವಾಗ ಪ್ರತಿಜ್ಞೆ ಮಾಡಿದ? ಅಯ್ಯೋ ಮೂರ್ಖ ! ಇದೇನು ಮತ್ತೊಂದು ಸಂಕಟ !

ದಿಗ— ಹೌದು ಕಾಕಾ, ಇದೊಂದು ನಿವಾರಿಸಲಾಗದ ಸಂಕಟ ! ಹೊಸಕಾಲದ ತಿಳಿವಳಿಕೆಯ ಅರಿವುಳ್ಳವರು ನೀವು. ನಿಮ್ಮಿಬ್ಬರಲ್ಲಿ ಯಾರದು ಸರಿ, ಯಾರದು ತಪ್ಪು ಎಂಬುದನ್ನು ನಿರ್ಣಯವಾಗಿ ಹೇಳುವ ನಿಶ್ಚಿತ ಜ್ಞಾನವು ನನ್ನಂಥವನಿಗಿಲ್ಲ. ಆದರೆ ಸರ್ವಸ್ವವನ್ನು ಕಳೆದುಕೊಳ್ಳುವ ಹೊತ್ತು ಬಂದಾಗ, ಅರ್ಧವನ್ನಾದರೂ ಉಳಿಸಿಕೊಳ್ಳುವದು ಬುದ್ಧಿವಂತಿಕೆ ಯಾದೀತು. ನಿಮ್ಮಂಥವರೆದುರು ನಾನು ಬುದ್ಧಿಯ ಮಾತುಗಳನ್ನಾಡುವದು, ಸಣ್ಣ ಬಾಯಲ್ಲಿ ದೊಡ್ಡ ತುತ್ತೆಂಬದನ್ನು ನಾನು ಬಲ್ಲೆ. ಕಾಕಾ, ನನ್ನನ್ನು ನೀವು ಕ್ಷಮಿಸಬೇಕು.

ವಿಶ್ವ— ಇಲ್ಲ, ಇಲ್ಲ ! ದಿಗಂಬರ, ನಾನು ಎಷ್ಟೇ ವಿಚಾರಶೀಲನಾಗಿದ್ದರೂ ನನ್ನ ಬುದ್ಧಿಯು ವಿಭ್ರಮಗೊಂಡಿದೆ. ಎಂದೂ ನಾನು ಇಷ್ಟು ಕಂಗೆಟ್ಟಿರಲಿಲ್ಲ. ನಾನೂ ಈ ಸಮಸ್ಯೆಯನ್ನು ಹಲವು ರೀತಿಯಲ್ಲಿ ಪರ್ಯಾ-ಲೋಚಿಸುತ್ತಾ ಇದ್ದೇನೆ, ಆತ್ಮನಿರೀಕ್ಷಣೆ ಮಾಡಿಕೊಳ್ಳುತ್ತಾ ಇದ್ದೇನೆ. ಇಷ್ಟೇ ಅಲ್ಲ, ವಿಶೂನ ದೃಷ್ಟಿಯಿಂದ ವಿಚಾರ ಮಾಡುತ್ತಾ ಇದ್ದೇನೆ. ಕೌಟುಂಬಿಕ ಗೌರವಪರಂಪರೆಯ ದೃಷ್ಟಿಯಿಂದ ವಿಚಾರ ಮಾಡುತ್ತಾ

ಇದ್ದೇನೆ. ಆದರೂ ಇದೇ ಸಮುಚಿತವಾದ ಮಾರ್ಗ ಎಂಬುದು ನಿಷ್ಕರ್ಷೆಯಾಗಲೊಲ್ಲದು! ದಿಗಂಬರ, ನೀನೇ ಹೇಳು, ವಿಶು ಸುಧೆಯನ್ನು ಲಗ್ನವಾದರೆ, ನಾನು ಕಟ್ಟಿದ ಗೌರವದ ಏಳಂತಸ್ತಿನ ಕಟ್ಟಡವು ಕ್ಷಣದಲ್ಲಿ ನೆಲಸಮವಾಗಲಿಕ್ಕಿಲ್ಲವೇ ?

ದಿಗ— ಕಾಕಾ, ವಿಶು ವಿಕಾರವಶನಾಗಿ ಸುಧೆಗಾಗಿ ಹುಚ್ಚನಾಗಿಲ್ಲ. ಅವನಿಗೂ ಆದರ್ಶದ ಹಂಬಲವಿದೆ. ಅವನು ತತ್ತ್ವಕ್ಕಾಗಿ ಬಾಳಬೇಕು ಅನ್ನುತ್ತಾನೆ; ಸತ್ಯಕ್ಕಾಗಿ ಹೆಣಗಬೇಕು ಅನ್ನುತ್ತಾನೆ. ಅವನಲ್ಲಿ ಡಂಭಾಚಾರ ಎನ್ನುವದು ಇಲ್ಲ—ಎಂಬುವದು ನಿಮಗೂ ಗೊತ್ತಿದ್ದ ಮಾತು. ಸುಧೆಯನ್ನು ಮದುವೆಯಾದರೂ ಅವನು ಅವಿವೇಕಿಯಾಗಿ ನಡೆಯಲಾರ. ತನ್ನ ಗೌರವವನ್ನು ಅವನು ಎಲ್ಲಿದ್ದರೂ ಕಾಯ್ದುಕೊಳ್ಳಬಹುದು. ಅವನು ಮನೆಯಲ್ಲಿರುವದು ಬೇಡವಾಗಿದ್ದರೆ ಬೇರೆಯಾಗಿರಲಿ! ಅವನು ವಿವೇಕಿಯಾಗಿ ಎಲ್ಲಿ ಬಾಳಿದರೂ ನಿಮಗೆ ಸಂತೋಷವೇ ಅಲ್ಲವೆ ? ಈಗಿನ ನಿಮ್ಮ ಗೌರವ-ಪ್ರತಿಷ್ಠೆಗಳು ನಿಮ್ಮ ಕೃತಿಯಿಂದ ಬಂದುವು; ನಿಮ್ಮ ಸ್ಥಿತಿಯಿಂದ ಬಂದುವಲ್ಲ. ಅದರಂತೆಯೇ ನಾಳೆ ವಿಶೂನಿಗೆ ದೊರೆಯಬೇಕಾದ ಮಾನಸನ್ಮಾನಗಳು ಅವನ ಯೋಗ್ಯತೆಯಂತೆ ದೊರೆಯತಕ್ಕುವು. ವಿಶು ಕುಲಕ್ಕೆ ಕಲಂಕ ತರುವವನಲ್ಲ, ಈ ಮದುವೆಯಿಂದ ಅವನಿಗೆ ಕಲಂಕ ತಟ್ಟಿದರೆ, ಅದು ಚಂದ್ರನ ಕಲಂಕದಷ್ಟೇ ಒಂದು ಅಲಂಕಾರವೆನಿಸೀತು! ಕಾಕಾ, ನನ್ನ ಬಾಯಿಂದ ತಾನಾಗೇ ಏನೇನೊ ಮಾತು ಹೊರಬರುತ್ತಾ ಇದೆ. ನಾನು ನಿಮ್ಮೆದುರಿಗೆ ಹೀಗೆ ಮಾತನಾಡಬಹುದೇ ?

ವಿಶ್ವ— (ಕಣ್ಣುಮುಚ್ಚಿ) ದಿಗಂಬರ, ಹೃದಯ ತುಂಬಿ ನಿನಗೆ ಮಾತ್ರ ಬರುತ್ತಾ ಇದೆ. ಹೃದಯ ತುಂಬಿ ನನಗೆ ದುಃಖ ಉಮ್ಮಳಿಸಿ ಬರುತ್ತಾ ಇದೆ. ದಿಗಂಬರ, ನಿನ್ನ ಮಾತು ನಿಲ್ಲಿಸಬೇಡ, ಇನ್ನಿಷ್ಟು ಹೇಳು! ನಿನಗೆ ಅನಿಸುವದನ್ನೆಲ್ಲ ನನಗೆ ಹೇಳು! ಹೊಟ್ಟೆಯಲ್ಲಿ ಯಾವುದನ್ನೂ ಇಟ್ಟುಕೊಳ್ಳಬೇಡ. ನೀನು ಹೇಳುವದನ್ನೆಲ್ಲ ನಾನು ಕೇಳುತ್ತೇನೆ. ಹೇಳು, ದಿಗಂಬರ, ನನಗೆ ಏನಾದರೂ ಹೇಳು!

ದಿಗ— ಕಾಕಾ, ಲೌಕಿಕದಲ್ಲಿ ನನಗೇನು ತಿಳಿಯುತ್ತದೆ ? ನಿಮ್ಮ ಪ್ರಪಂಚಾನುಭವದ ಒಂದು ಶತಾಂಶದಷ್ಟಾದರೂ ನನ್ನಲ್ಲಿದೆಯೇ? ತಲೆಯ ಮೇಲಿನ ಮಾಸ ಹಾರದ ಹುಡುಗ ನಾನು !

ವಿಶ್ವ— ಇಲ್ಲ, ದಿಗಂಬರ, ನಿಮಗಿರುವ ತೀಕ್ಷ್ಣಬುದ್ಧಿ ನಮಗಿಲ್ಲ. ಯಾರ ಮಾತಿನಿಂದಾದರೂ ನನ್ನಲ್ಲಿ ವಿಚಾರದ ಮಿಂಚು ಹೊಳೆದರೆ, ನನ್ನ ಹಾದಿ ನನಗೆ ಸುಗಮವಾದೀತು; ಸ್ಪಷ್ಟವಾಗಿ ಕಂಡೀತು. ಸುಧಾ-ವಿಶು ಇಬ್ಬರೂ ಆಮರಣ ಅವಿವಾಹಿತರಾಗಿ ಬದುಕುವ ಕಲ್ಪನೆಯೂ ನನಗೆ ಅಸಹ್ಯ ವೇದನೆಯನ್ನು ಕೊಡುತ್ತಾ ಇದೆ.

ದಿಗ— ಕಾಕಾ, ಜಗತ್ತೇ ಒಂದಾಗಬೇಕು ಎಂದು ಧರ್ಮತತ್ತ್ವ ಸಾರುತ್ತಿರುವಾಗ, ಎರಡು ಜೀವ ಒಂದಾಗಬೇಕು ಅಂದರೆ ನಾವು ಆಗಗೊಡದಿರುವದು ಯಾವ ನ್ಯಾಯ ? ನಾವು ಯಾವ ಧರ್ಮವನ್ನು ಅಕ್ಷರಶಃ ಪಾಲಿಸುತ್ತೇವೆ ? ಕಾಕಾ, ಜಾತಿ ಎನ್ನುತ್ತೀರಲ್ಲ ! ಇಂಥ ಒಂದು ಜಾತಿಯಲ್ಲಿ ಶುದ್ಧ ರಕ್ತವಿದೆ ಎಂದು ಹೇಳಬಲ್ಲಿರಾ ? ಅದರಂತೆಯೆ ಯಾರ ಜನ್ಮಕ್ಕೆ ಯಾರು ಕಾರಣರು? ಎಂಬುದನ್ನು ಎದೆತಟ್ಟಿ ಹೇಳಬಲ್ಲಿರಾ ? ಆತ್ಮಸಾಕ್ಷಿಯಾಗಿ ಶುದ್ಧ ಸಾತ್ತ್ವಿಕನಾಗಿರುವವನೇ ಉಚ್ಚಜಾತಿಯವನೆಂದು ತಿಳಿಯುವ ಸತ್ಯಯುಗ ಈಗ ಪ್ರಾರಂಭವಾಗಿದೆ. ಶ್ರೇಷ್ಠವೆನಿಸುವ ಜಾತಿ ಇದೇ ಆಗಲಿ, ಜನ್ಮದಿಂದ ಬರುವ ಜಾತಿಗೆ ಇನ್ನುಮುಂದೆ ಮಾನ್ಯತೆ ದೊರೆಯಲಾರದು— ಎಂದು ಪ್ರವಾದಿಗಳು ಹೇಳುತ್ತಾರೆ. ಅವರ ವಾಣಿಯಲ್ಲಿ ನಮಗೆ ಶ್ರದ್ಧೆಯಿದ್ದರೆ ನಾವು ಅದರಂತೆ ನಡೆಯಬೇಕು--ನಡೆಯಬೇಕು ಎಂಬ ಆಸೆಯನ್ನಾದರೂ ವಹಿಸಬೇಕು !

ವಿಶ್ವ— ದಿಂಗಬರ, ನಿಜ, ನೀನು ಹೇಳುವ ಮಾತು ಅಕ್ಷರಶಃ ನಿಜ (ಡಾ. ಗುಣಾಜಿ ಬರುವರು. ಅವರನ್ನು ನೋಡಿ) ನೋಡಿದಿರಾ ? ಮಾತನಾಡಿದಿರಾ ? ಮಾತನಾಡಿದಿರಾ ವಿಶ್ವಂಭರನೊಡನೆ ?

ಡಾ— ಮಾತನಾಡಿದೆ.

ವಿಶ್ವ— ನಿಮ್ಮ ಅಭಿಪ್ರಾಯವೇನಾಯಿತು, ಡಾಕ್ಟರ್ ?

ಡಾ— ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟುಬಿಡಿರಿ. ಅವನಿಂದ ಯಾವ ತಪ್ಪು ಕೆಲಸವೂ ಆಗಲಾರದು. ತಾನು ಪ್ರೀತಿಸುವ ಹುಡುಗಿಯನ್ನು ಮದುವೆಯಾಗಬೇಕೆನ್ನುತ್ತಾನಲ್ಲಾ... ಆಗಲಿ, ತಪ್ಪೇನಿಲ್ಲ! ನಾನು ಆ ಹುಡುಗಿಯನ್ನು ನೋಡಿದ್ದೇನೆ. ಆಕೆಯ ತಾಯಿಯೂ ನನಗೆ ಪರಿಚಯದವರು. ಬಹಳ ಸಚ್ಛೀಲರು, ಯೋಗ್ಯರು. ಮಿಕ್ಕ ವಿಷಯ ನನಗೆ ತಿಳಿಯದು. ಈ ಮದುವೆ ಬೇಡ ಎಂದರೆ ಮಾತ್ರ ಹುಡುಗನ ಮಿದುಳಿಗೆ ಹೆಚ್ಚಿನ ಅಪಾಯವಾದೀತು. ನೀವು ಕೂಡಲೇ ಇದಕ್ಕುಪಾಯವನ್ನು ಕೈಕೊಳ್ಳಬೇಕು. ಅವನಿಗೆ ಬೇಡಾದ ವಿಷಯ ತೆಗೆಯಬೇಡಿರಿ! ಬೇಡಾದ ಜನ ಅವನ ಹತ್ತಿರ ಇಡಬೇಡಿರಿ! ಈ ಔಷಧವನ್ನು ಅವನಿಗೆ ಕೊಡಿರಿ! ಅವನಿಗೆ ಸಾಕಷ್ಟು ನಿದ್ರೆಬೇಕಾಗಿದೆ. (ಔಷಧವನ್ನು ವಿಶ್ವನಾಥರಾಯರಿಗೆ ಕೊಡುತ್ತಾರೆ) ನಾನು ಬರುತ್ತೇನೆ. ನನಗೆ ಇಂದು ಕೂಡ ಅವಸರ. (ಹೋಗುವರು.)

ವಿಶ್ವ— ದಿಗಂಬರ, ನೀನು ವಿಶೂನ ಹತ್ತಿರ ಹೋಗು. ಅವನೊಬ್ಬನೇ ಇದ್ದಾನೆ. ನಾನು ಸದ್ಯಕ್ಕೆ ಅವನ ಹತ್ತಿರ ಬರುವದು ಬೇಡ !

ದಿಗ— ಆಗಲಿ ನಾನು ಅವನ ಹತ್ತಿರ ಇರುತ್ತೇನೆ. ದತ್ತ ಬಂದರೆ ಮೇಲೆ ಕಳಿಸಿಕೊಡಿರಿ !

ವಿಶ್ವ— ಒಳ್ಳೇದು ನಾನು ಕಳಿಸುತ್ತೇನೆ. (ದಿಗಂಬರ ಹೋಗುತ್ತಾನೆ. ವಿಶ್ವನಾಥರಾಯರು ಅತ್ತಿತ್ತ ಅಡ್ಡಾಡುತ್ತ ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುವರು.) ದಿಗಂಬರ ಕೇಳಿದ ಪ್ರಶ್ನೆ ಸರಿ. 'ಇಂಥ ಒಂದು ಜಾತಿಯಲ್ಲಿ ಶುದ್ಧ ರಕ್ತ ಇದೆ ಎಂದು ಹೇಳಬಲ್ಲಿರಾ ? ಯಾರ ಜನ್ಮಕ್ಕೆ ಯಾರು ಕಾರಣರು ಎಂಬುದನ್ನು ಹೇಳಬಲ್ಲಿರಾ ?' ಎರಡೂ ಪ್ರಶ್ನೆಗಳಿಗೆ ಹೌದು ಎಂದು ಉತ್ತರ ಕೊಡುವದು ಸಾಧ್ಯವಿಲ್ಲ. ನಂದಾ........ನನ್ನ ಸಾಕುಮಗಳು ಎಂದು ಜನರು ತಿಳಿದುಕೊಂಡಿದ್ದಾರೆ....ಅವಳ ಜನ್ಮಕ್ಕೆ ಯಾರು ಕಾರಣರು ? ಯಾರು...........ಯಾರು ಕಾರಣರು ? ನಂದಾ........ನಂದಾ....ನನ್ನ.... ಛೆ, ಛೆ.....................

ನಂದಾ— (ಪ್ರವೇಶಿಸಿ) ಕರೆದೆಯೇನಣ್ಣಾ ? ಅಟ್ಟದ ಮೇಲೆ ಹೋಗುತ್ತಿದ್ದೆ. ನಿನ್ನ ಕೂಗು ಕೇಳಿಸಿತು..............

ವಿಶ್ವ— ಇಲ್ಲ........ಹಂ....ಹಂ....ಕರೆದೆ ಹೌದು, ಹೌದು....ಇದು ನೋಡು, ನಂದಾ! ವಿಶ್ವಂಭರನ ಹತ್ತಿರ ಮದುವೆಯ ಮಾತನ್ನೆತ್ತಬೇಡ. ಅವನಿಗೆ ಸಂಪೂರ್ಣ ವಿಶ್ರಾಂತಿ ಅಗತ್ಯ ಎಂದು ಡಾಕ್ಟರರು ಹೇಳಿದ್ದಾರೆ.

ನಂದಾ— ಅದೆಲ್ಲ ಕತೆ ನಾನು ಈಗಾಗಲೆ ಕೇಳಿದ್ದೇನೆ. ಕಕ್ಕಿಗೂ ಗೊತ್ತಾಗಿದೆ. ಅಣ್ಣಾ, ಈಗ ವಿಶ್ವಂಭರನನ್ನು ಕರೆಯುವದಕ್ಕಾಗೇ ನಾನು ಹೋಟಿದ್ದೆ. ಕಕ್ಕಿ ಅವನೊಡನೆ ಮಾತನಾಡಬೇಕೆನ್ನುತ್ತಾಳೆ.

ವಿಶ್ವ— ಛೆ, ಛೆ, ಅವನೊಡನೆ ಈಕೆಯೇನು ಮಾತನಾಡುತ್ತಾಳೆ ? ನೀನು ಕರೆಯಬೇಡ, ಕರೆಯಬೇಡ! ಅವನ ಕೋಣೆಗೆ ಯಾರೂ ಹೋಗಲೇ ಕೂಡದು. ಅವನ ಮನಃಸ್ಥಿತಿ ಸರಿಯಾಗಿಲ್ಲ, ದೇಹಸ್ಥಿತಿ ಸರಿಯಾಗಿಲ್ಲ. ಬೇಡ, ಬೇಡ !

ನಂದಾ— ಹಾಗಾದರೆ ನೀನೇ ಕಕ್ಕಿಗೆ ತಿಳಿಹೇಳು!

ವಿಶ್ವ— ನಾನೇ ಬಂದೆ, ನಡೆ. ನೀನು ಮುಂದಾಗು. ಇದು ಇನ್ನೊಂದು ಸಂಕಟ ! (ಹೋಗುವರು.)

[ತೆರೆ.]

ಪ್ರವೇಶ ೨

[ಶೇಷಪ್ಪ ಬಿಷ್ಟಂಭಟ್ಟ ಬರುವರು.]

ಬಿ— ನಾ ಕಾಯೂಸ ಕಟ್ಟಿಧಾಂಗs ಆತ್ಯ ! ಇನ್ನ ಜನ್ಮ ಹೋದರೂ ಈ ಊರು ನೆನಸೊದಿಲ್ಲ ಅವರು ! ಊರು ಬಿಡೊ ತಯಾರಿ ನಡಸ್ಯಾರಂತ! ಮಂದಿಗೆ ಮುಖಾ ತೋರಿಸಲಿಕ್ಕೆ ಇಲ್ಲಧಾಂಗಾಗೇದ. ಮುಂಜಾನಂತೂ ಬಾಗಿಲಿಗೆ ಬರೆದದ್ದನ್ನ ನೋಡಲಿಕ್ಕೆ ಹೀಂಗ ಜನ ನೆರೆದಿತ್ತು !

ಶೇ— ಮತ್ತ ಪೇಪರದಾಗ ಇನ್ನೂ ಬರಲಿಲ್ಲಲ್ಲೊ ?

ಬಿ— ಇಷ್ಟು ಲಗೂ ಹ್ಯಾಂಗ ಬರಬೇಕು ? ಕಲಿಪುರುಷ ಏನೂ ಡೇಲೀ ಅಲ್ಲ! ವಾರಪತ್ರಿಕೆ! ಆದರೂ ಗಂಡ-ಹೆಂಡಿರ ನೋಟೀಸು, ಮ್ಯುನಸಿಪಾಲಿಟಿ ಜಾಹಿರಾತು ಇದ್ದಾಗs ಪ್ರಸಿದ್ಧಾಗೋದು ! ಇನ್ನ ಲಗೂ ಪ್ರಸಿದ್ಧಾಗಬೇಕು ಅಂದರ, ಗಂಡ-ಹೆಂಡತಿ ನಡುವೆ ಜಗಳಾ ಹಚ್ಚಬೇಕು ! ನೋಟೀಸುಕೊಡಸಬೇಕು !

ಶೇ— ನೀನs ಒಂದು ಸುಳ್ಳು ಹೆಸರು ಹಾಕಿ ಬರೆದುಕೊಡು, ಅದನ್ನ ಮಾಡಲಿಕ್ಕೂ ನಿನಗೇನು ಕಠಿಣಿಲ್ಲ !

ಬಿ— ಹೌದು. ಅದರ ಚಾರ್ಜು ಯಾರು ಕೊಡುವರು ? ನಾನು ಕೊಡೋ ಸುದ್ದಿಗೇ ಇನ್ನೆರಡು ರೂಪಾಯಿ ಹೆಚ್ಚು ಕೊಟ್ಟರ ಇವತ್ತs ಪ್ರಸಿದ್ಧ ಆಗತsದ! ರೂಪಾಯಿ ನಮ್ಮಕೈಗೆ ಕೊಟ್ಟೇ..................

ಶೇ— ಅದನ್ನೋಡೋಣಂತ. ಆ ಹೆಂಗಸರು ಇಷ್ಟಕ್ಕs ಊರು ಬಿಡ್ತಿದ್ದರ ಪೇಪರ ಸುದ್ದಿಯಿಂದೇನು ಅಗತ್ಯ ? ಅದಿರಲಿ, ನಿನ್ನ ವತಿಯಿಂದ ಕನ್ಯಾ ಯಾವ್ಯಾವು ಬಂದಾವ ?

ಬಿ— ದುರ್ಗಾದಾಸ ಪೋಲೀಸ ಇನ್ಸ್ಪೆಕ್ಟರು ಕನ್ಯಾ ಸಹಿತ ಬಂದs ಬಿಟ್ಟಾರ; ಉಳಿದವರು ಬರ್ತೀನಂತ ಬರೆದವರು ಇನ್ನೂ ಬರಲಿಲ್ಲ. ಮತ್ತ

ಆ ಶಿವದೀಕ್ಷಿತರದೇನಾತ್ಯು ? ಅವರು ಏಕಾಏಕಿ ಕನ್ಯಾ ಕರಕೊಂಡು ತಿರುಗಿ ಹೋಗೇಬಿಟ್ಟರಂತಲ್ಲ ?

ಶೇ— ಹೌದು. ರಾಯರು ಈಗ ಬಹಳ ಬಿಗಿಯೊಳಗಿದ್ದಾರ; ನಮಗ ಯಾವ ಸಂಗತಿ ತಿಳೀಧಾಂಗಾಗೇದ. ಒಳಗಿಂದೊಳಗs ಏನೊ ನಡಸ್ಯಾರ. ವಸುಧಾಬಾಯಿ ಮನಿಯೊಳಗ ಏನು ಮಾತು ನಡೀತು ಅಂಬೋದು ಡ್ರಾಯವರಗೂ ಗೊತ್ತಾಗಲಿಲ್ಲ! ಆಮ್ಯಾಲ ಶಿವದೀಕ್ಷಿತರು ಏಕಾಏಕಿ ಯಾಕ ಹೊರಟು ಹೋದ್ರು ಅಂಬೋದೂ ಗುಟ್ಟಾಗೇ ಉಳೀತು!

ಬಿ— ಕೈಬಿಟ್ಟು ಹೋದದ್ದೂ ಹೋಗವಲ್ಲವ್ಯಾಕ! ಈಗ ಕೈಯಾಗಿದ್ದ ಕನ್ಯಾ ಆದರೂ ಅವರ ಕಣ್ಣಿಗೆ ಹಾಕೊ ಕರಾಮತ್ತು ನಡಸೋಣಲ್ಲ? ಆ ದುರ್ಗಾದಾಸ ನಮ್ಮ ಮನಿಗೆ ಎಡತಾಕಿ ಎಡತಾಕಿ ಬೂಟು ಸವಸಲಿಕ್ಕೆ ಹತ್ಯಾನ! ನಾವು ಹೀಂಗ ತಡಾಮಾಡಿದರ ತಾನs ರಾಯರಿಗೆ ಭೆಟ್ಟಿ ಯಾಗ್ತೀನಿ ಅಂತ ಅಂದ! ಅದಕ್ಕೇನು ಮಾಡೋಣಂತಿ ? ರಾಯರಿಗೆ ಕೇಳಿ ಬಿಡಲ್ಲ....ಯಾವಾಗ ಕನ್ಯಾ ತೋರಿಸೋಣು ಅಂತ!

ಶೇ— ಈಗ ಅವರೆದುರಿಗೆ ಹೋಗಲಿಕ್ಕೇ ಹೆದರಿಕಿ ಬರ್ತsದ! ಅವ ರಾಗೇ ಈ ಮಾತು ತಗೀದ ಹೊರ್ತು............

ಬಿ— ಅಲ್ಲೊ, ಅವರಿಗೆ ಹ್ಯಾಂಗ ಗೊತ್ತಾಗಬೇಕು, ಕನ್ಯಾ ಕರಕೊಂಡು ಬಂದಾರ ಅಂತ ? ಬಾಡಿಗೀ ವಸೂಲಿ ಕೆಲಸದ ನೆವಾಮಾಡಿ ಕಾಣಲೇನು ಅವರ್ನ ? ಅಥವಾ ಈ ವಸುಧಾಬಾಯಿ ಊರುಬಿಟ್ಟು ಹೋಗ್ತಾರ ಅಂಬೊ ಸುದ್ದಿ ಹೇಳೊ ನೆವಾ ಮಾಡಿ ಈ ಪ್ರಸ್ತಾಪ ತಗಿತೀನಿ ?

ಶೇ— ಬ್ಯಾಡ, ಬ್ಯಾಡ, ಇಲ್ಲದ್ದೊಂದು ವೈಮಾಲ ಹಾಕ್ಕೊಳ್ಳ ಬ್ಯಾಡ. ಈಗ ಈ ಮಾತನ್ನs ತಗಿಯೋದು ಬ್ಯಾಡ. ರಾಯರು ಬಹಾಳ ಚಿಂತಿಗೆ ಗುರಿಯಾಗ್ಯಾರ. ನಿನ್ನಿನಿಂದ ಆ ಹುಡುಗನೂ ಕೋಣೀ ಬಾಗಿಲ ಹಾಕಿಕೊಂಡು ಕೂತುಬಿಟ್ಟಾನ. ಆ ಜಡ್ಡಿನ ತಾಯಿಯ ಜೀವಾನೂ ಮ್ಯಾಲs ತೆಳಗs ಆಗಲಿಕ್ಕೆ ಹತ್ತೇದ! ಇದೆಲ್ಲ ತುಸು ನಿಧಾನಕ್ಕ ಬರೋ ತನಕಾ ನಾವು ಕಾಯಲೇ ಬೇಕು!

ಜಿ— ಹಾಂಗs ಮಾಡು. ದುರ್ಗಾದಾಸರ ಮೂಗಿಗೆ ಇನ್ನೆರಡು ದಿವಸ ತುಪ್ಪಾ ಹಚ್ಚಿಡ್ತೀನಿ. ಅವರು ಬಂದಾಗಿನಿಂದ ನಮ್ಮದೂ ಚೈನೀ ನಡದsದ ! ದಿನಾ ಸಾಯಂಕಾಲ 'ಜೈ-ಹಿಂದ್' ಕ್ಯಾಫೇದಾಗ ಎರಡೆರಡು ಬಾಟ್ಲಿ....... ....

ಶೀ— ನಡೀಲಿ, ನಡೀಲಿ. ನಿನ್ನ ಚೈನೀ ನಡದಷ್ಟs ಬಂತು ! (ದೂರದಲ್ಲಿ ವಸುಧಾಬಾಯಿಯವರ ಆಳು ಗೋಪಾಳನನ್ನು ನೋಡಿ) ಅಗೊ, ಅಲ್ಲಿ ಗೋಪಾಳ್ಯಾ ಬರ್ತಾನಲ್ಲೊ ! ನಡಿ, ನಾವು ಇಲ್ಲೆ ನಿಲ್ಲೋದು ಬ್ಯಾಡಾ.

ಬಿ— ಬಹಾಳ ಮಾಡಿ ಸ್ಟೇಶನ್ನಕ್ಕ ಹೋಗಲಿಕ್ಕೆ ಅವರಿಗೆ ಟಾಂಗಾ ಬೇಕಾಗಿದ್ದೀತು. ಅದಕ್ಕs ಬರ್ತಿದ್ದಾನು. ನಡಿ, ನಾವು ಹೋಗೋಣ !

(ಹೋಗುವರು)

[ತೆರೆ ಏಳುವದು.]

ಪ್ರವೇಶ ೩

[ವಸುಧಾಬಾಯಿಯವರ ಮನೆ. ವಸುಧಾಬಾಯಿ ಮತ್ತು ಸುಧಾ ಪ್ರಯಾಣದ ಸಿದ್ಧತೆಯಲ್ಲಿ ತೊಡಗಿದ್ದಾರೆ.]

ಸುಧಾ— (ಬ್ಯಾಗಿನಲ್ಲಿ ಅರಿವೆಗಳನ್ನು ಮಡಿಕೆ ಹಾಕಿ ಇಡುತ್ತ) ವಿಶ್ವನಾಥ ರಾಯರು ಇಷ್ಟು ದುಷ್ಟ ಮನಸ್ಸಿನವರಿರಬಹುದು ಎಂದು ನನಗನಿಸಿರಲಿಲ್ಲ. ರಾತ್ರಿ ಮನೆಯ ಮೇಲೆ ಕಲ್ಲೊಗಿಸುವದೇನು? ಅವಾಚ್ಯ ಶಬ್ದಗಳಲ್ಲಿ ಬಾಗಿಲಿಗೆ ಬರೆದು ಹಚ್ಚುವದೇನು? ಇದು ತೀರ ಕೆಳತರಗತಿಯವರು ಮಾಡುವ ಹೇಸಿ ಕೆಲಸ. ಹೆಂಗಸರು, ಅಸಹಾಯರು ಎಂದು ಈ ರೀತಿಯಲ್ಲಿ ಸೇಡು ತೀರಿಸಿಕೊಳ್ಳುವದೇ? ನೀವು ಈ ಊರಲ್ಲಿರಬೇಡಿ ಎಂದಿದ್ದರೆ ನಾವು ಹೋಗುತ್ತಿದ್ದಿಲ್ಲವೆ?

ವಸು— (ಹೋಲ್ಡಾಲ್ ಕಟ್ಟುತ್ತ) ಸುಧಾ, ಸೇಡಿನ ಭಾವನೆಯೇ ಅಂಥದು. ಎಂಥ ಪಂಡಿತನನ್ನೂ ಅದು ಪಶುತ್ವಕ್ಕಿಳಿಸುತ್ತದೆ.

ಸುಧಾ— ವಿಶ್ವಂಭರರಾದರೂ ಇದನ್ನು ತಡೆಯಬಹುದಾಗಿತ್ತು.

ವಸು— ಅವರಿಗೆ ಗೊತ್ತಿದೆಯೊ ಇಲ್ಲವೊ? ಇದು ಅವರಿಗೆ ತಿಳಿಯದೇನೇ ಆಗಿದ್ದರೆ?

ಸುಧಾ— ಹಾಗೂ ಇರಬಹುದು. ಆದರೂ ತೀರ ಪೋಕರಿಗಳು ಮಾಡಬಹುದಾದ ಅಸಹ್ಯಕೃತಿ! ಇಂಥ ಅಪಚಾರಕ್ಕೆ ಅವರು ಹ್ಯಾಗೆ ಮನಸ್ಸು ಮಾಡಿದರೂ ಅಂತ ನನಗ ಪುನಃ ಪುನಃ ಆಶ್ಚರ್ಯ ಅನಸ್ತದ! ವಿಶ್ವಂಭರರನ್ನು ಮದುವೆಯಾಗುವದಿಲ್ಲ—ಅಂತ ನಾನು ವಚನಕೊಟ್ಟದ್ದು ಅವರಿಗೆ ಸಾಕಾಗಲಿಲ್ಲವೇನೊ! ನಮ್ಮನ್ನು ಉಪೇಕ್ಷೆ ಮಾಡಿ ಬಿಟ್ಟಿದ್ದರ, ನಮ್ಮಷ್ಟಕ್ಕೆ ನಾವು ಅಲಿಪ್ತರಾಗಿ ಇದ್ದುಬಿಡುತ್ತಿದ್ದೆವಲ್ಲ!

ವಸು— ಸುಧಾ, ನಾವು ಈ ಊರಲ್ಲಿರುವದು ಕೂಡ ಅವರ ಪ್ರತಿಷ್ಠೆಗೆ ಹಾನಿಕರ ಎಂದು ಅವರ ಭಾವನೆಯಾಗಿದ್ದೀತು, ಅಂತೇ ಈ ಉಪಾಯ ಕೈಕೊಂಡಿದ್ದಾರೆ.

ಸುಧಾ— ಇದು ಉಪಾಯವಲ್ಲ, ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ !

ವಸು— ಒಟ್ಟು ನಮ್ಮ ಸತ್ತ್ವಪರೀಕ್ಷೆಯ ಕಾಲ !

ಸುಧಾ— ಇಷ್ಟೆಲ್ಲ ನಡೆದರೂ ವಿಶ್ವಂಭರರು ಒಮ್ಮೆಯಾದರೂ ಬಂದು ಹೋಗಲಿಲ್ಲ !

ವಸು— ಅವರು ಬರುವದು ಬೇಡ ಎಂದು ನಾನು ವಿಶ್ವನಾಥರಾಯರಿಗೆ ಹೇಳಿದ್ದೆ.

ಸುಧಾ— ನಾನು ಕೂಡ ಅವರಿಗೆ ಚುಚ್ಚುಮಾತುಗಳನ್ನಾಡಿದೆ. ಅಕ್ಕಾ, ನಾವು ಈ ಊರು ಬಿಡುವ ಮೊದಲು ಅವರ ಭೆಟ್ಟಿಯಾಗಿದ್ದರೆ ಎಷ್ಟು ಚೆನ್ನಾಗಿತ್ತು ! ಅವರ ಫೋಟೊ ಒಂದು ನನಗೆ ಬೇಕಾಗಿತ್ತು.

ವಸು— ಸುಧಾ, ಇನ್ನು ಅವರ ಸ್ಮೃತಿಯನ್ನು ಕೂಡ ನಿನ್ನ ಚಿತ್ತದಲ್ಲಿರಿಸಲು ನಿನಗೆ ಅಧಿಕಾರವಿಲ್ಲ. ಅವರು ಬೇರೆ ಕನ್ಯೆಯನ್ನು ಮದುವೆಯಾದ ಮೇಲೆ ಗುಪ್ತವಾಗಿ ಅವರನ್ನು ಬಯಸುವದು ಕೂಡ ಪಾಪವಾದೀತು. ಇದರಿಂದ ನಿನ್ನ ಚಿತ್ತಸ್ಥೈರ್ಯ ಉಳಿಯಲಾರದು. (ಸುಧಾ ಕೆಳಗೆ ಮುಖ ಹಾಕಿಕೊಂಡು, ಚಲಿಸದೆ ಕೂಡುವಳು.) ಯಾಕೆ ಸುಧಾ, ನಾವು ಹೋಗುತ್ತಿರುವೆವೆಂದು ನಿನ್ನ ಮನಸ್ಸು ಕಾತರಗೊಂಡಿದೆಯೇನು? ಮುಂಬಯಿಯಲ್ಲಿ ನಿನಗೆ ಒಳ್ಳೇ ಸಹವಾಸ, ಅಭ್ಯಾಸಕ್ಕೆ ಸೌಕರ್ಯ ಎಲ್ಲವೂ ದೊರೆಯುವವು. ಇಲ್ಲಿದ್ದದ್ದೊಂದು ಹೋದ ಜನ್ಮದ ಕಥೆ ಎಂದು ನೀನು ಮರೆತು ಬಿಡಬೇಕು.

[ಕಾಲ್‌ಬೆಲ್ ಸಪ್ಪಳವಾಗುತ್ತದೆ.]

ಸುಧಾ— ಯಾರಿರಬಹುದು ? ಅಕ್ಕಾ, ನೀನೇ ಬಾಗಿಲು ತೆರೆ; ನನಗೆ ಅಂಜಿಕೆಯಾಗುತ್ತದೆ (ಇನ್ನೊಮ್ಮೆ ಗಂಟೆಯ ಸಪ್ಪಳವಾಗುತ್ತದೆ)

ವಸು— ಈ ಹೊತ್ತಿನಲ್ಲಿ ಅಂಜಿಕೆಯಾತರದು ? (ಎದ್ದು ಹೋಗಿ ಬಾಗಿಲು ತೆರೆಯುವಳು. ವಿಶ್ವನಾಥರಾಯರು ಬರುವರು. ವಸುಂಧರಾಬಾಯಿ ಅವರನ್ನು ನಮಸ್ಕಾರಪೂರ್ವಕ ಬರಮಾಡಿಕೊಳ್ಳುವರು. ಸುಧಾ ಎದ್ದು ದೂರ ಸರಿದು ನಿಲ್ಲುವಳು. ವಿಶ್ವನಾಥರಾಯರು ದೂರದಲ್ಲಿ ಮೌನವಾಗಿ ನಿಂತಿರುವದನ್ನು ನೋಡಿ) ವಿಶ್ವನಾಥರಾಯರೆ, ಕುರ್ಚಿಗಳನ್ನು ಒಳಗೆ ಇರಿಸಿದ್ದೇವೆ. ತಮಗೆ

ಕೊಡಲು ಏನೂ ಇಲ್ಲ. ಕ್ಷಮಿಸಬೇಕು. ವಿಶ್ವನಾಥರಾಯರೆ, ನಾವು ಊರಿಗೆ ಹೊರಡುವ ಸಿದ್ಧತೆಯಲ್ಲಿದ್ದೇವೆ.

ವಿಶ್ವ— ಯಾವ ಊರಿಗೆ ಹೋಗುತ್ತೀರಿ ?

ಸುಧಾ— ಯಾಕೆ ? ಅಲ್ಲಿಯೂ ನಮಗೆ ತೊಂದರೆ ಕೊಡಬೇಕೆಂಬ ಉದ್ದೇಶವೇನು ? ಈಗ ನಮ್ಮನ್ನು ಬವಣಿಗೀಡು ಮಾಡಿದ್ದು ಸಾಕಾಗಲಿಲ್ಲವೇನೊ !

ವಿಶ್ವ— ಸುಧಾ, ನೀವು ಊರಿಗೆ ಹೋಗಬೇಡಿ—ಎಂದು ಹೇಳಲು ಬಂದಿದ್ದೇನೆ.

ಸುಧಾ— ಅಂದರೆ ನಮ್ಮನ್ನು ಇಲ್ಲಿಯೇ ಇರಿಸಿಕೊಂಡು ಪರಿಪರಿಯಿಂದ ಹಿಂಸಿಸಬೇಕೆಂದೊ ನಿಮ್ಮ ಉದ್ದೇಶ ? ಮನೆಯ ಮೇಲೆ ಕಲ್ಲೊಗೆಸಿದಿರಿ. ಬಾಗಿಲಿಗೆ ಅವಾಚ್ಯ, ಅಶ್ಲೀಲವಾದದ್ದನ್ನು ಬರೆದು ಹಚ್ಚಿಸಿದಿರಿ ! ಇದಕ್ಕೂ ಹೆಚ್ಚಿನ ಮರ್ಯಾದೆಗೇಡು ಇನ್ನೇನಾಗಬೇಕು ? ಇದರಿಂದ ನಿಮಗೆ ತೃಪ್ತಿಯಾಗಲಿಲ್ಲವೆ ?

ವಿಶ್ವ— (ಆಶ್ಚರ್ಯದೊಡನೆ) ಎಲಾ ! ಇದೇನು ಕೇಳುತ್ತಾ ಇದ್ದೇನೆ ? ಯಾರು ? ಯಾರು ಮಾಡಿದ್ದಾರೆ ಇದನ್ನು ? ಛೆ, ಛೆ, ಸುಧಾ, ವಸುಧಾಬಾಯಿ, ಇಂಥ ಅಧಮಕೃತಿಗೆ ನಾನೆಂದೂ ಮನಸ್ಸು ಮಾಡುವವನಲ್ಲ. ಯಾರೋ ಊರೊಳಗಿನ ಪುಂಡರು ಪೋಕರಿಗಳು ಇದನ್ನು ಮಾಡಿರಬೇಕು. ಈ ಸಂದರ್ಭದಲ್ಲಿ ನನ್ನ ಮೇಲೆ ನಿಮಗೆ ಸಂದೇಹ ಉಂಟಾಗುವದು ಸಹಜ. ಇಲ್ಲ, ಇಲ್ಲ, ನಾನು ಇದನ್ನು ಮಾಡಿಸಿದವನಲ್ಲ.... ನಾನು ಮಾಡಿಸಿದವನಲ್ಲ ! ಇಂಥ ಮಾತನ್ನು ಕಿವಿಯಿಂದ ಕೇಳುವದಕ್ಕೂ ಹೇಸಿಕೆಯೆನಿಸುತ್ತದೆ. ವಸುಧಾಬಾಯಿ, ಸುಧಾ, ಈಗೇನಾಯಿತೊ ಅದನ್ನೆಲ್ಲಾ ಮರೆತು ಬಿಡಿರಿ; ಮತ್ತೆ ನನ್ನದೊಂದು ಬೇಡಿಕೆ ಇದೆ, ಅದನ್ನು ದಯಮಾಡಿ ಮನ್ನಿಸಿರಿ !

ವಸು— ವಿಶ್ವನಾಥರಾಯರೆ, ನಮ್ಮಿಂದ ಇನ್ನೇನಾಗಬೇಕೊ ಹೇಳಿರಿ ! ಸುಧೆಯಿಂದ ವಚನಬೇಕು ಅಂದಿರಿ; ಆಕೆ ವಚನಕೊಟ್ಟಳು. ನಾವು

ಈ ಊರನ್ನು ಬಿಟ್ಟುಹೋದರೆ ನಿಮಗೆ ಅನುಕೂಲ ಎಂದು ತೋರಿತು; ಈಗ ಹೊರಟು ನಿಂತಿದ್ದೇವೆ. ನಿಮ್ಮ ಮಗನೊಡನೆ ನೀವು ಸರಾಗವಾಗಿರಲು ಇನ್ನೇನಾದರೂ ಮಾಡುವದಗತ್ಯವಿದ್ದರೆ ಅದನ್ನೂ ಮಾಡುತ್ತೇವೆ. ಒಟ್ಟಿನಲ್ಲಿ ವಿಶ್ವಂಭರರು ನಿಮ್ಮ ಅಪೇಕ್ಷೆಯಂತೆ ಲಗ್ನವಾಗಿ, ಅವರಿಂದ ನಿಮ್ಮ ಬಯಕೆ ಪೂರೈಸಲಿ—ಎಂಬುದೇ ನಮ್ಮ ಉದ್ದೇಶ.

ವಿಶ್ವ— ಅದಾಗಬೇಕಾದರೆ ನೀವು ಇಲ್ಲಿರುವದು ಅತ್ಯಗತ್ಯ. ಇಷ್ಟೇ ಅಲ್ಲ, ನಮ್ಮ ಮನೆಗೆ ಬರುವದು ಅಗತ್ಯ. ಅದಕ್ಕಾಗಿಯೇ ನಾನು ನಿಮ್ಮನ್ನು ಕರೆಯಲು ಬಂದಿದ್ದೇನೆ. ವಸುಧಾಬಾಯಿ, ಸುಧಾ, ಇದು ಮೋಸದ ಮಾತಲ್ಲ. ಅಂತಃಕರಣಪೂರ್ವಕವಾಗಿ ಕೇಳಿಕೊಳ್ಳುತ್ತಾ ಇದ್ದೇನೆ— ನೀವು ನಮ್ಮ ಮನೆಗೆ ಬರಲೇಬೇಕು.

ವಸು— ವಿಶ್ವನಾಥರಾಯರೆ, ನಮ್ಮನ್ನು ಹೆಚ್ಚಿಚ್ಚು ತೊಂದರೆಗೀಡು ಮಾಡಬೇಡಿರಿ. ನಾವು ನಿಮ್ಮ ಮನೆಗೆ ಏನೆಂದು ಬರಬೇಕು ? ಯಾವ ಕಾರಣಕ್ಕಾಗಿ ಬರಬೇಕು ? ಇದರಿಂದ ನಿಮಗಾಗುವ ಲಾಭವೇನು ? ನಿಮ್ಮ ಉದ್ದೇಶ ನನಗೆ ಅರ್ಥವಾಗದಂತಿದೆ !

ವಿಶ್ವ— ವಸುಧಾಬಾಯಿ, ನೀವು ಯಾವ ಜಾತಿಯವರೇ ಇರ್ರಿ, ಯಾವ ಕುಲದವರೇ ಇರ್ರಿ, ವಿಶ್ವಂಭರನು ಸುಧೆಯನ್ನು ಮದುವೆಯಾಗ ಬೇಕು ಎಂದು ಭಗವಂತನ ಸಂಕಲ್ಪವೇ ಇದೆಯೆಂದು ಕಾಣುತ್ತದೆ. ಈ ಸಂಬಂಧಕ್ಕೆ ನಾನು ಒಪ್ಪಿದ್ದೇನೆ, ಹೆಂಡತಿ ಒಪ್ಪಿದ್ದಾಳೆ. ಯಾವ ಸಂಶಯ ವನ್ನೂ ಮನಸ್ಸಿನಲ್ಲಿ ತರಬೇಡಿರಿ. ಸೊಸೆಯನ್ನು ಕಣ್ಮುಟ್ಟನೋಡಿ ಆಶೀ ರ್ವದಿಸಬೇಕು ಎಂಬ ಆಕೆಯ ಅಪೇಕ್ಷೆಯನ್ನು ನೀವು ನಡಸಿಕೊಡಬೇಕು. ನಾವು ಈಗ ಹೊರಟೇ ಬಿಡೋಣ.

ವಸು— ಇದೇನೊ—ನಮಗೆ ಯಾವುದೂ ತಿಳಿಯದಂತಾಗಿದೆ. ವಿಶ್ವನಾಥರಾಯರೆ, ನಿಮಗೆ ಕೈಜೋಡಿಸಿ ಬೇಡಿಕೊಳ್ಳುತ್ತೇನೆ. ನಮ್ಮನ್ನು ಏನಾದರೊಂದು ಅಜ್ಞಾತ ಸಂಕಟಕ್ಕೆ ಗುರಿಮಾಡಿಬೇಡಿರಿ! ನಮಗೆ ಅಂಜಿಕೆ ಯಾಗುತ್ತದೆ.

ವಿಶ್ವ— ಅಮೃತೇಶ್ವರನ ಆಣೆಮಾಡಿ ಹೇಳುತ್ತೇನೆ—ಇದರಲ್ಲಿ ರವಷ್ಟೂ ಮೋಸವಿಲ್ಲ. ನಾವು ಸುಧಾ-ವಿಶ್ವಂಭರರ ಮದುವೆಗೆ ಮನವಾರೆ ಒಪ್ಪಿದ್ದೇವೆ. ನಿಮಗೆ ನಂಬುಗೆ ಉಂಟಾಗಬೇಕಾದರೆ ಇದಕ್ಕೂ ಬೇರೆ ಯಾವ ಶಬ್ದಗಳಿಂದ ಹೇಳಲಿ ? ಎಲ್ಲವೂ ಮುಗಿದು ಹೋಗಿದೆ. ನಾನಿನ್ನು ಬೇಗ ಹೋಗಬೇಕು. ನಡೆಯಿರಿ, ಹೋಗೋಣ !

ವಸು— ನೀವು ಹೇಳುವದು ಅಕ್ಷರಶಃ ನಿಜವೆ ?

ವಿಶ್ವ— ಅಕ್ಷರಶಃ ನಿಜ. ತ್ರಿವಾರ ನಿಜ !

ಸುಧಾ— ವಿಶ್ವಂಭರರಾದರೂ ಈಗ ಬಂದಿದ್ದರೆ ಒಳಿತಾಗಿತ್ತು........

(ಅಷ್ಟರಲ್ಲಿ ವಿಶ್ವಂಭರ ಬಂದೇ ಬಿಡುವನು.)

ವಿಶ್ವ— (ಮಗನಿಗೆ) ಇದೇನು ? ನೀನೇಕೆ ಬಂದೆ ? ನಾವೇ ಬಂದು ಬಿಡುತಿದ್ದೆವಲ್ಲ ! ಆಯಿತು. ನೀನು ಬಂದದ್ದೂ ಒಳ್ಳೆದೇ ಆಯಿತು.

ವಿಶು— ನಾನು ಬರುವ ಅಗತ್ಯವಿರಲಿಲ್ಲ. ಆದರೆ ನಾನು ಬರದೆ ಸುಧಾ ಬರಲಿಕ್ಕಿಲ್ಲ ಎಂದು ಬಂದೆ. (ಸುಧಾ ಪ್ರೇಮಾರ್ದ್ರ ದೃಷ್ಟಿಯಿಂದ ವಿಶ್ವಂಭರನನ್ನು ನೋಡುವಳು)

ವಸು— ವಿಶ್ವನಾಥರಾಯರೆ, ನಾವು ಭಗವಂತನನ್ನು ನಂಬಿದ್ದೇವೆ. ನಮ್ಮಂಥ ಅಬಲೆಯರಿಗೆ ಅವನೇ ಆಧಾರವಲ್ಲವೆ ? ಅವನಲ್ಲಿ ಶ್ರದ್ಧೆ ಯಿಟ್ಟು ನಿಮ್ಮನ್ನನುಸರಿಸಿ ಬರುತ್ತೇವೆ. ವಿಶ್ವನಾಥರಾಯರೆ, ಇನ್ನೊಂದು ಮಾತು: ಎಲ್ಲ ನಮ್ಮ ಅಪೂರ್ಣತೆಯನ್ನೂ ಅಂಗೀಕರಿಸಿ, ನಮ್ಮನ್ನು ನಿಮ್ಮವರನ್ನಾಗಿ ಮಾಡಿಕೊಂಡಿರಿ. ಈ ಸಂದರ್ಭದಲ್ಲಿ, ನನ್ನ ಪ್ರೇಮದ ರಹಸ್ಯವನ್ನು ನಾನು ಇದು ವರೆಗೆ ಯಾರಿಗೂ ಹೇಳಿರದಿದ್ದರೂ, ಇಂದು ಎಲ್ಲರ ಎದುರು—ಅದನ್ನು ಹೇಳುವ ಪ್ರೇರಣೆಯಾಗುತ್ತಿದೆ. ವಿಶ್ವನಾಥ ರಾಯರೆ, ಸುಧಾ ನನ್ನ ಪಾಪದ ಫಲವಲ್ಲ ! ಯಾರು ನನ್ನ ಪತಿಯಾಗ ಬೇಕಿತ್ತೊ ಅವರೇ ಅವಳ ಜನ್ಮಕ್ಕೆ ಕಾರಣರು ! ಅವರು ಒಂದು ದುರ್ಘಟನೆ ಯಲ್ಲಿ ಸಿಕ್ಕು ಮದುವೆಯ ಪೂರ್ವದಲ್ಲಿ ಮರಣ ಹೊಂದಿದರು. ಈ ಕಾರಣ ದಿಂದ ನಾನು ನನ್ನ ಸತೀತ್ವಕ್ಕೆ ಎರವಾಗಬೇಕಾಯಿತು. ಲೌಕಿಕದಲ್ಲಿ

ನಾನು ಪತಿಯಿಲ್ಲದ ಪತಿತೆ ಎಂದು ಕರೆಯಿಸಿಕೊಂಡರೂ, ನನ್ನಂತರಾತ್ಮದಲ್ಲಿ ಅವರನ್ನೇ ನನ್ನ ಪತಿಯಾಗಿ ಭಾವಿಸಿ ಏಕನಿಷ್ಠೆಯ ಭಾವಸತಿಯಾಗಿ ನಾನು ಬಾಳಿದ್ದೇನೆ. ರಾಯರೆ, ನನ್ನ ಜಾತಿಯದಾದರೂ ಹೀಗೆಯೇ ಆಗಿದೆ. ನನ್ನ ತಂದೆ ಉಚ್ಚವರ್ಣದವರು. ಆದರೆ ಸಮಾಜ ಸುಧಾರಣೆಯ ಆದರ್ಶಕ್ಕಾಗಿ ಭಿನ್ನ ಜಾತಿಯಲ್ಲಿ ವಿವಾಹವನ್ನು ಮಾಡಿಕೊಂಡರು. ನಾನು ಅವರ ಏಕಮೇವಪುತ್ರಿ. ಇದು ಸುಧೆಯ ಹುಟ್ಟು, ನನ್ನ ಕುಲ—ಇದರ ಕತೆ !

ವಿಶ್ವ— ವಸುಧಾಬಾಯಿ, ಇನ್ನು ನೀವು ಪತಿತರು ಎಂದು ಹೇಳುವವರ ಬಾಯಲ್ಲಿ ಹುಳಬಿದ್ದಾವು. ನನ್ನ ಎಲ್ಲ ಸಂಶಯಗಳೂ ಇಂದಿಗೆ ನಿವಾರಣೆಯಾದವು. ನಡೆಯಿರಿ. ನಾವು ಬೇಗ ಹೊರಡಲೇಬೇಕು. (ಕಟ್ಟಿದ ಸಾಮಾನುಗಳನ್ನು ದ್ದೇಶಿಸಿ) ಇವೆಲ್ಲ ಹಾಗೇ ಇರಲಿ. ಆ ಮೇಲೆ ನೀವು ಮತ್ತೆ ಬರುವಿರಂತೆ.

ವಿಶು— ನಡೆ ಸುಧಾ, ಅಕ್ಕಾ ನಡೆಯಿರಿ ! ಮತ್ತು ನಿಮಗಾದ ತೊಂದರೆಯ ಬಗ್ಗೆ ನನ್ನನ್ನು ಕ್ಷಮಿಸಬೇಕು. ನಾವು ಇನ್ನು ಬೇಗ ಹೋಗಲೇಬೇಕು. ತಾಯಿ ಸುಧೆಯನ್ನು ನೋಡಲು ಅದೆಷ್ಟು ಆತುರಳಾಗಿದ್ದಾಳೆ !

(ಅಷ್ಟರಲ್ಲಿ ರಾಮು ಗಾಬರಿಗಾಬರಿಯಿಂದ ಅಳುಮುಖದಿಂದ ಪ್ರವೇಶಿಸುವನು.)

ರಾಮು— ಧನೇರ (ಅಳುವ ದನಿಯಲ್ಲಿ) ಅವ್ವಾ ಅವರು..........

[ಗಟ್ಟಿಯಾಗಿ ಅಳತೊಡಗುವನು. ಎಲ್ಲರೂ ಗಾಬರಿಯಿಂದ ಅವನ ಸುತ್ತಲು ನೆರೆಯುವರು.]

ವಿಶ್ವ— ಯಾಕೊ ? ಏನಾಯಿತು ? ಏನಾಯಿತು ....

ವಿಶು— ಏನಾಯಿತೊ ಅಕ್ಕಗೆ ? ಬೇಗ ಹೇಳು.

ರಾಮು— ಅವ್ವಾ ಅವರು ...ಅವ್ವಾ ಅವರು....ನಮ್ಮನ್ನ ಬಿಟ್ಟ ... ಶಿವನ್ಹಂತ್ಯಾಕ ಹೋದರ್ರಿ....ನಮ್ಮನ್ನ ಪರದೇಶಿ....ಮಾಡಿದರ್ರಿ ... ...

[ಎನ್ನುವಾಗ ತೆರೆ]

ಸಮಾಪ್ತ

ಹಾಡು (ಪುಟ ೧೮)

ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ
ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಬಿಸಿ ನಗೆಯಲಿ ಮೀಸುತಿದೆ.

ಭೂರಂಗಕೆ ಅಭಿಸಾರಕೆ ಕರೆಯುತ
ತಿಂಗಳು ತಿಂಗಳು ನವೆಯುತಿದೆ
ತುಂಬುತ ತುಳುಕುತ ತೀರುತ ತನ್ನೊಳು
ತಾನೇ ಸವಿಯನು ಸವಿಯುತಿದೆ.

ಭೂವನ ಕುಸುಮಿಸಿ ಪುಲಕಿಸಿ ಮರಳಿಸಿ
ಕೋಟಿ ಕೋಟಿ ಸಲ ಹೊಸಯಿಸಿತು.
ಮಿತ್ರನ ಮೈತ್ರಿಯ ಒಸಗೆ ಮಸಗದಿದೆ
ಮರುಕದ ಧಾರೆಯು ಮಸೆಯಿಸಿತು.

ಅಕ್ಷಿನಿಮೀಲನ ಮಾಡದೆ ನಕ್ಷ-
ತ್ರದ ಗಣ ಗಗನದಿ ಹಾರದಿದೆ
ಬಿದಿಗೆಯ ಬಿಂಬಾಧರದಲಿ ಇಂದಿಗು
ಮಿಲನದ ಚಿನ್ಹವು ತೋರದಿದೆ.

— ಅಂಬಿಕಾತನಯದತ್ತ

ಕವನ (ಪುಟ ೧೯)

ನನ್ನ ಹರಣ
ನಿನಗೆ ಶರಣ
ಸಕಲ ಕಾರ್ಯ ಕಾರಣಾ
ನಿನ್ನ ಮನನ-
ದಿಂದ ತನನ-
ವೆನುತಿದೆ ತನು ಪಾವನಾ. ೧

ಸುಖದ ಮಿಷವು
ದುಃಖ ವಿಷವು
ಹಿಗ್ಗಿ ಪ್ರಾಣ ಪೂರಣಾ
ಪಂಚ ಕರಣ-
ಗಳೀ ಗಡಣ
ಕಟ್ಟಿತು ಗುಡಿ ತೋರಣಾ ೨

ನಿನ್ನ ಚರಣ
ಸುಸಂತರಣ
ಜಗದ್ಭರಿತ ಭಾವನಾ
ಹಾಸ್ಯ ಕಿರಣ
ತದನುಸರಣ
ತದಿತರ ಪಥ ಕಾಣೆ ನಾ ೩

ಹರುಷ ರಸವೆ
ಕರುಣದಸುವೆ
ಜೀವಧರ್ಮ ಧಾರಣಾ,
ರಸವೆ ಜನನ
ವಿರಸ ಮರಣ
ಸಮರಸವೇ ಜೀವನ ೪

— ಅಂಬಿಕಾತನಯದತ್ತ

ಕವನ (ಪುಟ ೨೯)

ರಾಗ—ದೇವಗಾಂಧಾರ — ತ್ರಿತಾಳ

ಪ್ರೇಮಿಯಾ ಭಾವನಾ ದೇವಿಯು
ಸೇವಾರತನಾಗಿಹ || ಪಲ್ಲ ||

ಸುಮನಮೋಹನ ಮಾಲಿಯಾ- ನೀವಾ
ಬೇಡುವಾ ತಾ ಶ್ರೀಯಾ ||
ಗಣಿಸನವನು ಧನ ಮಾನವ |
ಸಂಭ್ರಾಂತಾ ಪ್ರೇಮುದೊಳೇ | ಧರೆಯಾ
ಜನಗಣವನು ಗಣಿಸನೋ | ಮೋಹಾತ್ಮನಲಿ ॥

ಹಾಡು (ಪುಟ ೪೧)

ರಾಗ—ಕಾಫೀ — ತ್ರಿತಾಳ

ಸಾಗರಾ ತೋರಿಸೈ ತೀರಾ !—
ಮರೆಯಗೊಳಿಸದಿರು ಆ ಧ್ರುವತಾರಾ ! ॥ ಪಲ್ಲ ॥

ತೆರೆಯು ಸಾಲುಗಳ ತುಡಿತಕೆ ಬಳಲಿದೆ,
ತಿರುಗು-ಸುಳಿಗಳಲಿ ತೊಡಕಿ ಕೊಳಲಿದೆ,
ಕರೆಯು ಸಾರೆ ದಾರಿಯು ನೀ ತೋರಾ ! || ೧ ||

ಹಾಡು (ಪುಟ ೪೫)

ರಾಗ—ಜೋಗಿಯಾ — ಝುಂಪೆತಾಳ

ಶ್ರಮವಾ ತಾರಿಸಿ ಕಾಯೇ ತಾಯೇ,
ಪ್ರಮೋದಾಲಯೇ ಶಾಂತಿಯನೀಯೇ ! ॥ ಪಲ್ಲ ॥

ಕಾಣದು ದಾರಿ । ಕಂಗಳ ಮೀರಿ
ಮಾಣಿಸಿದನು ಚಿರಜ್ಯೋತಿಯು ಬೀರಿ ! ॥ ೧ ॥

— ಆನಂದಕಂದ

ಮುಂದೆ ಬರಲಿರುವ ಗ್ರಂಥಗಳು

೧ **ವೇಣುವಮಾನ** (ಚೆಕಾವ್ ಇವರ ನಾಟಕದ ರೂಪಾಂತರ)

ಬರೆದವರು : ಶ್ರೀಮತಿ ಪಿ. ಸೀತಾದೇವಿ.

೨ **ಭಾಗ್ಯಶ್ರೀ** (ನಾಲ್ಕಂಕಿನ ಸಾಮಾಜಿಕ ಸಂಗೀತ ನಾಟಕ)

ಬರೆದವರು : ಶ್ರೀ. ಬೇಂದ್ರೆ ಲಕ್ಷ್ಮಣರಾ[illegible]ರು.

೩ **ಮುನಿಯನ ಮಾದರಿ** (ಹಳ್ಳಿಯ ಜೀವನವನ್ನು ಚಿತ್ರಿಸುವ ರಮ್ಯ ಕಾದಂಬರಿ)

ಬರೆದವರು : ಶ್ರೀ. ಕೆ. ಎ. ಎನ್. ರಾವ್

೪ **ಬಹುಮಾನ ಪಡೆದ ಬರೆಹಗಳು**

(ಏಕಾಂಕ-ಕತೆ-ವ್ಯಕ್ತಿ-ಚಿತ್ರಗಳ ಸಂಗ್ರಹ)

೫ **ಮಗು** (ಸಾಮಾಜಿಕ ನಾಟಕ)

ಬರೆದವರು : ಕೆ. ಎ. ಎನ್. ರಾವ್.